
# ಆಲ್ಫ್ರೆಡ್ ನೊಬೆಲ್

ಸಿಡ್ನಿ ಶ್ರೀನಿವಾಸ್



# ೧. ದಿವ್ಯ ಪಶ್ಚಾತ್ತಾಪ

ಇಂದು ನೊಬೆಲ್ ಬಹುಮಾನಗಳ ಬಗ್ಗೆ ಅರಿಯದವರು ಅಪರೂಪ. ಸಾಹಿತ್ಯ, ಭೌತಶಾಸ್ತ್ರ, ರಸಾಯನ ಶಾಸ್ತ್ರ, ವೈದ್ಯಕೀಯ ಕ್ಷೇತ್ರ, ಶಾಂತಿ, ಅರ್ಥಶಾಸ್ತ್ರಗಳಲ್ಲಿ ಅದ್ವಿತೀಯ ಮತ್ತು ಗಣನೀಯ ಸಾಧನೆ ಮಾಡಿದವರಿಗೆ ನೀಡಲಾಗುವ ಈ ಪ್ರಶಸ್ತಿ ಯಾವುದೇ ವ್ಯಕ್ತಿ ಗಳಿಸಬಹುದಾದ ಅತ್ಯಂತ ದೊಡ್ಡ ಗೌರವ. ಪ್ರತಿ ವರ್ಷ ಡಿಸೆಂಬರ್ ೧೦ರಂದು ವಿತರಣೆಗೊಳ್ಳುವ ಈ ಬಹುಮಾನ  ಸೆಪ್ಟೆಂಬರ್, ಅಕ್ಟೋಬರ್ ತಿಂಗಳುಗಳಿಂದಲೇ ವಿಶ್ವದ ಗಮನ ಸೆಳೆಯುತ್ತದೆ. ಸಾಮಾನ್ಯ ಮಂದಿ ಸ್ಟಾಕ್ ಹೋಮಿನಿಂದ ಬರುವ ಘೋಷಣೆಯನ್ನು ಎದುರುನೋಡುತ್ತಾರೆ - ಈ ವರ್ಷ ಯಾರು ಯಾರಿಗೆ ಬಹುಮಾನ?   ಇಂದು ಯಾವುದೇ ದೇಶ ಅಥವಾ ಸಂಸ್ಥೆ ಗಳಿಸಿರುವ ನೊಬೆಲ್ ಬಹುಮಾನಗಳ ಸಂಖ್ಯೆ ಅದರ ಮೌಲ್ಯಮಾಪಕವಾಗಿ ಹೋಗಿದೆ, ಒಂದು ಬಗೆಯಲ್ಲಿ ಒಲಂಪಿಕ್ ಪದಕಗಳಂತೆ. ಕೇಂಬ್ರಿಡ್ಜ್ ವಿಶ್ವವಿದ್ಯಾಲಯ ಈ ವರೆಗೆ ೯೧ ಬಹುಮಾನಗಳನ್ನು ಪಡೆದಿದೆಯಲ್ಲದೆ ಅದರ ಪ್ರಖ್ಯಾತ ಟ್ರಿನಿಟಿ ಕಾಲೇಜು (ಇಲ್ಲಿಯೇ ನಮ್ಮ ಶ್ರೀನಿವಾಸ ರಾಮಾನುಜನ್ ಕೆಲವು ವರ್ಷಗಳ ಕಾಲ ಗಣಿತ ಸಂಶೋಧನೆಯನ್ನು ನಡೆಸಿದ್ದು, ಐಸಾಕ್ ನ್ಯೂಟನ್ ಪ್ರಾಧ್ಯಾಪಕನಾಗಿದ್ದದ್ದು ಇಲ್ಲಿಯೇ) ಇವುಗಳಲ್ಲಿ ೩೨ನ್ನು ಪಡೆದಿದೆ. ದೊಡ್ಡ ವಿಶ್ವವಿದ್ಯಾಲಯಗಳು ಮತ್ತು ಸಂಸ್ಥೆಗಳು ತಮ್ಮಲ್ಲಿರುವ ಬಹುಮಾನಿತರ ಪಟ್ಟಿಯನ್ನು ಹೆಮ್ಮೆಯಿಂದ ಪ್ರದರ್ಶಿಸುತ್ತವೆ.

ವಿಜ್ಞಾನಿಗಳೂ ಘೋಷಣೆಯನ್ನು ಎದುರು ನೋಡುತ್ತಾರೆ. ಬಹುಮಾನವನ್ನು ನಿರೀಕ್ಷಿಸಿರುವವರು - ಈ ವರ್ಷವಾದರೂ ನನಗೆ ಬಂದೀತೇ ಎಂದು ತವಕ ಪಡುತ್ತಾರೆ. "ಇದೊಂದು ಸಂಶೋಧನೆಯನ್ನು ಯಶಸ್ವಿಯಾಗಿ ಮುಗಿಸಿದರೆ ನನಗೆ ನೊಬೆಲ್ ಬಹುಮಾನ ಗ್ಯಾರೆಂಟಿ ಎಂದು ಖ್ಯಾತ ವಿಜ್ಞಾನಿ ಸ್ಟೀವನ್ ಹಾಕಿನ್ಸ್ ಹೇಳಿರುವುದನ್ನು ಸ್ಮರಿಸಬಹುದು.

ಇಷ್ಟು ಹಿರಿಮೆಯನ್ನು ಪಡೆದ ನೊಬೆಲ್ ಬಹುಮಾನದ ಹಿನ್ನೆಲೆಯಾದರೂ ಏನು ಎಂದು ಯೋಚಿಸಿನೋಡಿದರೆ ಅಲ್ಲಡಗಿರಿವುದು ಆಲ್ಫ್ರೆಡ್ ನೊಬೆಲ್ (೧೮೩೩-೧೮೯೬) ಪಟ್ಟ ದಿವ್ಯ ಪಶ್ಚಾತ್ತಾಪ ಎಂದಾಗ ಆಶ್ಚರ್ಯ ಖಂಡಿತ.

ಈಗ ೧೮೮೮ಕ್ಕೆ ಹಿಂದಿರುಗೋಣ. ಅಗ ಆಲ್ಫ್ರೆಡ್ ನೊಬೆಲ್ ಪ್ಯಾರಿಸ್ಸಿನಲ್ಲಿ ವಾಸಿಸುತ್ತಿದ್ದ. ಒಂದು ದಿನ ಅವನ ನಿತ್ಯ ಅಭ್ಯಾಸದಂತೆ ವೃತ್ತಪತ್ರಿಕೆಯೊಂದನ್ನು ತೆರೆದು ನೋಡುತ್ತಾನೆ. ಅದರ  ತಲೆಬರಹ - *Le marchand de la mort est mort*, (ಸಾವಿನ ವ್ಯಾಪಾರಿ ನಿಧನನಾದ) ಎಂದಿತ್ತು. ನೋಡಿ ಆಲ್ಫ್ರೆಡ್ ದಿಗ್ಭ್ರಮೆಗೊಂಡ. ಅದು ಆ ಪತ್ರಿಕೆ ಅವನಿಗೇ ಅರ್ಪಿಸಿದ್ದ ಶ್ರದ್ಧಾಂಜಲಿ! ನಿಜ, ಅವನ ಅಣ್ಣ ಲುಡ್ವಿಗ್ ನೊಬೆಲ್ ಹಿಂದಿನ ದಿನ  ಫ್ರಾನ್ಸಿನ ಕ್ಯಾನ್   ಎಂಬಲ್ಲಿ  ಮರಣಹೊಂದಿದ್ದ. (ಅವನು ರಷ್ಯಾದ ಸೈಂಟ್ ಪೀಟರ್ಸ್ ಬರ್ಗಿನಲ್ಲಿ ತನ್ನ ಕಾರ್ಖಾನೆಗಳನ್ನು  ನಡೆಸುತ್ತಿದ್ದ). ಆದರೆ ಆ ಪತ್ರಿಕೆ ನಿಧನನಾದವನು ಆಲ್ಫ್ರೆಡ್ ನೊಬೆಲ್ ಎಂದು ಭಾವಿಸಿ ಅವನ ಬಗ್ಗೆ ಬರೆದಿತ್ತು.  ತನ್ನ ಮೇಲಿನ ಶ್ರದ್ಧಾಂಜಲಿಯನ್ನು ತಾನೇ ಓದುವ ಭಾಗ್ಯ ಅವನಿಗೆ! ಮುಂದುವರೆದು ಆ ಪತ್ರಿಕೆ ನುಡಿದಿತ್ತು - "ಹಿಂದೆಂದಿಗಿಂತಲೂ  ತ್ವರಿತವಾಗಿ ಅಪಾರ ಜನರನ್ನು ಕೊಲ್ಲಬಲ್ಲ ಮಾರ್ಗಗಳನ್ನು ಕಂಡುಹಿಡಿದ ಆಲ್ಫ್ರೆಡ್ ನೊಬೆಲ್ ನೆನ್ನೆ ನಿಧನನಾದ." ಚಿಂತೆಗೀಡಾದ ನೊಬೆಲ್. "ನನ್ನಮೇಲೆ ಜನರಿಗಿರುವ ಅಭಿಪ್ರಾಯ ಇದೇನಾ ಹಾಗಾದರೆ?" ತಾನು ತನ್ನ ಬಗ್ಗೆ ಏನೇನೋ ಅಭಿಪ್ರಾಯಗಳನ್ನು ಹೊಂದಿದ್ದ. "ನಾನೊಬ್ಬ ಶಾಂತಿದೂತ, ರಸ್ತೆ, ಸೇತುವೆ, ರೈಲುಮಾರ್ಗ, ಸುರಂಗಗಳ ನಿರ್ಮಾಣಕ್ಕೆ ಅನುಕೂಲವಾಗುವಂತೆ ಸಿಡಿಮದ್ದು, ಡೈನಮೈಟ್ ಗಳನ್ನು ಕಂಡುಹಿಡಿದಿದ್ದೇನೆ." ಇದು ಅವನ ನಂಬಿಕೆ. ಆದರೆ ಈಗ ಅರಿವಾಯಿತು - ಜನ ನನ್ನನ್ನು ಕಂಡಿರುವುದು ಪೂರ್ತಿಯಾಗಿ ಬೇರೆ ರೀತಿಯಲ್ಲಿ ಎನ್ನುವಂತಿದೆ. ಆದರೆ ಜನರ ಭಾವನೆ ತಪ್ಪೇನಲ್ಲ. ಸಿಡಿಮದ್ದುಗಳು ಸಮಾಜಕಲ್ಯಾಣಕ್ಕೆ ನೆರವಾದಷ್ಟೇ ಯುದ್ಧಕ್ಕೂ

ನೆರವಾಗಿದ್ದವು. ಇದು ನೊಬೆಲನಿಗೆ ತಿಳಿಯದ ವಿಷಯವೇನಲ್ಲ. ತಾನೇ ಸೈನ್ಯಗಳಿಗೆ ಸಾಕಷ್ಟು ಸಿಡಿಮದ್ದನ್ನು ಸರಬರಾಜು ಮಾಡಿದ್ದ. ಇವನ್ನು ತಯಾರಿಸುವ ಅನೇಕಾನೇಕ ಕಾರ್ಖಾನೆಗಳನ್ನು ತೆರೆದಿದ್ದ. ಆದರೆ ಈಗ ಯೋಚನೆ ಮಾಡಬೇಕಾದ ಸಮಯ ಮೂಡಿಬಂತು.

ಇದಕ್ಕೆ ದ್ಯೋತಕವಾಗಿ ಅವನ ಗೆಳತಿ ಮತ್ತು ಶಾಂತಿಯ ಸೇನಾನಿ ಬೆರ್ಥಾ ವಾನ್ ಸಟ್ನರ್ (Bertha von Suttner)ಅವನಿಗೆ ಆಗಿದಾಂಗ್ಗೆ ಹೇಳುತ್ತಿದ್ದ ಕಿವಿಮಾತು - "ಅಪಾರ ಹಣ ಗಳಿಸಿದ್ದೀಯ. ಪ್ರಪಂಚದಲ್ಲಿ ಶಾಂತಿಗಾಗಿ ಹೆಣಗಾಡುತ್ತಿರುವ ಹಲವಾರು ಜನರಿದ್ದಾರೆ. ಅವರನ್ನು ನೀನು ಬೆಂಬಲಿಸ ಬೇಕು; ಅವರಿಗೆ ನೆರವು ನೀಡಬೇಕು". ಇದರ ಪರಿಣಾಮವಾಗಿ ಮುಂದೆ ಆಕೆಗೆ ೧೯೦೫ರ ಶಾಂತಿಯ ನೊಬೆಲ್ ಬಹುಮಾನವೂ ದೊರಕಿತು.

ಆದ ಜ್ಞಾನೋದಯ ಮತ್ತು ಗೆಳತಿಯ ಬುದ್ಧಿವಾದ ನೊಬೆಲನನ್ನು ದೀರ್ಘ ಆಲೋಚನೆಗೆ ಗುರಿ ಮಾಡಿತು; ಒಂದು ನಿರ್ಣಯಕ್ಕೆ ಬಂದ. ಆದರೆ ಯಾರಿಗೂ ಏನನ್ನೂ ಹೇಳಲಿಲ್ಲ, ಯಾವ ಸುಳಿವನ್ನೂ ನೀಡಲಿಲ್ಲ. ಸಾಯುವ ಒಂದು ವರ್ಷ ಮುಂಚೆ, ಅಂದರೆ ೧೮೯೫ರಲ್ಲಿ ತನ್ನ ಚರಿತ್ರಾರ್ಹ ಉಯಿಲನ್ನು ಬರೆದಿಟ್ಟ. ಇದಕ್ಕೆ ಮುಂಚೆಯೂ ಅವನು ಒಂದೆರಡು ಬಾರಿ ಉಯಿಲನ್ನು ಬರೆದದ್ದುಂಟು, ಆದರೆ ಅವನ್ನೆಲ್ಲಾ ವಜ ಮಾಡಿ ಕಡೆಯದನ್ನು ಬರೆದ. ಇದರ ಪರಿಣಾಮವೇ ನೊಬೆಲ್ ಬಹುಮಾನಗಳು. ವಿವರಗಳನ್ನು ಮುಂದೆ ಚರ್ಚಿಸೋಣ.

ಯೂರೋಪಿನ ಮುಖ್ಯನಗರಗಳಲ್ಲೆಲ್ಲಾ ತನ್ನ ಚಕ್ರಾಧಿಪತ್ಯವನ್ನು ಸ್ಥಾಪಿಸಿದ್ದ ನೊಬೆಲ್. ಸ್ವೀಡನ್, ಫ್ರಾನ್ಸ್, ರಷ್ಯ, ಇಂಗ್ಲೆಂಡ್, ಇಟಲಿಗಳ ಮುಖ್ಯ ನಗರಗಳಲ್ಲಿ ತಾನು ಅಥವಾ ತನ್ನ ಸಹೋದರರು ಸ್ಥಾಪಿಸಿದ್ದ ಕಾರ್ಖಾನೆಗಳಿದ್ದವು. ೧೮೭೩ರಲ್ಲಿ ಅವನು ೧೪ ದೇಶಗಳಲ್ಲಿದ್ದ ೧೬ ಡೈನಮೈಟ್ ಕಾರ್ಖಾನೆಗಳಲ್ಲಿ ಪಾಲುದಾರನಾಗಿದ್ದ. ನಿಜಕ್ಕೂ ನೊಬೆಲ್ ತಾಂತ್ರಿಕ ಅನ್ವೇಷಣೆ, ತಯಾರಿಕೆ, ಉದ್ದಿಮಯನ್ನು ಸ್ಥಾಪಿಸಿ ವೃದ್ಧಿಸುವುದು ಇವುಗಳಲ್ಲಿ ನಿಸ್ಸೀಮನಾಗಿದ್ದ. ಮುಟ್ಟಿದ್ದೆಲ್ಲಾ ಚಿನ್ನ ಅವನ ಪಾಲಿಗೆ. ನೊಬೆಲ್ ಬಹುಮಾನವೆಂಬುದು ಇರದೇ ಹೋಗಿದ್ದರೂ ಅವನು ೧೯ನೇ ಶತಮಾನದ ತಾಂತ್ರಿಕ ಮುತ್ಸದ್ದಿಯಾಗಿ ಹೆಸರು ಪಡೆಯುತ್ತಿದ್ದ ಎಂಬುದು ನಿರ್ವಿವಾದ. "ವರ್ಷದಲ್ಲಿ ನನಗೆ ೩೦೦ ಹೊಸ ಐಡಿಯಾಗಳು ಬಂದು ಅವುಗಳಲ್ಲಿ ಒಂದು ಫಲಿಸಿದರೂ ನನಗೆ ತೃಪ್ತಿ" ಎಂದ ಅವನು ತನ್ನ ಜೀವನದಲ್ಲಿ ೩೫೫ ಪೇಟೆಂಟುಗಳನ್ನು ಗಳಿಸಿದ್ದ.


೧೮೬೪ರಲ್ಲಿ ನೈಟ್ರೋಗ್ಲಿಸೆರಿನ್ (nitroglycerine) ಮತ್ತು ಗನ್ ಪೌಡರುಗಳ ಮಿಶ್ರಣವನ್ನು ಕಂಡುಹಿಡಿದ ಆಲ್ಫ್ರೆಡ್ ಸಿಡಿಮದ್ದುಗಳ ತಯಾರಿಕೆಯಲ್ಲಿ ಒಂದು ಹೊಸ ಅಧ್ಯಾಯವನ್ನು ತೆರೆದಿದ್ದ. ಆ ಕೈಗಾರಿಕೆಯ ಎಲ್ಲೆಗಳನ್ನು ದಾಟಿ ಹೊಸ ದಿಕ್ಕುಗಳನ್ನು ತೋರಿಸಿದ್ದ. ಅವನು ತನ್ನ ಜೀವನದ ಉದ್ದಕ್ಕೂ ತತ್ವ (theory) ಮತ್ತು ಬಳಕೆ (application) ಇವುಗಳನ್ನು ಒಂದುಗೂಡಿಸುವ ಸಾಹಸ ಮಾಡಿದ. ನೈಟ್ರೋಗ್ಲಿಸೆರಿನ್ ಸ್ಫೋಟಕ ವಸ್ತು ಎಂಬ ತತ್ವ ಮತ್ತು ಅದನ್ನು ಪರಿಣಾಮಕಾರಿಯಾಗಿ ಬಳಸುವುದರ ಮಧ್ಯೆ ಇದ್ದ ಅಂತರವನ್ನು ಇಲ್ಲವಾಗಿಸಿದ ಅವನು. ಅಸಾಧ್ಯ ಎನಿಸಿದ್ದನ್ನು ಸಾಧ್ಯ ಎಂದು ತೋರಿಸಿಕೊಟ್ಟ. ಅವನ ಕೊಡುಗೆ ಸ್ಫೋಟಕ ವಸ್ತುಗಳನ್ನು ಕುರಿತ ಅನ್ವೇಷಣೆಗಳಲ್ಲಿ ಅದ್ವಿತೀಯವಾದದ್ದು ಎನ್ನಲಾಗಿದೆ. ಅವನು ಕಂಡುಹಿಡಿದ ಡೆಟೊನೇಷನ್ ಕ್ಯಾಪ್ (detonation cap) ಸಿಡಿಮದ್ದಿನ ಅನ್ವೇಷಣೆಯಲ್ಲಿ ಅತ್ಯಂತ ಹಿರಿದಾದದ್ದು ಎಂದು ಭಾವಿಸಲಾಗಿದೆ.

ನಂತರ ಡೆಟೋನೇಟರ್ (ಸ್ಫೋಟಕ), ಡೈನಮೈಟ್, ಆಸ್ಫೋಟಿಸುವ ಜೆಲಾಟಿನ್, ಹೊಗೆರಹಿತ ಸಿಡಿಮದ್ದು ಇವುಗಳನ್ನು ಕಂಡುಹಿಡಿದು, ತಯಾರಿಸಿ, ಇವನ್ನು ಮಾರುವ ಉದ್ದಿಮೆಗಳನ್ನು ರೂಪಿಸಿದ ಕೀರ್ತಿ ಅವನದು. ಹೀಗಾಗಿ ಅವನು ಗಳಿಸಿದ ಹಣ ಅಪಾರವಾದದ್ದು ಎಂದು ಹೇಳಬೇಕಾಗಿಯೇ ಇಲ್ಲ.

ಅವನ ದೂರದೃಷ್ಟಿ ಮತ್ತು ಚುರುಕುತನ ಎಷ್ಟು ಜನರಿಗೆ ಇದ್ದೀತು? ಒಮ್ಮೆ ಪ್ಯಾರಿಸ್ಸಿನ ಅಪಾರ್ಟ್ ಮೆಂಟಿನಲ್ಲಿ ಮಲಗಿದ್ದಾಗ ಘಾಯವಾಗಿದ್ದ ಕೈಬೆರಳು ನೋಯಲಾರಂಭಿಸಿತು. ಕೂಡಲೆ ಕೆಳಗಿದ್ದ ತನ್ನ ಪ್ರಯೋಗಶಾಲೆಗೆ ಹೋಗಿ ಬೆರಳ ಮೇಲೆ ಸ್ವಲ್ಪ ಕೊಲೊಡಿಯೋನ್ (collodion) ಲೇಪಿಸಿಕೊಂಡ. ಸ್ವಲ್ಪ ಹೊತ್ತಿನ ನಂತರ ನೋವು ಹೆಚ್ಚಾಯಿತು. ಮತ್ತಷ್ಟು ಕೊಲೋಡಿಯೋನ್ ಲೇಪಿಸಿಕೊಂಡ. ಬೆರಳ ಮೇಲೆ ಯಾವುದೋ ರಾಸಯನಿಕ ವಸ್ತು ಘನೀಕರಿಸಿತ್ತು. ನೈಟ್ರೋಗ್ಲಿಸೆರಿನ್ನಿನಲ್ಲಿ ಅದು ಕರಗಿಹೋಗುತ್ತಿತ್ತು. ಕೊಲೋಡಿಯೋನ್ ಮತ್ತು ನೈಟ್ರೋಗ್ಲಿಸೆರಿನ್ ಇವುಗಳ ಪ್ರಮಾಣವನ್ನು ಬದಲಾಯಿಸುತ್ತಾ ಬರುವ ಫಲಿತಾಂಶವೇನು ಎಂದು ವಿಕ್ಷಿಸುತ್ತಾ ಬಂದ. ಪರಿಣಾಮ, ಚರ್ಮದಂತೆ ಬಾಳಿಕೆಬರುವ ಮತ್ತು ರಬ್ಬರಿನಂತೆ ಬಾಗುವ ಹೊಸ ವಸ್ತು! ಇಂತಹ ಸಂಗತಿಗಳು ಅವನ ಜೀವದಲ್ಲಿ ಎಷ್ಟೋ!

ವಿಚಿತ್ರ ಜೀವನ ಆಲ್ಫ್ರೆಡ್ ನೊಬೆಲನದು. ಕೊನೆಗೂ ಯಾರನ್ನೂ ಮದುವೆಯಾಗಲಿಲ್ಲ. ಏಕಾಂಗಿಯಾಗಿ ಉಳಿದ. ಇದರ ಬಗ್ಗೆ ಅವನು ಅಗಾಗ್ಗೆ ಕೊರಗಿದ್ದೂ ಉಂಟು. ಕೊನೆಯಲ್ಲಿ ಅವನಿದ್ದದ್ದು ಇಟಲಿಯ ಸ್ಯಾನ್ ರಿಮೋ ಪಟ್ಟಣದಲ್ಲಿ. ದೊಡ್ಡ ವಿಲಾದಲ್ಲಿ ಅವನು ಮತ್ತು ಅವನ ಸೇವಕರು ಮಾತ್ರ.

ಆದರೆ ಇವನ್ನೆಲ್ಲಾ ಇಂದು ಜನ ಮರೆತಿದ್ದಾರೆ. ಬದಲಾಗಿ ಅವನ ಬಗ್ಗೆ ಫ್ರೆಂಚ್ ಪತ್ರಿಕೆಯೊಂದು ಮುಂದೆ ಹೇಳಿದಂತೆ ನೊಬೆಲ್ ಬಹುಮಾನಗಳ ಕಾರಣದಿಂದ ಅವನ ಹೆಸರು ಅಮರವಾಗಿದೆ. ಜಾರ್ಜ್ ಬರ್ನಾರ್ಡ್ ಷಾ ಅವರು ಹೇಳಿರುವ ಮಾತು ಗಮನೀಯವಾದದ್ದು - "ಡೈನಮೈಟನ್ನು ಕಂಡುಹಿಡಿದಿದ್ದಕ್ಕೆ ಆಲ್ಫ್ರೆಡ್ ನೊಬೆಲನನ್ನು ಕ್ಷಮಿಸುತ್ತೇನೆ. ಆದರೆ ನೊಬೆಲ್ ಬಹುಮಾನಗಳನ್ನು ಸಂಸ್ಥಾಪಿಸುವುದು ಮನುಷ್ಯ ರೂಪದ ಪಿಶಾಚಿಯಿಂದ ಮಾತ್ರ ಸಾಧ್ಯ." ಅವನ ಬದುಕು ಮತ್ತು ಸಾಧನೆಗಳನ್ನು ಸ್ಥೂಲವಾಗಿ ಪರಿಚಯ ಮಾಡಿಕೊಡುವ ಪ್ರಯತ್ನ ಇದು.




ಎಲ್ಲ ರಾಷ್ಟ್ರಗಳು ಒಂದುಗೂಡಿ ದುರಾಕ್ರಮಿಯನ್ನು ಎದುರಿಸುವಂತೆ ಆಗುತ್ತದೆ ಮತ್ತು ಆಗಿಯೇ ತೀರುತ್ತದೆ. ಆಗ ಯುದ್ಧ ಅಸಾಧ್ಯವಾಗಿ ತೀರಾ ದೃಷ್ಟ ಮತ್ತು ಆಯುಕ್ತ ಶಕ್ತಿಗಳೂ ಮಧ್ಯಸ್ತಿಕೆಗೆ ಶರಣಾಗುತ್ತಾರೆ; ಇಲ್ಲವಾದರೆ ಸುಮ್ಮನಾಗುತ್ತಾರೆ. - ಅಲ್ಫ್ರೆಡ್ ನೊಬೆಲ್

# ೨. ಬಾಲ್ಯ ಮತ್ತು ಶಿಕ್ಷಣ

ತಂದೆ ಇಮಾನ್ಯುಯೆಲ್ ನೊಬೆಲ್, ತಾಯಿ ಆಂಡ್ರಿಯೆಟ್ಟ ಆಲ್ಸೆಲ್; ವಾಸ ಸ್ವೀಡನ್ನಿನ ರಾಜಧಾನಿ ಸ್ಟಾಕ್ ಹೋಮಿನ ಉತ್ತರಕ್ಕಿದ್ದ ಮನೆಯೊಂದರಲ್ಲಿ. ಈಗ ಆ ಸ್ಥಳ ಸ್ಟಾಕ್ ಹೋಮಿನ ಮಧ್ಯಭಾಗ ಎನಿಸಿದೆ. ಬಡವರು ಎಂದು ಒತ್ತಿ ಹೇಳಬೇಕಾಗಿಲ್ಲ. ಇವರ ನಾಲ್ಕನೆಯ ಸಂತಾನವಾದ ಆಲ್ಫ್ರೆಡ್ ಬೆರ್ನ್ಹಾರ್ಡ್ ನೊಬೆಲ್ ಜನಿಸಿದ್ದು ೧೮೩೩ರ ಅಕ್ಟೋಬರ್ ೨೧ರಂದು. ಅವನ ದೊಡ್ಡ ಅಣ್ಣ ಎಮಾನ್ಯುಯೆಲ್ (೧೮೨೮) ಹುಟ್ಟಿದ ಒಂದು ವರ್ಷದಲ್ಲಿಯೇ ತೀರಿಹೋಗಿದ್ದ. ಹೀಗಾಗಿ ಉಳಿದವರು ರಾಬರ್ಟ್ (೧೮೨೯), ಲುಡ್ವಿಗ್ (೧೮೩೧) ಮತ್ತು ಆಲ್ಫ್ರೆಡ್. ಹುಟ್ಟಿನಿಂದಲೇ ರೋಗಗ್ರಸ್ತನಾಗಿದ್ದ ಆಲ್ಫ್ರೆಡ್ ಉಳಿದುಕೊಂಡಿದ್ದೇ ದೊಡ್ಡ ಸಾಧನೆ.



ಬಾಲಕ ಅಲ್ಫ್ರೆಡ್ ನೊಬೆಲ್

ಸದಾ ಕೊರೆಯುವ ಚಳಿ, ಮನೆಯಲ್ಲಿ ಕಾಯಿಸಿಕೊಳ್ಳುವ ಉಪಕರಣಗಳೆಂದರೆ ಒಂದು ಚಿಕ್ಕ ಅಗ್ಗಿಷ್ಟಿಕೆ ಮತ್ತು ಒಂದು ಒಲೆ. ಹೊಗೆಪೂರಿತ ಎಣ್ಣೆ ದೀಪ; ವಿದ್ಯುತ್ ದೀಪ ಬರಲು ಇನ್ನೂ ಐವತ್ತು ವರ್ಷ ಬೇಕಾಯಿತು. ಯಾವಾಗಲೂ ಗಂಧಕದ ಹೊಗೆ ಮನೆಯೊಳಗೆ, ಮಕ್ಕಳಿಗೆ ಬಿಡದ ಕೆಮ್ಮು. ಮನೆಯ ಹಿಂದೆ ಮನೆಯ ಕಸವನ್ನು ಗುಡ್ಡೆ ಹಾಕಲಾಗಿ ಇಲಿ, ಹೆಗ್ಗಣಗಳಿಗೆ ಸುಗ್ಗಿಯಾಗಿತ್ತು.




ತಂದೆ ಇಮ್ಯಾನ್ಯುಯೆಲ್ ನೊಬೆಲ್



ತಾಯಿ ಆಂಡ್ರಿಯೆಟ್ಟ

ಮಿಕ್ಕವರ ಹಾಗೆ ಮಾಂಸ ತಿನ್ನಲು ಹಣವಿಲ್ಲ; ಸದಾ ಒಣಗಿಸಿದ ಕಾಡ್ ಮೀನೇ ಗತಿ. ಮನೆಯ ಸುತ್ತಾ ಕೊಳಚೆಯಾಗಿ ಜನರಿಗೆ ಒಂದಲ್ಲ ಒಂದು ರೋಗ ತಗಲುತ್ತಲೇ ಇದ್ದು ಹುಟ್ಟುವವರಿಗಿಂತ ಸಾಯುವವರ ಸಂಖ್ಯೆಯೇ ಹೆಚ್ಚಾಗಿತ್ತು. ಸಾವಿರಾರು ಮಕ್ಕಳು ಮರಣಕ್ಕೀಡಾದರು.

೧೮೦೧ರಲ್ಲಿ ಜನಿಸಿದ ತಂದೆ ಇಮಾನ್ಯುಯೆಲ್ ನ ಒಲವು ಎಂಜಿನಿಯರಿಂಗ್, ಡ್ರಾಯಿಂಗ್ ಮುಂತಾದುವುಗಳತ್ತ, ಆದರೆ ಆಗ ತಾಂತ್ರಿಕ ವಿದ್ಯೆಯನ್ನು ಬೋಧಿಸುವ  ಸಂಸ್ಥೆ ಗಳಾವೂ ಇರಲಿಲ್ಲ. ಹೀಗಾಗಿ ಅವನಿಗೆ ಸ್ವಂತ ಪರಿಶ್ರಮವೇ ಆಧಾರವಾಯಿತು. ಹಡಗುಗಳಲ್ಲಿ ಕೆಲಸ ಮಾಡಲಾರಂಭಿಸಿದ ಅವನು ಕೊನೆಗೆ ಕಟ್ಟಡನಿರ್ಮಾಣದಲ್ಲಿ ಪರಿಣತನೆನಿಸಿದ. ಅಲ್ಲದೆ ತಯಾರಿಕೆ ಮತ್ತು ಅನ್ವೇಷಣೆ (invention)ಗಳಲ್ಲಿಯೂ ನಿಪುಣನಾದ. ಸ್ವೀಡನ್ನಿನಲ್ಲಿ ಸೇತುವೆ, ರಸ್ತೆ ಮತ್ತು ಕಟ್ಟಡಗಳ ನಿರ್ಮಾಣಕ್ಕೆ ಕೈಹಾಕಿದ. ಆದರೆ ಮೂಲತಃ ಬಡವನಾದ ಆತ ಇಂತಹ ಬೃಹತ್ ಯೋಜನೆಗಳನ್ನು ಸರಿತೂಗಿಸುವುದು ಕಷ್ಟ ಎನಿಸಿತು. ಆಲ್ಫ್ರೆಡ್ ಹುಟ್ಟುವುದಕ್ಕೆ ಮೊದಲೇ ಅವನಿಗಾಗಿ ಅನೇಕ ಸಾಮಗ್ರಿಗಳನ್ನು ತರುತ್ತಿದ್ದ ಮೂರು ಹಡಗುಗಳು ಸಮುದ್ರದಲ್ಲಿ ಮುಳುಗಿ ಇಮಾನ್ಯುಯೆಲ್ಲನಿಗೆ ಅಪಾರ ನಷ್ಟವಾಯಿತು.  ೧೮೩೩ರಲ್ಲಿ ವಿಧಿಯಿಲ್ಲದೆ ದಿವಾಳಿತನಕ್ಕೆ ಅರ್ಜಿ ಹಾಕಿದ. ಅವನ ಸಾಲದ ಮೊತ್ತ ಸುಮಾರು ೧೫,೦೦೦ ಸ್ವೀಡಿಷ್ ಡಾಲರುಗಳು. ಆದರೆ ಅವನ ಮನೆಯ ಪಾತ್ರೆ ಪರಟೆ ಮತ್ತಿತರ ಸಾಮಾನುಗಳು ಮಾರಿದರೆ ೩೦ ಡಾಲರುಗಳು ಕೂಡ ಸಿಕ್ಕುತ್ತಿರಲಿಲ್ಲ. ದಿವಾಳಿತನ ಪ್ರಾಪ್ತವಾದರೂ ಇಮಾನ್ಯುಯೆಲ್ ಸಾಲವನ್ನು ತೀರಿಸಬೇಕಾಯಿತು. ಇದು ಸಾಧ್ಯವಾಗಿದ್ದು ೧೮೫೦ರಲ್ಲಿ. ಈ ಮಧ್ಯೆ ಹಣ ನೀಡಿದವರು ಇಮಾನ್ಯುಯೆಲನನ್ನು ಬಂಧಿಸುವ ಪ್ರಯತ್ನವನ್ನೂ ಮಾಡಿದ್ದುಂಟು. ಸ್ವೀಡನ್ನಿನಲ್ಲಿ ಇಂತಹ ಬವಣೆಗೆ ಸಿಕ್ಕಿಕೊಂಡ ನಾನಾ ಸ್ವಯಂ ಉದ್ಯೋಗಿಗಳಿದ್ದರು.



ಆಲ್ಫ್ರೆಡ್ ನೊಬೆಲ್ ಹುಟ್ಟಿದ ಮನೆ

ಪರಿಸ್ಥಿತಿ ಹೀಗಿದ್ದರೂ ಇಮಾನ್ಯುಯೆಲ್ ಬೇರೆ ಕೆಲಸ ಹುಡುಕುವ ಪ್ರಯತ್ನ ಮಾಡಲಿಲ್ಲ. ತನ್ನ ಕನಸು, ತನ್ನ ಕಾಣ್ಕೆ, ಅನ್ವೇಷಣೆ ಇವುಗಳಲ್ಲಿಯೇ ಮುಳುಗಿಹೋಗಿದ್ದ. ಅತ್ಯಂತ ಧೈರ್ಯಶಾಲಿಯಾಗಿದ್ದ ಅವನು ಅಷ್ಟೇ ಬುದ್ಧಿವಂತನೂ ಆಗಿದ್ದ. ಆತ್ಮವಿಶ್ವಾಸ, ಕೈಹಿಡಿದದ್ದನ್ನು ಸಾಧಿಸಿಯೇ ತೀರುತ್ತೇನೆ ಎಂಬ ಛಲ ಅವನಿಗೆ. ಇವೆಲ್ಲವನ್ನೂ ಅರಿತಿದ್ದ ಹೆಂಡತಿ ಆಂಡ್ರಿಯೆಟ್ಟ ಗಂಡನಿಗೆ ಬೆಂಬಲವಾಗಿ ನಿಂತಳು. ಅವಳ ಒಂದೇ ಚಿಂತೆ ಎಂದರೆ - ಗಂಡನಿಗೆ ತನ್ನ ಕೆಲಸ ಮಾಡಿಕೊಳ್ಳಲು ಪ್ರತ್ಯೇಕ ಕೋಣೆ ಇಲ್ಲವಲ್ಲಾ!  ತನ್ನ ಹಾಗೇ ಇತರೆ ಉದ್ಯೋಗಗಳಲ್ಲಿ ನಿರತರಾದ ಸ್ನೇಹಿತರು ಇಮಾನ್ಯುಯೆಲ್ ಮತ್ತು ಕುಟುಂಬವನ್ನು ಭೋಜನ, ಪಾನೀಯಗಳಿಗೆ ಆಹ್ವಾನಿಸಿದರೆ ಇವರಿಗೆ ಹೋಗುವ ಮನಸ್ಸೂ ಇರಲಿಲ್ಲ; ಕಾರಣ, ಹೋಗಿದ್ದೇ ಆದರೆ ನಾವು ಅವರನ್ನು ನಮ್ಮ ಮನೆಗೆ ಆಹ್ವಾನಿಸಬೇಕಾಗುತ್ತದೆ. ಅದು ಅಸಾಧ್ಯದ ಮಾತು. ಅವರಿಗೆ ಆ ಚೈತನ್ಯವಿರಲಿಲ್ಲ.



ಬಾಲಕ ಆಲ್ಫ್ರೆಡ್ ಮತ್ತೊಂದು ಚಿತ್ರ

ಮಕ್ಕಳ ಪಾಡು ಹೇಳಲೇ ಬೇಕಾಗಿಲ್ಲ. ಆಲ್ಫ್ರೆಡ್ಡನ ಅಣ್ಣ ಹೇಳಿದ್ದಾನೆ - ಇನ್ನೂ ನನಗೆ ನೆನಪಿದೆ. ಒಮ್ಮೆ ಮನೆಯವರಿಗೆಲ್ಲಾ ರಾತ್ರಿಯೂಟ ತರುವಂತೆ ನಮ್ಮ ತಾಯಿ ನನಗೆ ೧೨ ಶಿಲಿಂಗ್ ಕೊಟ್ಟು ಅಂಗಡಿಗೆ ಕಳುಹಿಸಿದಳು. ಆದರೆ ಆ ಚಿಕ್ಕ ನಾಣ್ಯ ಎಲ್ಲೋ ಬಿದ್ದು ಹೋಯಿತು! ಆಗ ಮನೆಯವರ ಪಾಡು ಹೇಳತೀರದು. ಮತ್ತೊಬ್ಬ ಅಣ್ಣ ಲುಡ್ವಿಗ್ ಹೇಳಿದ್ದಾನೆ - ಎಷ್ಟೋ ಬಾರಿ ನಾನು ಮತ್ತು ನನ್ನ ಅಣ್ಣ ರಸ್ತೆಯಲ್ಲಿ ನಿಂತು ಬೆಂಕಿಕಡ್ಡಿಯನ್ನು ಮಾರಿ ಹಣ ಸಂಪಾದಿಸಬೇಕಾಯಿತು.

ಆಲ್ಫ್ರೆಡ್ಡನಿಗೆ ಇನ್ನೂ ನಾಲ್ಕು ವರ್ಷ ವಯಸ್ಸು. ಆಗ ಕುಟುಂಬಕ್ಕೆ ಒಂದು ಹೊಸ ಮಾರ್ಗ ಗೋಚರವಾಯಿತು. ಇಮಾನ್ಯುಯೆಲ್ಲನಿಗೆ ಹತ್ತಿರದ ಫಿನ್ಲೆಂಡ್ ದೇಶದ ತುರ್ಕು ಎಂಬ ಪಟ್ಟಣದ ಕೆಲವು ಪ್ರಭಾವಿತರ ಪರಿಚಯವಾಯಿತು. ಇವರಲ್ಲಿ ಒಬ್ಬ ರಷ್ಯಾದ ಚಕ್ರವರ್ತಿಗೆ ಹತ್ತಿರದವನಾಗಿದ್ದ. ಅಲ್ಲಿ ಲ್ಯಾಂಡ್ ಮೈನುಗಳನ್ನು (Land mine) ತಯಾರಿಸಲು ಬೇಡಿಕೆ ಇರುವುದು ಪತ್ತೆ ಆಯಿತು. ಈ ಪರಿಚಯದವರ ಉತ್ತೇಜನದ ಮೇಲೆ ಇಮಾನ್ಯುಯೆಲ್ ಸ್ವೀಡನ್ನನ್ನು ತೊರೆದು ತುರ್ಕುಗೆ ಹೊರಟು ನಿಂತ. ಅವನಿಗೋ ಸಾಲಗಾರರಿಂದ ದೂರವಾದರೆ ಸಾಕು ಎನ್ನಿಸಿತ್ತು. ಅಲ್ಲದೆ ಅವನಿಗೆ ಸ್ವೀಡನ್ನಿನಲ್ಲಿ ಯಾವ ಭವಿಷ್ಯವೂ ಇದ್ದಂತೆ ಕಾಣಲಿಲ್ಲ. ತುರ್ಕುವಿನಲ್ಲಿ ಅವನ ಕನಸನ್ನು ನನಸಾಗಿಸುವ ಸಾಧ್ಯತೆ ಇದ್ದಂತೆ ತೋರಿತು. ಹೀಗಾಗಿ ೧೮೩೭ರ ಡಿಸೆಂಬರ್ ೪ ರಂದು ಆತ ಸ್ಟಾಕ್ ಹೋಮಿನಿಂದ ಅಲ್ಲಿಗೆ ಹಡಗಿನಲ್ಲಿ ಪ್ರಯಾಣ ಮಾಡಿದ.

ಸಂಸಾರದ ಜವಾಬ್ದಾರಿ ಈಗ ಆಂಡ್ರಿಯೆಟ್ಟಳ ಮೇಲೆ ಬಿತ್ತು. ಅವಳ ತಂದೆ ನೆರವಿಗೆ ಬಂದು ಒಂದಿಷ್ಟು ಹಣ ನೀಡಿದ. ಆಕೆ ತರಕಾರಿ ಮತ್ತು ಹಾಲಿನಂಗಡಿಯನ್ನು ತೆರೆದಳು. ಬೆಳಿಗ್ಗಿನಿಂದ ರಾತ್ರಿಯ ವರೆಗೆ ದುಡಿದು ಸಂಸಾರವನ್ನು ನಿಭಾಯಿಸುವಷ್ಟು ದುಡಿದಳು, ಅಲ್ಲದೆ ಮಕ್ಕಳ ವಿದ್ಯಾಭ್ಯಾಸದ ಕಡೆಗೂ ಗಮನ ಹರಿಸಿದಳು.

ಹತ್ತಿರವೇ ಇದ್ದ ಯಾಕೋಬ್ ಪ್ಯಾರಿಷ್ ಅಪೋಲೊಜಿಸ್ಟ್ ಶಾಲೆಯಲ್ಲಿ (Jacob parish Apologist School) ನೊಬೆಲನ ಮೂರೂ ಮಕ್ಕಳ ವಿದ್ಯಾಭ್ಯಾಸ. ೧೮೪೦ರಲ್ಲಿ ಆಲ್ಫ್ರೆಡ್ ಇದನ್ನು ಸೇರಿದಾಗ ಅವನಿಗೆ ಏಳು ವರ್ಷ. ಒಂದರ್ಥದಲ್ಲಿ ಬಡವರಿಗೆ ಮೀಸಲಾಗಿದ್ದ ಶಾಲೆ ಅದು. ಶ್ರೀಮಂತರ ಶಾಲೆ ಬೇರೆ ಒಂದಿತ್ತು. ಪಟ್ಟಣದ ವ್ಯಾಪಾರ, ಕೈಗಾರಿಕಾ ವಲಯದಲ್ಲಿ ಇದ್ದ ಯಾಕೋಬ್ ಶಾಲೆ ವಿದ್ಯಾರ್ಥಿಗಳ ನಡುವಿನ ಜಗಳ, ಹೊಡೆದಾಟ, ದೊಂಬಿಗಳಿಗೆ ಹೆಸರಾಗಿತ್ತು. ನೋಡುತ್ತಲೇ ಅದೊಂದು ಬಡಮಕ್ಕಳ ಶಾಲೆ ಎಂದು ಹೇಳ ಬಹುದಾಗಿತ್ತು. ಹರಕು ಬಟ್ಟೆಯುಟ್ಟ ಮಕ್ಕಳು ಮತ್ತು ಬೀದಿಕೆಲಸದ ಹೆಂಗಸರಂತೆ ಕಾಣುವ ತಾಯಂದಿರು. ಇದಕ್ಕೆ ತದ್ವಿರುದ್ಧವಾಗಿ ಅಲ್ಲಿಯೇ ಹತ್ತಿರವಿದ್ದ ಶ್ರೀಮಂತ ಮಕ್ಕಳ ಶಾಲೆಯೊಂದು, ಇಲ್ಲಿ ಉದ್ದನೆ ಹ್ಯಾಟ್ ತೊಟ್ಟ ಮಕ್ಕಳು, ತರಹಾವರಿ ಉಡುಪುಗಳನ್ನು ತೊಟ್ಟ ತಾಯಂದಿರು.

ಶಾಲೆಯ ಒಳಗೆ ಸದಾ ದೀಪದ ಹೊಗೆ. ತಾಜಾ ಗಾಳಿ ಪ್ರವೇಶಿಸಲು ಕೂಡ ಅವಕಾಶವಿರಲಿಲ್ಲ. ವಿದ್ಯಾರ್ಥಿಗಳಿಗೆ ಶಿಕ್ಷೆ ನೀಡಲು ಉಪಾಧ್ಯಾಯರು ಸದಾ ಸಿದ್ಧ. ಆರು ಕಾಗುಣಿತ ತಪ್ಪು ಗಳನ್ನು ಮಾಡಿದರೆ, ಜಮಖಾನೆಯನ್ನು ಸ್ವಚ್ಛಗೊಳಿಸಲು ಉಪಯೋಗಿಸುವ ಕೋಲಿನಿಂದ ಬೆರಳುಗಳ ಮೇಲೆ ಆರು ಏಟುಗಳು! ಇದನ್ನು ತಪ್ಪಿಸಿಕೊಂಡ ದಿನವನ್ನು ವಿದ್ಯಾರ್ಥಿಗಳು ಎದುರು ನೋಡುತ್ತಿದ್ದರು. ಈ ಶಾಲೆಗೆ ತುಸು ಫೀಸ್ ಬೇರೆ. ಆಂಡ್ರಿಯೆಟ್ಟ ಇದನ್ನು ಪಾವತಿ ಮಾಡಿದಳೊ ಇಲ್ಲವೋ ತಿಳಿದಿಲ್ಲ.

ರಾತ್ರಿ ತಾವು ಮಲಗುವವರೆಗೂ ತಾನೂ ಅವರೊಂದಿಗೆ ಕಾಲ ಕಾಳೆಯುತ್ತಿದ್ದ ಆಂಡ್ರಿಯೆಟ್ಟ ಮಕ್ಕಳಿಗೆ ಸರ್ವಸ್ವವಾದಳು; ಅವರಿಗೆ ಮಿಕ್ಕ ಯಾವ ದೇವರೂ ಬೇಕಾಗಲಿಲ್ಲ. ಯಾವುದೇ ಸಂದರ್ಭದಲ್ಲಿಯಾದರೂ ಪ್ರಾಮಾಣಿಕರಾಗಿರ ಬೇಕು, ಇದು ಅವಳು ಮಕ್ಕಳಿಗೆ ಕಲಿಸಿದ ಪಾಠ. ತನ್ನ ವ್ಯಾಪಾರನೀತಿಯನ್ನು ಕಲ್ಪಿಸಿಕೊಳ್ಳುವುದಕ್ಕೆ ಈ ಮಾತು ಆಲ್ಫ್ರೆಡ್ಡನಿಗೆ ವೇದವಾಕ್ಯ

ಎನಿಸಿತು. ತನ್ನ ತಾಯಿ ಮಾಡಿದ ಅಪಾರ ತ್ಯಾಗ ವ್ಯರ್ಥವಾಗದಂತೆ ಅವನು ವಿದ್ಯಾಭ್ಯಾಸದಲ್ಲಿ ನಿರತನಾಗಿ ಶಾಲೆಗೇ ಮಾದರಿ ವಿದ್ಯಾರ್ಥಿಯಾದ. ಉಪಾಧ್ಯಾಯರಿಗೆ ಅಚ್ಚುಮೆಚ್ಚಾದ. ಇದನ್ನರಿತ ತಂದೆ ಇಮಾನ್ಯುಯೆಲ್ಲನಿಗೆ ಅಪಾರ ಸಂತೋಷ. ಮುಂದೆ ಅವನು "ಆಲ್ಫ್ರೆಡ್ ಶಿಸ್ತಿಗಾಗಿ ಹೆಸರಾಗುತ್ತಾನೆ," ಎಂದು ತನ್ನ ಭವಿಷ್ಯ ನುಡಿದ.

ತನ್ನ ತಾಯಿಯ ಬಗ್ಗೆ ಇರಿಸಿದ್ದ ಅಪಾರ ಗೌರವವನ್ನು ತನ ಜೀವನದ ಉದ್ದಕ್ಕೂ ಪರಿಪಾಲಿಸಿಕೊಂಡು ಬಂದ ಆಲ್ಫ್ರೆಡ್. ೧೮೬೮ರಲ್ಲಿ ಇಮ್ಯಾನ್ಯುಯೆಲ್ ಮತ್ತು ಆಲ್ಫ್ರೆಡ್ ಅವರಿಗೆ ಜಂಟಿಯಾಗಿ ಸ್ವೀಡನ್ನಿನ ಲೆಟೆರ್ಸ್ಟೆಡ್ ಬಹುಮಾನ ಲಭಿಸಿತು. ಅವರು ನಗದು ಅಥವಾ ಪದಕಗಳಲ್ಲಿ ಒಂದನ್ನು ಆರಿಸಿಕೊಳ್ಳ ಬೇಕಾಯಿತು. ಪದಕವನ್ನು ಬಯಸಿದರು ತಂದೆ ಮತ್ತು ಮಗ. ಅದು ಇಮ್ಯಾನ್ಯುಯೆಲ್ ಮತ್ತು ಆಂಡ್ರಿಯೆಟ್ಟ ಅವರ ಬಳಿ ಉಳಿಯಿತು. ತಾಯಿ ನಿಧನಳಾದಾಗ ಆಸ್ತಿಯನ್ನು ಮಕ್ಕಳಿಗೆ ಹಂಚಲಾಯಿತು. ಆಲ್ಫ್ರೆಡ್ ತನಗೆ ಬಂದ ಹಣವನ್ನು ತೆಗೆದುಕೊಳ್ಳಲು ನಿರಾಕರಿಸಿ, ಪದಕ ಮಾತ್ರ ನನಗಿರಲಿ ಎಂದು ನುಡಿದ. ಆ ಪದಕದ ಮೇಲೆ ತಾಯಿ "ಇದು ಆಲ್ಫ್ರೆಡ್ಡನ ಪದಕ" ಎಂದು ಬರೆದಿದ್ದಳು. ಆಗ ಆಲ್ಫ್ರೆಡ್ ಹೇಳುತ್ತಾನೆ - "ಸಾರ್ವಜನಿಕರಾರಿಗೂ ತಿಳಿಯದ, ನನಗೆ ಮತ್ತು ಅವಳಿಗೆ ಮಾತ್ರ ಗೊತ್ತಿದ್ದ ಹಲವಾರು ಗುಟ್ಟುಗಳಿದ್ದವು."

ಅತ್ತ ತುರ್ಕುವಿನಲ್ಲಿ ಇಮಾನ್ಯುಯೆಲ್ಲನಿಗೆ ಲ್ಯಾಂಡ್ ಮೈನುಗಳನ್ನು ತಯಾರಿಸಲು ಬೇಡಿಕೆ ಅಪಾರವಾಗಿತ್ತು. ಅಲ್ಲದೆ ಅವನಿಗೆ ರಷ್ಯಾದ ಸುಂದರ ಪಟ್ಟಣ ಸೈಂಟ್ ಪೀಟರ್ಸ್ ಬರ್ಗ್ ನಲ್ಲಿ ಕೂಡ ಅವನ್ನು ತಯಾರಿಸುವ ಅವಕಾಶ ದೊರೆಯಿತು. ಅವನೀಗ ಕೈಗಾರಿಕೋದ್ಯಮಿ ಎನಿಸಿದ. ೧೮೪೧ರಲ್ಲಿ ಅವನು ದೊಡ್ಡ ಮೆಶಿನ್ ಶಾಪ್ ಮತ್ತು ಎರಕದಮನೆಗಳನ್ನು (foundry) ಸ್ಥಾಪಿಸಿದ. ಹೀಗಾಗಿ ಅವನನ್ನು ರಷ್ಯಾದಲ್ಲಿರುವ ಅತ್ಯಂತ ಗಣನೀಯ ಎಂಜಿನಿಯರುಗಳಲ್ಲಿ ಒಬ್ಬನೆಂದು ಗುರುತಿಸಲಾಯಿತು.

ಅವನ ಹಣಕಾಸಿನ ಪರಿಸ್ಥಿತಿ ಸುಧಾರಿಸಿತು. ತನ್ನ ಮೇಲಿದ್ದ ಸಾಲವನ್ನೆಲ್ಲಾ ತೀರಿಸಿದ. ಅಷ್ಟೇ ಅಲ್ಲ; ಸ್ವೀಡನ್ನಿನಲ್ಲಿದ್ದ ತನ್ನ ಬಂಧುಮಿತ್ರರಿಗೂ ಧನ ಸಹಾಯ ಮಾಡಿದ. ರಷ್ಯಾವೇ ತನ್ನ ನೆಲೆ ಎಂದು ಬಗೆದ. ಇನ್ನು ತನ್ನ ಹೆಂಡತಿ ಮಕ್ಕಳೇಕೆ ತನ್ನಿಂದ ದೂರವಿರಬೇಕು? ತನ್ನನ್ನು ಬಂದು ಸೇರುವಂತೆ ತನ್ನ ಕುಟುಂಬಕ್ಕೆ ಸೂಚನೆ ಇತ್ತ. ಕೂಡಲೇ ಆಂಡ್ರಿಯೆಟ್ಟ ತನ್ನ ಮೂರೂ ಮಕ್ಕಳನ್ನು ಕರೆದುಕೊಂಡು ರಷ್ಯಾಕ್ಕೆ ಹೊರಡಲು ಅನುವಾದಳು.

ಸೈಂಟ್ ಪೀಟರ್ಸ್ ಬರ್ಗ್

ಐದು ವರ್ಷಗಳ ನಂತರ ಇಮಾನ್ಯುಯೆಲ್ಲನ ಕುಟುಂಬ ಅವನನ್ನು ರಷ್ಯಾದಲ್ಲಿ ಎದುರುಗೊಂಡಿತು. ಜೊತೆಗೆ ತಾವು ತಂದಿದ್ದ ಅಪಾರ ಪುಸ್ತಕಗಳು, ಪಾತ್ರೆ, ಪರಟೆಗಳು. ಅವರಿಗಾಗಿಯೇ ಕಾದಿದ್ದ ಕುದುರೆಗಾಡಿ ಮತ್ತು ಅದಕ್ಕೊಬ್ಬ ಚಾಲಕ ಬೇರೆ. ನೋಡಿ ತಾಯಿ ಮತ್ತು ಮಕ್ಕಳು ಹಿಗ್ಗಿದರು. ಅವರು ತಮ್ಮ



ಸೈಂಟ್ ಪೀಟರ್ಸ್ ಬರ್ಗಿನ ಮುಖ್ಯ ಬೀದಿ

ಕೆಲಸಕ್ಕಾಗಿ ಸೇವಕನನ್ನು ಇರಿಸಿಕೊಂಡಿದ್ದು ಅದೇ ಮೊದಲು.

ಸೈಂಟ್ ಪೀಟರ್ಸ್ ಬರ್ಗ್ ವಿಶಾಲ ದೃಷ್ಟಿಯ ನಗರಾವಾಗಿದ್ದು ಅಲ್ಲಿ ರಾಜ ನಿಕೊಲಸ್(czar Nicholas) ನಿಪುಣ ವಿದೇಶಿಯರಿಗೆ ವಿಶೇಷ ಮನ್ನಣೆಯನ್ನಿತ್ತಿದ್ದ. ಹೊಸ ಹೊಸ ವಲಯಗಳಲ್ಲಿ ಉದ್ದಿಮೆ ನಡೆಸುವವರಿಗೆ ಬಹು ಆಕರ್ಷಕ ಎನಿಸಿತ್ತು ಆ ನಗರ. ತನಗೆ ಅಧಿಕೃತ ಶಿಕ್ಷಣ ಇಲ್ಲದೇ ಹೋದರೂ ತನ್ನ ಅಂತರ್ದೃಷ್ಟಿ ಸಕ್ರಿಯವಾಗಿದ್ದ ಇಮ್ಯಾನ್ಯುಯೆಲ್ ಈ ಅವಕಾಶವನ್ನು ಯಥಾವತ್ತಾಗಿ ಉಪಯೋಗಿಸಿಕೊಂಡ. ಆದರೆ ನಾವು ಮುಂದೆ ನೋಡುವ ಹಾಗೆ, ಆಲ್ಫ್ರೆಡ್ದನ ಕ್ರಮ ಇದಕ್ಕೆ ಭಿನ್ನವಾದುದಾಗಿತ್ತು. ತನ್ನ ತಂದೆಯ ರೀತಿ ಅವನಿಗೆ ಹಿಡಿಸಲೇ ಇಲ್ಲ. ಆದರೂ ಹೊರನಾಡಾದ ರಷ್ಯಾದಲ್ಲಿ ಇಮ್ಯಾನ್ಯುಯೆಲ್ ಮಾಡಿದ ಸಾಧನೆಗೆ ಮಗ ಮಾರುಹೋದ.

ರಷ್ಯಾದ ಜನ ಉದಾರಿಗಳು. ಸೈಂಟ್ ಪೀಟರ್ಸ್ ಬರ್ಗಿನಲ್ಲಿ ಸಾವಿರಾರು ಅನಾಥರು ವಾಸಿಸುತ್ತಿದ್ದರು. ಅವರಿಗೆ ವಿಶೇಷವಾಗಿ ಆಹಾರಕೊಡುವುದು ತಮ್ಮ ಕರ್ತವ್ಯವೆಂದೇ ಭಾವಿಸಿ ಪರೋಕ್ಷವಾಗಿ ಅಲ್ಲಿಯ ಜನ ಸಹಾಯ ಮಾಡುತ್ತಿದ್ದರು. ಇದನ್ನು ಕಂಡು ಮೆಚ್ಚಿದ್ದ ಆಲ್ಫ್ರೆಡ್ ಮುಂದೆ ತಬ್ಬಲಿಗಳ ನೆರವಿಗೆ ಅಪಾರ ಹಣವನ್ನು ನೀಡಿದ್ದನ್ನು ಕಾಣುತ್ತೇವೆ.

ಊರಿನ ಕಾಲುವೆಯ ಹತ್ತಿರವಿದ್ದ ಮರದಿಂದ ನಿರ್ಮಾಣವಾದ ಮನೆಯಲ್ಲಿ ವಾಸ. ಸ್ವೀಡನ್ನಿನಲ್ಲಿ ಇದ್ದುದಕ್ಕಿಂತ ಬಹುಸುಧಾರಿತ ಜೀವನ ಮಟ್ಟ. ಆದರೆ ಚಳಿ ನಿಯಂತ್ರಣ ಅವರಿಂದ ಆಗದ ಕೆಲಸ ಎನಿಸಿತು. ಸ್ವೀಡನ್ನಿನಲ್ಲಿ ಇದ್ದಂತೆಯೇ ಇಲ್ಲಿಯೂ ಚಳಿ. ಮನೆಯ ಬಾಗಿಲು ಮತ್ತು ಕಿಟಕಿಗಳ ಬಿರುಕು, ಕೊರಕುಗಳ ಮೂಲಕ ತಣ್ಣಗಿನ ಗಾಳಿ ಪ್ರವಾಹದಂತೆ ತೂರಿ ಬರುತ್ತಿತ್ತು.



ನೊಬೆಲ್ ಕುಟುಂಬ ಸೈಂಟ್ ಪೀಟರ್ಸ್ ಬರ್ಗಿನಲ್ಲಿ ವಾಸವಿದ್ದ ಮನೆ

ರಷ್ಯಾದ ಮಿಲಿಟರಿ ಜನರಲ್ ಆಗಿದ್ದ ಓಗರೆವ್ (Ogarev) ಎಂಬುವನೊಡನೆ ಇಮ್ಯಾನ್ಯುಯೆಲ್ಲನಿಗೆ ನೇರ ಸಂಪರ್ಕವಿದ್ದು ಅವನ ಭೂ ಮತ್ತು ಸಾಗರ ಮೈನುಗಳಲ್ಲಿ ರಷ್ಯಾ ಬಹು ಆಸಕ್ತಿ ತೋರಿಸಿತು. ಅಲ್ಲದೆ ಇನ್ನೂ ಇತರೆ ಆಯುಧಗಳ ತಯಾರಿಕೆಗೆ ಅವನು ಮುಂದಾದ. ಸರ್ಕಾರದ ವರದ ಹಸ್ತ ಇವನತ್ತ ಸದಾ ಚಾಚಿತ್ತು. ಕ್ರಿಮಿಯನ್ ಯುದ್ಧವಾದಾಗ (೧೮೫೩-೫೬) ಇಮ್ಯಾನ್ಯುಯೆಲ್ಲನ ಮೈನುಗಳು ರಷ್ಯಾದ ಮೈನುಗಳಿಗಿಂತ ಉತ್ತಮವಾದುವು ಎಂಬುದು ಸ್ಥಿರ ಪಟ್ಟಿತು. ಅಲ್ಲದೇ ಅವುಗಳನ್ನು ಭೂಮಿಯಲ್ಲಿ ನೆಡುವ ಕಾರ್ಯವನ್ನು ವ್ಯವಸ್ತೆ ಪಡಿಸಿದ್ದು ಆಲ್ಫ್ರೆಡ್ದನ ಅಣ್ಣ ರಾಬರ್ಟ್.

ರಷ್ಯಾದಲ್ಲಿ ನೊಬೆಲ್ ದಂಪತಿಗಳಿಗೆ ಇಬ್ಬರು ಗಂಡುಮಕ್ಕಳು ಮತ್ತು ಒಬ್ಬಳು ಹೆಣ್ಣುಮಗಳು ಜನಿಸಿದರು. ಆದರೆ ಉಳಿದದ್ದು ಎಮಿಲ್ ಎಂಬ ಮಗ ಮಾತ್ರ. ಆಲ್ಫ್ರೆಡ್ದನ ಆರೋಗ್ಯ ಸುಧಾರಿಸದೇ ಅವನು ಸದಾ ತಲೆನೋವಿನಿಂದ ನರಳುತ್ತಿದ್ದ.

ಯಾವುದೇ ಮನುಷ್ಯನ ಸ್ಥಿರ ಆಸ್ತಿ ಎಂದರೆ ಅವನು ಗಳಿಸಿದ ಜ್ಞಾನ. ಸಂಪಾದಿಸಿದ ಹಣ ಇಲ್ಲವಾಗಬಹುದು. ಆದರೆ ಏನೇ ಆದರೂ ಜ್ಞಾನ ಕಳೆದುಹೋಗುವುದಿಲ್ಲ. ಇದು ಇಮ್ಯಾನ್ಯುಯೆಲ್ಲನ ಅಚಲ ನಂಬಿಕೆ. ಹೀಗಾಗಿ ಅವನು ತನ್ನ ಉನ್ನತೋನ್ನತ ಬಂಡವಾಳವನ್ನು ಹೂಡಲು ಅನುವಾದ - ಅದೆಂದರೆ ಮಕ್ಕಳ ವಿದ್ಯಾಭ್ಯಾಸ. ತಾನಾಗಿಯೇ ಶಾಲೆಗೆ ಹೋಗಿರದಿದ್ದರೂ ಅವನಿಗೆ ಅಪಾರ ಜ್ಞಾನದಾಹ. ವಯಸ್ಸಾದ ಮೇಲೆ ತಾನಾಗಿಯೆ ಫ್ರೆಂಚ್ ಮತ್ತು ಇಂಗ್ಲಿಷ್ ಭಾಷೆಗಳನ್ನು ಕಲಿತ.

ಮೊದಲಿನಿಂದಲೇ ಆಲ್ಫ್ರೆಡ್ಡನಿಗೆ ರಸಾಯನ ಶಾಸ್ತ್ರದಲ್ಲಿ ಒಲವು. ಅವನ ಬೋಧಕ ಯೂಲಿ ಟ್ರ್ಯಾಪ್ ಅವನಿಗೆ ನೈಟ್ರೋಗ್ಲಿಸರೈಡ್ ಬಗ್ಗೆ, ಅದರ ಸ್ಫೋಟಕ ಶಕ್ತಿಯ ಬಗ್ಗೆ ತಿಳಿಸಿದ.  ಭಾಷೆ ಮತ್ತು ಚರಿತ್ರೆಗಾಗಿ ಮತ್ತೊಬ್ಬ ಬೋಧಕರಿದ್ದರು. ಮೂರೂ ಮಕ್ಕಳಿಗೂ ಒಂದು ಅಂಶ ಮನನವಾಯಿತು- ಜ್ಞಾನಾರ್ಜನೆಗೆ ಇತಿ ಮಿತಿಗಳಿಲ್ಲ; ಕಲಿಯುತ್ತಲೇ ಇರಬಹುದು. ನಮ್ಮ ವಿಧಿಯನ್ನು ನಾವೇ ರೂಪಿಸಿಕೊಳ್ಳುತ್ತೇವೆ, ಕಷ್ಟಪಟ್ಟು ದುಡಿಯುವುದೇ ಯಶಸ್ಸಿಗೆ ಸೋಪಾನ ಇವು ರಾಬರ್ಟ್, ಲುಡ್ವಿಗ್ ಮತ್ತು ಆಲ್ಫ್ರೆಡ್ ಇವರುಗಳು ಕಲಿತ ಮಹಾಪಾಠ.

ಸ್ವತಂತ್ರವಾಗಿ ಆಲೋಚಿಸುವುದನ್ನು ವಿದ್ಯಾರ್ಥಿದೆಸೆಯಲ್ಲಿಯೇ ಆಲ್ಫ್ರೆಡ್ ರೂಢಿಸಿಕೊಂಡ. ಅವನಿಗೆ ಅಪಾರ ಜ್ಞಾಪಕ ಶಕ್ತಿ ಬೇರೆ. ಜೊತೆಗೆ, ಕಲಿಯುವುದರಲ್ಲಿ ಅನಂತ ಆಸಕ್ತಿ ಮತ್ತು ಶ್ರದ್ಧೆ. ಅವನ ವಿದ್ಯಾಭ್ಯಾಸ ಕ್ರಮ ಗುಲಾಮಗಿರಿಯನ್ನು ಹೋಲುತ್ತಿತ್ತು; ಅಷ್ಟು ಕ್ರಮಬದ್ಧ!  ಅಂತಹ ನಿಷ್ಠೆ! ತಾತ್ವಿಕ ಚರ್ಚೆಗೆ ನಿಲ್ಲದ ವ್ಯಕ್ತಿಗಳ ಗೊಡವೆ ಅವನಿಗೆ ಬೇಕಾಗಿರಲಿಲ್ಲ. (ಅವನ ಜೀವನದಲ್ಲಿ ಆಲ್ಫ್ರೆಡ್ಡನಿಗೆ ಕೇವಲ ಐದಾರು ಮಂದಿಯ ಜೊತೆ ಸಂಪರ್ಕ ಸಾಕು ಎನಿಸಿತ್ತು ಎಂಬುದನ್ನು ಮುಂದೆ ನೋಡುತ್ತೇವೆ).  ಮಿಂಚಿನ ವೇಗದಲ್ಲಿ ಅವನು ತನ್ನ ಅಣ್ಣಂದಿರನ್ನು ಮೀರಿ ಮೇಲು ನಡೆದ. ಅವನ ಉಪಾಧ್ಯಾಯರಿಗೇ ಆಶ್ಚರ್ಯ - ಇಂತಹ ನಿಸ್ಸೀಮನಿಗೆ ನಮ್ಮ ಪಾಠ ನಿಜವಾಗಿಯೂ ಬೇಕೇ?

ಈ ಅವಧಿಯಲ್ಲಿ ಇಮ್ಯಾನ್ಯುಯೆಲ್ ತನ್ನ ಎರಕದ ಮನೆಯನ್ನು ವಿಸ್ತರಿಸಿದ. ಅವನಿಗೆ ಅನೇಕ ಆರ್ಡರುಗಳು ಬರುತ್ತಿದ್ದವು - ಉಗಿ ಎಂಜಿನ್ನುಗಳು, ಪೈಪುಗಳು, ಕಟ್ಟಡಗಳಿಗೆ ಬೇಕಾದ ಕಬ್ಬಿಣ ವಸ್ತುಗಳು, ಬಂದೂಕುಗಳು ಇತ್ಯಾದಿ, ಇತ್ಯಾದಿ.  ತನ್ನ ಉದ್ದಿಮೆ ಬೆಳೆಯುತ್ತಿದ್ದಂತೆ ಇಮ್ಯಾನ್ಯುಯೆಲ್ ಮಿಕ್ಕ ಪಾಲುದಾರರುಗಳನ್ನು ದೂರಮಾಡಿ ಅವರ ಶೇರುಗಳನ್ನು ಕೊಂಡು, ತನ್ನ ಮಕ್ಕಳನ್ನೇ ಕಂಪೆನಿಯ ಸಹ ಮಾಲಿಕರುಗಳನ್ನಾಗಿ ಮಾಡಿದ. ಹೀಗಾಗಿ ಮಕ್ಕಳಿಗೆ ಶಾಲಾ, ಕಾಲೇಜುಗಳ ಶಿಕ್ಷಣವಲ್ಲದೆ ಒಂದು ಉದ್ದಿಮೆಯನ್ನು ಹೇಗೆ ನಡೆಸಬೇಕು, ಹೇಗೆ ನಿಭಾಯಿಸಬೇಕು ಇವುಗಳನ್ನು ಕುರಿತ ತರಬೇತಿಯೂ ದೊರೆಯುವಂತಾಯ್ತು.

ಇನ್ನು ಆಲ್ಫ್ರೆಡ್ ಕೇವಲ ವಿದ್ಯಾರ್ಥಿಯಾಗಿರಲಿಲ್ಲ. ಒಮ್ಮೆಗೇ ಅವನು ಕಂಪೆನಿಯ ಎಲ್ಲಾ ವಿಭಾಗಗಳ ಕೆಲಸದಲ್ಲಿಯೂ ನಿಪುಣನಾದ. ನೊಬೆಲ್ ಕುಟುಂಬದ ಉದ್ದಿಮೆ ರಷ್ಯಾದ ಬಹು ಮುಖ್ಯ ಕೈಗಾರಿಕೆಗಳಲ್ಲಿ ಒಂದಾಯಿತು. ಚಳಿಗಾಲದಲ್ಲಿ ಮನೆಯನ್ನು ಬೆಚ್ಚಗಿಡುವ ಕೇಂದ್ರ ವ್ಯವಸ್ಥೆಯನ್ನು (Central heating system) ನಿರೂಪಿಸಿ, ನಿರ್ಮಾಣಕ್ಕೆ ಕೈಹಾಕಿತು. ಇದಲ್ಲದೆ ಯುದ್ಧಕ್ಕೆ ಬೇಕಾದ ಸಾಮಗ್ರಿಗಳಿಗಾಗಿ ಸರ್ಕಾರದಿಂದ ಅಪಾರ ಬೇಡಿಕೆ ಬಂದಿದ್ದು, ಇಮ್ಯಾನ್ಯುಯೆಲ್ ಸ್ವೀಡನ್ನಿನಿಂದ ವಸ್ತುಗಳನ್ನು ತರಿಸಿದನಲ್ಲದೆ,  ನುರಿತ ಫೋರ್ಮನ್ನುಗಳನ್ನು ಕರೆಸಿಕೊಂಡ. ವಿಚಿತ್ರವೆಂದರೆ ಸರ್ಕಾರದೊಡನೆಯ ಅವನ ವ್ಯವಹಾರ ಲಾಭದಾಯಕ ಎನಿಸಲಿಲ್ಲ. ರಷ್ಯದ ದೊರೆ ಹೇಳಿ ಮಾಡಿಸಿಕೊಂಡ ಕೆಲಸಗಳಿಗೆ ತೀರಾ ಕಡಿಮೆ ಹಣ ಕೊಡುತ್ತಿದ್ದ.

## ಬರಹಗಾರ ಆಲ್ಫ್ರೆಡ್ ನೊಬೆಲ್

ತಂದೆ ಮತ್ತು ತಾನು ಎದುರಿಸಿದ ಸಂದರ್ಭಗಳು ಮಧ್ಯ ಪ್ರವೇಶ ಮಾಡದಿದ್ದರೆ ಆಲ್ಫ್ರೆಡ್ ಬರಹಗಾರನಾಗುತ್ತಿದ್ದನೇನೋ ಎನಿಸುತ್ತದೆ. ವಿದ್ಯಾರ್ಥಿಯಾಗಿದ್ದಾಗ ಅವನು ಭಾಷೆಗಳನ್ನು ಕಲಿಯುವಲ್ಲಿ ಅತ್ಯಂತ ಶ್ರದ್ಧೆಯನ್ನು ತೋರಿಸಿದ. ಅವನು ಐದು ಭಾಷೆಗಳಲ್ಲಿ ಲೀಲಾಜಾಲವಾಗಿ ಬರೆಯುತ್ತಿದ್ದ. ಒಮ್ಮೆ ಅವನು ವೋಲ್ಟೈರನ (Voltaire) ಕೃತಿಯೊಂದನ್ನು ಫ್ರೆಂಚಿನಿಂದ ಸ್ವೀಡಿಷ್ ಭಾಷೆಗೆ ಭಾಷಾಂತರಿಸಿದ. ಏಕೋ ಭಾಷಾಂತರ ಸಮರ್ಪಕ ಎನಿಸಲಿಲ್ಲ. ಆಗ ತಾನು ಬರೆದುದನ್ನು ಮತ್ತೆ ಫ್ರೆಂಚಿಗೆ ತುರ್ಜುಮೆ ಮಾಡಿದ. ತನ್ನ ಫ್ರೆಂಚ್ ಮತ್ತು ಮೂಲ ಫ್ರೆಂಚ್ ಕೃತಿಗಳನ್ನು ತುಲನೆಮಾಡಿ ತಾನು ಮಾಡಿದ್ದ ತಪ್ಪುಗಳನ್ನು ತಿದ್ದಿಕೊಂಡ. ಮಗ ಹೀಗೆ ಸಮಯ ಕಳೆಯುವುದು ಇಮ್ಯಾನ್ಯುಯೆಲ್ಲನಿಗೆ ಸ್ವಲ್ಪವೂ ಇಷ್ಟವಿಲ್ಲ. ಇದಲ್ಲದೆ ಆಲ್ಫ್ರೆಡ್ಡನಿಗೆ ಒಂದು ಭೀತಿ ತಲೆದೋರಿತು. ರಷ್ಯಾದಲ್ಲಿ ಸಾಲ ತೀರಿಸದೆ ಹೋದರೆ ಜೈಲುವಾಸ ಖಂಡಿತವಾಗಿತ್ತು. ತನ್ನ ತಂದೆಯ ಉದ್ದಿಮೆ ಎಷ್ಟೇ ಯಶಸ್ವಿಯಾಗಿ ಮುಂದುವರೆಯುತ್ತಿದ್ದರೂ ಎಂದಾದರೂ ಕಷ್ಟಕ್ಕೆ ಸಿಕ್ಕುವ ಸಾಧ್ಯತೆ ಇದ್ದೇ ಇತ್ತು. ಹೀಗಾಗಿ ಸಾಕಷ್ಟು ಹಣಕಾಸು ಮಾಡುವ ಕಸುಬನ್ನು ಹಿಡಿಯುವುದು ಅವಶ್ಯಕ ಎನ್ನಿಸಿತು.

ಹೀಗಿದ್ದರೂ ಮುಂದೆ ಆಲ್ಫ್ರೆಡ್ ನೆಮೆಸಿಸ್ (Nemesis) ಎಂಬ ಗೇಯನಾಟಕವನ್ನು ರಚಿಸಿದ. ಒಂದು ರೀತಿಯಲ್ಲಿ ಅದು ಅವನ ಜೀವನಚರಿತ್ರೆಯೇ ಆಗಿತ್ತು. ಆ ನಾಟಕ ಪ್ರದರ್ಶನ ಕಂಡಿದ್ದೂ ಉಂಟು. ಅಲ್ಲದೆ ಅವನು ಇನ್ನೂ ಯುವಕನಾಗಿದ್ದಾಗಲೇ "ಸಹೋದರಿಯರು" ಎಂಬ ಕಾದಂಬರಿಯೊಂದನ್ನು ಬರೆಯ ಹೊರಟಿದ್ದ. ಶೆಲ್ಲಿ ಕವಿಯನ್ನು ಅನುಸರಿಸಿ ಇಂಗ್ಲಿಷಿನಲ್ಲಿ ಕವಿತೆಯನ್ನೂ ರಚಿಸಿದ. ಈ ಕವಿತೆಯನ್ನು ತಾನು ಇಂಗ್ಲೆಂಡಿಗೆ ಹೋದಾಗ ಸಾಹಿತ್ಯಾಸಕ್ತ ಪಾದ್ರಿಯೊಬ್ಬನಿಗೆ ತೋರಿಸಿದ. ಓದಿದ ಪಾದ್ರಿಗೆ ಎಲ್ಲಿಲ್ಲದ ಸಂತೋಷ- ಸ್ವೀಡಿಷ್ ಆದ ನೀನು ಬರೆದದ್ದೇ ಇದು? ಆದರೆ ಆಲ್ಫ್ರೆಡ್ಡನಿಗೆ ತನ್ನ ಬರಹಗಳ ಬಗ್ಗೆ ಏನೋ ಅತೃಪ್ತಿ. ಯುವ ಕವಿಗಳಲ್ಲಿ ಅನೇಕರು ಮಾಡುವಂತೆ ಎಲ್ಲವನ್ನೂ ಒಂದು ದಿನ ಸುಟ್ಟುಹಾಕಿದ. ಆದರೆ ಅವನ ಸಾಹಿತ್ಯದ ಒಲವು ಇಲ್ಲಿಗೆ ಇಂಗಲಿಲ್ಲ. ಜೀವನವಿಡೀ ಓದುತ್ತಿದ್ದ. ಆಲ್ಫ್ರೆಡ್ ನೊಬೆಲ್ ಬಿಟ್ಟುಹೋಗಿರುವ ಪುಸ್ತಕ ಭಂಡಾರದಲ್ಲಿ ಅನೇಕಾನೇಕ ಸಾಹಿತ್ಯ ಹೊತ್ತಿಗೆಗಳಿವೆ.

ಅವನಿಗೆ ೧೬ ವರ್ಷವಾದಾಗ ಆಲ್ಫ್ರೆಡ್ಡನಿಗೆ ಅವನ ತಂದೆ ಒಂದು ವಿಶೇಷ ಅವಕಾಶವನ್ನು ಒದಗಿಸಿಕೊಟ್ಟ. ಅದೆಂದರೆ ವಿದೇಶಗಳಲ್ಲಿ ಸಂಚರಿಸಿ ಅಲ್ಲಿ ಕೈಗಾರಿಕೋದ್ಯಮಗಳನ್ನು ಸ್ವತಃ ನೋಡಿ ಬರುವುದು. ಇದು ಅವನ ಭವಿಷ್ಯದ ದೃಷ್ಟಿಯಿಂದ ಉಜ್ವಲವಾದದ್ದು ಎಂದು ಬೇರೆ ಹೇಳಬೇಕಾಗಿಲ್ಲ. ಆದರೆ ಇದರ ಹಿಂದೆ ಒಂದು ಷರತ್ತು ಇತ್ತು - ಅವನು ಬರಹಗಾರನಾಗುವ ಹಂಬಲವನ್ನು ತೊರೆಯಬೇಕು. ಹೀಗಾಗಿ ಕೇವಲ ಬರಹಗಾರನಾಗಿ ಜೀವಿಸುವ ಆಸೆ ಅಲ್ಫ್ರೆಡ್ಡನಿಂದ ದೂರವಾಯಿತು.

## ಜ್ಞಾನಯಾತ್ರೆ

ಅದ್ವಿತೀಯ ವಿದ್ಯಾರ್ಥಿ, ರಸಾಯನ ಶಾಸ್ತ್ರದಲ್ಲಿ ನಿಪುಣ ಮತ್ತು ರಾಸಾಯನಿಕ ಪ್ರಯೋಗಶಾಲೆಯಲ್ಲಿ ಅಣ್ಣಂದಿರನ್ನು ಮೀರಿಸಿದ್ದಾನೆ ಎಂದೆಲ್ಲಾ ಎನಿಸಿದ ಆಲ್ಫ್ರೆಡ್ ರಷ್ಯಾದಿಂದ ಹೊರಟು ತನ್ನ ಜ್ಞಾನಯಾತ್ರೆಯನ್ನು ಕೈಗೊಂಡ. ಅವನ ಮುಂಜಾಗರೂಕತೆ ಹೇಳತೀರದ್ದು. ತನ್ನ ಯಾತ್ರೆಯ ಬಗ್ಗೆ ಮೊದಲೇ ಆಲೋಚಿಸಿ ಯಾವ ಯಾವ ಊರುಗಳಿಗೆ ಹೋಗ ಬೇಕು? ಅಲ್ಲಿ ಯಾರನ್ನು ಸಂಧಿಸಬೇಕು? ಅವರೊಡನೆ ಯಾವ ಚರ್ಚೆ, ವಿಚಾರ ವಿನಿಮಯ ಆಗಬೇಕು? ಇವೆಲ್ಲವನ್ನೂ

ಮೊದಲೇ ನಿರ್ಧರಿಸಿದ್ದ. ಅವನ ಜೀವನ ಕ್ರಮವೇ ಹಾಗೆ. ಯಾವುದೇ ಸಂದರ್ಭದಲ್ಲಿ ಸಿಕ್ಕಿಹಾಕಿಕೊಂಡರೂ ಅದು ತನ್ನ ಹತೋಟಿಯಲ್ಲಿ ಇರಬೇಕು. ಬೀಸುವ ಗಾಳಿಯಲ್ಲಿ ತೂರಿಹೋಗುವ ವ್ಯಕ್ತಿ ಅಲ್ಲ ಆತ.

ಮೊದಲು ಸ್ವೀಡನ್ನಿನಲ್ಲಿದ್ದ ಅವನ ಸಂಬಂಧಿಗಳನ್ನು ನೋಡಿಬಂದು, ಯೂರೋಪ್, ಇಂಗ್ಲೆಂಡು, ಅಮೆರಿಕಾಗಳಲ್ಲಿ ತನ್ನ ತಂದೆಯೊಂದಿಗೆ ವಾಣಿಜ್ಯ ಸಂಪರ್ಕವುಳ್ಳ ವ್ಯಕ್ತಿಗಳನ್ನು ಮತ್ತು ತಾತ್ರಿಕ ಅನ್ವೇಷಕರುಗಳನ್ನು ಅರಸಿ ಹೊರಟ. ಪ್ಯಾರಿಸ್ಸಿನಲ್ಲಿ ಪ್ರೊಫೆಸರ್ ಪೆಲೂಜ್ (Pelouze) ಎಂಬುವವನನ್ನು ನೋಡಿದರೆ ನ್ಯೂಯಾರ್ಕಿನಲ್ಲಿ ಪ್ರಸಿದ್ಧ ಎರಿಕ್ಸನ್ (Ericsson) ಜತೆ ಚರ್ಚೆಯಾಯಿತು. ಎರಿಕ್ಸನ್ ತಯಾರಿಸುತ್ತಿದ್ದ ಗಾಳಿಯ ಎಂಜಿನ್ ಆಲ್ಫ್ರೆಡ್ಡನನ್ನು ವಿಶೇಷವಾಗಿ ಆಕರ್ಷಿಸಿತು. ಮುಂದೆ ಈತ (ಎರಿಕ್ಸನ್) ಯುದ್ಧದ ಹಡಗೊಂದನ್ನು ನಿರ್ಮಾಣ ಮಾಡಿದ.

ತನ್ನ ಯಾತ್ರೆ ಮುಗಿಸಿ ರಷ್ಯಾಕ್ಕೆ ಹಿಂದಿರುಗಿದ ಆಲ್ಫ್ರೆಡ್ ತಾನು ಕಲಿತಿದ್ದನ್ನು ಅನುಷ್ಠಾನಕ್ಕೆ ತರುವ ಬಗ್ಗೆ ಆಲೋಚಿಸಿದ. ಆದರೆ ಬಳಲಿಹೋಗಿದ್ದ ಅವನು ಸ್ವೀಡನ್ನಿನಲ್ಲಿದ್ದ ನೀರಿನ ಬುಗ್ಗೆಗಳಲ್ಲಿ ಸ್ನಾನಮಾಡಿ ಆಯಾಸವನ್ನು ಕಳೆದುಕೊಂಡ.

ಎರಿಕ್ಸನ್ ಮತ್ತು ಆಲ್ಫ್ರೆಡ್ ಒಂದು ಮಹಾನಂಬಿಕೆಯನ್ನು ಪಾಲಿಸಿಕೊಂಡು ಬಂದರು. ಪ್ರಗತಿಗೆ ಕಾರಣವಾದ ಎಲ್ಲ ಅನ್ವೇಷಣೆಗಳು ಕೇವಲ ವ್ಯಕ್ತಿಯ ಆಸ್ತಿಯಲ್ಲ; ಅವು ಮಾನವ ಕುಲಕ್ಕೇ ಸೇರಬೇಕಾದ ಸ್ವತ್ತು. ಕಲಾವಿದನಿಗೆ ತನ್ನ ಕೃತಿಯೇ ಪರಮ ಬಹುಮಾನ, ಅವನು ಹೊರಗಿನ ಯಾವ ಪ್ರಶಸ್ತಿಯನ್ನೂ ನಿರೀಕ್ಷಿಸಬಾರದು. ಈ ಭಾವನೆ ಆಲ್ಫ್ರೆಡ್ಡನ ಅಂತರಂಗಲ್ಲಿದ್ದರೂ ಮುಂದೆ ಅವನು ವ್ಯವಹಾರ ಚತುರನಾದ. ತನ್ನ ಶೋಧನೆಗಳನ್ನು ಹಣವನ್ನಾಗಿ ಹೇಗೆ ಪರಿವರ್ತಿಸುವುದು ಎಂಬ ವಿದ್ಯೆ ಅವನಿಗೆ ಕರಗತವಾಗಿತ್ತು.


ದಿವಾಳಿತನ

ಕ್ರಿಮಿಯನ್ ಯುದ್ಧ ೧೮೫೬ರಲ್ಲಿ ಮುಗಿದಾಗ ರಷ್ಯಾ ಶಾಂತಿ ಒಪ್ಪಂದಕ್ಕೆ ಸಹಿಹಾಕಿತು. ಹೀಗಾಗಿ ಅದು ತಾನು ಮೊದಲು ಇಮ್ಯಾನ್ಯುಯೆಲ್ಲನಿಗೆ ಕೊಟ್ಟ ಮಾತನ್ನು ಉಳಿಸಿಕೊಳ್ಳಲಾಗಲಿಲ್ಲ. ಆರ್ಡರುಗಳು ವಜಾ ಆದವು. ನೀಡಬೇಕಾದ ಹಣವನ್ನು ಸರ್ಕಾರ ಪಾವತಿ ಮಾಡಲಿಲ್ಲ. ಇವನಾದರೋ ಸಾಕಷ್ಟು ಸಾಲ ಮಾಡಿದ್ದು ದಿಕ್ಕು ಕಾಣದ ಹಾಗಾಯಿತು. ತಾನು ಕೈಗೊಂಡ ಇತರೆ ಕೆಲಸಗಳಿಂದ ಬರುವ ವರಮಾನದಿಂದ ಸಾಲ ತೀರಿಸುವುದು ಖಂಡಿತ ಅಸಾಧ್ಯ. ಇಮ್ಯಾನ್ಯುಯೆಲ್ ಆಲ್ಫ್ರೆಡ್ಡನನ್ನು ಪ್ಯಾರಿಸ್ ಮತ್ತು ಲಂಡನ್ನುಗಳಿಗೆ ಕಳಿಸಿ ಅಲ್ಲಿನ ಬ್ಯಾಂಕುಗಳಿಂದ ಸಾಲ ಪಡೆಯುವ ಯತ್ನ ಮಾಡಿದ. ಆದರೆ ಯಾವ ಬ್ಯಾಂಕೂ ಹಣ ನೀಡಲು ಮುಂದೆ ಬರಲಿಲ್ಲ. ಮತ್ತೆ ದಿವಾಳಿತನದ ಭೂತ ಕಾಡಿತು. ವಿಧಿ ಇಲ್ಲದೆ ಇಮ್ಯಾನ್ಯುಯೆಲ್ ಮತ್ತು ಅವನ ಹೆಂಡತಿ ಆಂಡ್ರಿಯೆಟ್ಟ ಸ್ವೀಡನ್ನಿಗೆ ಪ್ರಯಾಣ ಬೆಳೆಸಿದರು. ಆದರೆ ಮಗ ಲುಡ್ವಿಗ್ ಕುಟುಂಬಕ್ಕೆ ಸೇರಿದ ಕಂಪೆನಿಗಳನ್ನು ಮಾರಿ, ಸಾಲವನ್ನು ತೀರಿಸಿ, ಸ್ವಲ್ಪ ಹಣ ಉಳಿಸಿ ತಂದೆ ಸ್ವೀಡನಿನ್ನನಲ್ಲಿ ಮತ್ತೆ ವಾಸಿಸುವುದಕ್ಕೆ ಸಹಾಯ ಮಾಡಿದ. ಅತ್ಯಂತ ಕಳಪೆ ಎನ್ನಿಸಿದ್ದ ಬಡಾವಣೆಯೊಂದರಲ್ಲಿ ಇಮ್ಯಾನ್ಯುಯೆಲ್ ಮನೆ ಮಾಡಿದನಾದರೂ ತನ್ನ ಕನಸನ್ನು ಮಾತ್ರ ಜೀವಂತವಾಗಿಯೇ ಇರಿಸಿಕೊಂಡಿದ್ದ.

# ೩. ಉದ್ದಿಮೆಗೆ ಇಳಿದ ಆಲ್ಫ್ರೆಡ್

ತಂದೆಯ ರಷ್ಯಾ ಅಧ್ಯಾಯ ಮುಗಿದ ನಂತರ ಆಲ್ಫ್ರೆಡ್ ಮತ್ತು ರಾಬರ್ಟ್ ಸೈಂಟ್ ಪೀಟರ್ಸ್ ಬರ್ಗಿನಲ್ಲಿಯೇ ಚಿಕ್ಕ ಅಪಾರ್ಟ್ಮೆಂಟ್ ಒಂದರಲ್ಲಿ ವಾಸವಾಗಿದ್ದರು. ಸದಾ ಕ್ರಿಯಾಶೀಲನಾದ ಆಲ್ಫ್ರೆಡ್ಡನಿಗೆ ಅಡುಗೆಮನೆಯೇ ಪ್ರಯೋಗಶಾಲೆ ಆಯಿತು. ಅಲ್ಲಿಯೇ ಅವನು ಗ್ಯಾಸೋಮೀಟರ್ ಎಂಬ ಉಪಕರಣವನ್ನು ಕಂಡುಹಿಡಿದು ಅದಕ್ಕೆ ಪೇಟೆಂಟ್ ಪಡೆದ. ಸಹೋದರರಿಬ್ಬರೂ ಹಿಂದೆ ತಮಗೆ ಉಪಾಧ್ಯಾಯರಾಗಿದ್ದ ಜಿನಿನ್ ಮತ್ತು ಟ್ರ್ಯಾಪ್ ಅವರೊಡನೆ ತಮ್ಮ ಸಂಪರ್ಕವನ್ನು ಮುಂದುವರೆಸಿದರು. ಜಿನಿನ್ ಅವರಿಗೆ ನೈಟ್ರೋಗ್ಲಿಸೆರಿನ್ (nitroglycerine) ಎಂಬ ಸಿಡಿಯುವ ದ್ರವ್ಯದ ಬಗ್ಗೆ ತಿಳಿಸಿದ. ಅಲ್ಲದೆ ಜಿನಿನ್ ತನ್ನ ಕಾಲೇಜು ಉಪನ್ಯಾಸ ಒಂದರಲ್ಲಿ ಆ ದ್ರವ್ಯದ ಒಂದು ಗುಟುಕನ್ನು ಮೇಜಿನ ಮೇಲಿರಿಸಿ ಅದನ್ನು ಸುತ್ತಿಗೆಯೊಂದರಿಂದ ಹೊಡೆದ. ಆಗ ಆ ದ್ರವ್ಯ ಪಿಸ್ತೂಲಿನಂತೆ ಧ್ವನಿ ಮಾಡಿತು. ಆದರೆ ಮೇಜಿಗೆ ಯಾವುದೇ ಹಾನಿಯಾಗಲಿಲ್ಲ.

ಇದನ್ನರಿತ ಆಲ್ಫ್ರೆಡ್ಡನ ಮೆದುಳ ಕಂಪ್ಯೂಟರ್ ಕಾರ್ಯಾರಂಭ ಮಾಡಿತು. ಈ ದ್ರವ್ಯವನ್ನು ಸಿಡಿಸಿ ಅದರ ಅಪಾರ ಶಕ್ತಿಯನ್ನು ಹೊರಹಾಕುವುದು ಹೇಗೆ? ಹೀಗಾದಾಗ ಮಾತ್ರ ಆ ಶಕ್ತಿಯನ್ನು ಉಪಯೋಗಿಸಿ ಮಿಕ್ಕ ವಸ್ತುಗಳು ಒಡೆಯುವಂತೆ ಮಾಡಬಹುದು. ಆಲ್ಫ್ರೆಡ್ ಒಂದಾದ ಮೇಲೆ ಒಂದರಂತೆ ಅನೇಕ ಪ್ರಯೋಗಗಳನ್ನು ಮಾಡಿದ. ಅವನಿಗೆ ಅನ್ನಿಸಿತು - ಕರಿಯ ಗನ್ ಪೌಡರ್ (gunpowder) ಮತ್ತು ನೈಟ್ರೋಗ್ಲಿಸೆರಿನ್ ಇವುಗಳನ್ನು ಬೆರೆಸಿ, ಮಿಶ್ರಣಕ್ಕೆ ಬೆಂಕಿ ಹಚ್ಚಿದರೆ ಹೇಗೆ? ಇದನ್ನು ಪ್ರಯತ್ನಿಸಿ ನೋಡಿದಾಗ ಇಬ್ಬರಿಗೂ ಆಶ್ಚರ್ಯ! ಆಲ್ಫ್ರೆಡ್ಡನ ಲೆಕ್ಕಾಚಾರ ಸಮಂಜಸವಾಗಿತ್ತು. ಸಹೋದರರಿಬ್ಬರೂ ನೀರು ಘನೀಕರಿಸಿ ಮಂಜುಗಡ್ಡೆಯಾಗಿದ್ದ ಕಾಲುವೆ ಒಂದರಲ್ಲಿ ಅನೇಕ ಪ್ರಯೋಗಗಳನ್ನು ಮಾಡಿ ತಮ್ಮ ಶೋಧನೆಯಲ್ಲಿ ಹುಳುಕಿಲ್ಲ ಎಂಬುದನ್ನು ಖಾತ್ರಿ ಪಡಿಸಿಕೊಂಡರು. ಕೂಡಲೆ ತಂದೆಗೆ ಇದರ ಬಗ್ಗೆ ತಿಳಿಸಿದರು. ಇಮ್ಯಾನ್ಯುಯೆಲ್ ಮಕ್ಕಳ ಮುನ್ನಡೆಯನ್ನು ಕೊಂಡಾಡಿ, "ಇದು ರಷ್ಯಾದಲ್ಲಿ ಒಳ್ಳೆಯ ಉದ್ದಿಮೆಯಾಗ ಬಲ್ಲದು" ಎಂಬ ಆಶ್ವಾಸನೆ ನೀಡಿದ. ಇದಲ್ಲದೆ ಆತ ಸ್ವೀಡನ್ನಿನಲ್ಲಿ ತನ್ನದೇ ಪ್ರಯೋಗಗಳನ್ನು ನಡೆಸಿ ಯಶಸ್ವಿಯಾದ. ಇಲ್ಲಿಗೆ ನಿಲ್ಲಿಸಲಿಲ್ಲ. "ನಾನೇ ನೈಟ್ರೋಗ್ಲಿಸೆರಿನ್ ಮತ್ತು ಗನ್ ಪೌಡರುಗಳ ಮಿಶ್ರಣವನ್ನು ಕಂಡು ಹಿಡಿದದ್ದು" ಎಂದು ಸಾರಿದ. ಆಲ್ಫ್ರೆಡ್ ತಂದೆಗೆ ಪತ್ರ ಬರೆದು ಅವನ ಈ ಕ್ರಮವನ್ನು ಖಂಡಿಸಿದ. ತಂದೆ ಕಿಡಿಕಾರಿದ; ತೀಕ್ಷ್ಣ ಪತ್ರ ವ್ಯವಹಾರವಾಯಿತು. ಆಲ್ಫ್ರೆಡ್ ತಾನೊಬ್ಬ ಪ್ರಾಮಾಣಿಕ ಮತ್ತು ತನ್ನ ಎಲ್ಲೆಯನ್ನು ಮೀರುವ ವ್ಯಕ್ತಿಯಲ್ಲ ಎಂಬುದನ್ನು ತೋರಿಸಿಕೊಟ್ಟ. ಹೀಗಾದರೂ ಇದು ತಂದೆಯೊಡನೆ ಕಲಹವಾಗಿ ಪರಿಣಮಿಸಲಿಲ್ಲ; ಅಪ್ಪ ಮಗ ಪರಸ್ಪರ ದೂರವಾಗಲಿಲ್ಲ. ಅವರಿಬ್ಬರ ಮಧ್ಯೆ ಇದ್ದ ಭಿನ್ನಾಭಿಪ್ರಾಯವನ್ನು ಅದು ನೀಗುವಂತೆ ಮಾಡಿತು.



ಬಂಡೆಯೊಡೆಯುವುದರಲ್ಲಿ ಮಿಶ್ರಣದ ಬಳಕೆ

ದಿವಾಳಿತನದಿಂದ ಹೊರಬರಲು ಇಮ್ಯಾನ್ಯುಯೆಲ್ಲನಿಗೆ ಬಹುವಾಗಿ ಸಹಾಯ ಮಾಡಿದ್ದು ಮತ್ತಾರೂ ಅಲ್ಲ; ಅವನ ಮಗ ಆಲ್ಫ್ರೆಡ್. ಅವನೇ ಸಂಸಾರವನ್ನು ತೂಗುವ, ಸಂಶೋಧನೆಗಳನ್ನು ಮುಂದುವರೆಸುವ ಜವಾಬ್ದಾರಿಯನ್ನು ಹೊತ್ತ. ಕುಟುಂಬದಲ್ಲಿ ಏನೇ ಸಮಸ್ಯೆ ತಲೆದೋರಿದರೂ ಅದನ್ನು ನಿವಾರಿಸುವ ಹೊಣೆ ಅವನದಾಯಿತು. ಅವನು ಮಾಡಿದ ನಾನಾ ಕೆಲಸಗಳ ಹಿಂದೆ ಇದ್ದದ್ದು 'ಪ್ರಸಿದ್ಧನಾಗಬೇಕು' ಎಂಬ ಹಂಬಲಕ್ಕಿಂತ ಅತೀವ ಭಯ. ಇದೇ ಅವನ ಪ್ರಗತಿಗೆ ಕಾರಣವಾದ ಮುಖ್ಯ ಶಕ್ತಿ.

ತನ್ನ ಕುಟುಂಬ ಹಿಂದೆ ಸಹಿಸಿದ ಬಡತನವನ್ನು ಆಲ್ಫ್ರೆಡ್ ಮರೆಯಲಿಲ್ಲ. ಪ್ರಾಪ್ತರೆನಿಸಿದವರಿಗೆ ಸಾಕಷ್ಟು ಸಹಾಯ ಮಾಡಿದ. ಆದರೆ ಎಚ್ಚರಗೇಡಿ ಸಾಲಗಾರರನ್ನು ಅವನು ಹತ್ತಿರ ಸೇರಿಸುತ್ತಿರಲಿಲ್ಲ. ಒಂದೆಡೆ ಅವನು ಬರೆದಿದ್ದಾನೆ - "ನಾನು ಅನೇಕ ಕಷ್ಟಗಳನ್ನು ಎದುರಿಸಿದ್ದೇನೆ. ಸಾಲವನ್ನು ಮಾಡಿದ್ದೇನೆ. ಆದರೂ ಒಮ್ಮೆಯಾದರೂ ಅವಧಿ ಮೀರಿ ಮರುಪಾವತಿ ಮಾಡಿಲ್ಲ. ನನ್ನಿಂದ ಸಾಲ ಪಡೆದವರಿಂದಲೂ ಇದನ್ನೇ ನಾನು ನಿರೀಕ್ಷಿಸುತ್ತೇನೆ."

ಇತ್ತ ತಂದೆ ಇಮ್ಯಾನ್ಯುಯೆಲ್ ಸ್ಟಾಕ್ ಹೋಮಿನಲ್ಲಿ ಮನೆಯ ಹತ್ತಿರ ಶೆಡ್ ಒಂದರಲ್ಲಿ ಪ್ರಯೋಗಶಾಲೆಯನ್ನು ನಿರ್ಮಿಸಿದ. ಅವನೊಡನೆ ಆಲ್ಫ್ರೆಡ್ ಮತ್ತು ಕಿರಿಯ ಮಗ ಎಮಿಲ್ ಸೇರಿದರು. ಅದೇ ಮಿಶ್ರಣವನ್ನು ಸಿದ್ಧ ಪಡಿಸಿ ಪ್ರಯೋಗಗಳನ್ನು  ನಡೆಸಿ ಯಶಸ್ವಿಯಾದರು. ಅವರ ಪ್ರಯತ್ನದಲ್ಲಿ ದೇಶದ ಮಿಲಿಟರಿ ಆಸಕ್ತಿ ವಹಿಸಿ ಆರು ಸಾವಿರ ಸ್ವೀಡಿಷ್ ಡಾಲರುಗಳ ಸಹಾಯವನ್ನು ನೀಡಿತು. ಕಾರ್ಲ್ಸ್ ಬೋರ್ಗಿನ ಕೋಟೆಯ ಹತ್ತಿರ ಮಿಲಿಟರಿಗಾಗಿ  ವಿಶೇಷ ಪ್ರದರ್ಶನವನ್ನು ಏರ್ಪಡಿಸಲಾಗಿದ್ದು ಒಂದು ದೊಡ್ಡ ಕೊಳವೆಯಲ್ಲಿ ಮಿಶ್ರಣವನ್ನು ತುಂಬಿ ಅದನ್ನು ಹಚ್ಚಲಾಯಿತು. ಆಗ ಉದ್ಭವಿಸಿದ ಸಿಡಿತವನ್ನು ಕಂಡು ಮಿಲಿಟರಿಯ ಪ್ರತಿನಿಧಿಗಳು ಕೂಡ ಭಯ ಪಟ್ಟರು. ಅವರ ತೀರ್ಮಾನ - ಯುದ್ಧದಲ್ಲಿ ಉಪಯೋಗಿಸುವುದಕ್ಕೆ ಇದು ಬಹಳ ಅಪಾಯಕರ!

ಹೀಗೆ ನುಡಿದ ಸ್ವೀಡನ್ನಿನ ಸೈನ್ಯ ನೊಬೆಲ್ ಕುಟುಂಬದೊಡನೆ ಸಹಕರಿಸಲು ನಿರಾಕರಿಸಿತು. ಆದರೆ ಆಲ್ಫ್ರೆಡ್ ಮತ್ತು ಇಮ್ಯಾನ್ಯುಯೆಲ್ ಈ ಪ್ರಯೋಗಗಳಿಗಾಗಿ ಸಾಕಷ್ಟು ಹಣ ವ್ಯಯಮಾಡಿದ್ದರು. ಕೈಬಿಡುವಂತಿರಲಿಲ್ಲ. ಆಲ್ಫ್ರೆಡ್ ಪ್ಯಾರಿಸ್ಸಿನ ಬ್ಯಾಂಕುಗಳೊಡನೆ ವ್ಯವಹರಿಸಿದ. ಪರಿಣಾಮಕಾರಿಯಾದ ಮತ್ತು ಕಡಿಮೆ ಬೆಲೆಯ ಸಿಡಿಮದ್ದನ್ನು ಬಯಸಿದ ಬ್ಯಾಂಕೊಂದು ಆಲ್ಫ್ರೆಡ್ಡನ ಯೋಜನೆಯನ್ನು ಮಂಜೂರು ಮಾಡಿ ೧೦೦,೦೦೦ ಫ್ರಾಂಕುಗಳ ಸಾಲ ನೀಡಿತು.

ಈಗ ಆಲ್ಫ್ರೆಡ್ಡನ ಮುಂದಿದ್ದ ಪ್ರಶ್ನೆ -  ಸ್ಫೋಟಿಸುವ ಮಿಶ್ರಣವನ್ನು ಕಂಡುಹಿಡಿದ್ದದ್ದಾಯಿತು. ಅದಕ್ಕೆ ಅವನಿಗೆ ಸ್ವೀಡನ್ನಿನ ಪೇಟೆಂಟ್ ಕೂಡ ದೊರೆಯಿತು. ಆದರೆ ನಿಯಂತ್ರಿತವಾದ ಸ್ಫೋಟನವನ್ನು ಸೃಷ್ಟಿಸುವುದು ಹೇಗೆ?

ತನ್ನ ಪ್ರಯೋಗಶಾಲೆಯಲ್ಲಿ ಆಲ್ಫ್ರೆಡ್

೧೮೬೪ರ ಹೊತ್ತಿಗೆ ಹೆಲೆನ್ ಬೋರ್ಗಿನಲ್ಲಿ ಆಲ್ಫ್ರೆಡ್ಡನ ಪ್ರಯೋಗಶಾಲೆ ಕಾರ್ಯವಹಿಸಿತ್ತು. ಅಲ್ಲಿ ಅಲ್ಫ್ರೆಡ್, ಇಮ್ಯಾನ್ಯುಯೆಲ್, ಆಗತಾನೆ ಶಾಲಾ ಪರೀಕ್ಷೆಗಳಾನ್ನು ಮುಗಿಸಿದ್ದ ತಮ್ಮ  ಎಮಿಲ್, ಸಹಾಯಕ್ಕೆ ಒಬ್ಬ ಹುಡುಗ ಮತ್ತು ಓರ್ವ ಸೇವಕಿ. ಇಲ್ಲಿ ಅನುದಿನ ಆಲ್ಫ್ರೆಡ್ ಹದಿನೆಂಟು ಗಂಟೆಗಳ ಕಾಲ ದುಡಿಯುತ್ತಿದ್ದ. ಅವನ ಆರೋಗ್ಯ ಅಷ್ಟೇನೂ ಸಮರ್ಪಕವಾಗಿರಲಿಲ್ಲ. ಸದಾ ಆಯಾಸಗೊಂಡಿರುತ್ತಿದ್ದ. ಹೀಗಿದ್ದರೂ ಕೆಲವೊಮ್ಮೆ ಪ್ರಯೋಗಶಾಲೆಯಲ್ಲಿ ಅನೇಕ ದಿನಗಳ ಕಾಲ ಬಾಗಿಲಿಗೆ ಬೀಗ

ಹಾಕಿಕೊಂಡು  ಆಹಾರ, ನಿದ್ದೆಗಳನ್ನು ಮರೆತು ತನ್ನ ಕಾರ್ಯದಲ್ಲಿ ಮಗ್ನನಾಗುತ್ತಿದ್ದ. ತನ್ನ ಆರೋಗ್ಯದ ಬಗ್ಗೆ ಯಾರೊಡನೆಯೂ ಹೇಳಿಕೊಂಡಿದ್ದೇ ಇಲ್ಲ. ಯಾವುದಾದರೂ ಮುಖ್ಯ ಅನ್ವೇಷಣೆಯ ಪೂರ್ವ ಸಿದ್ಧತೆ ಮತ್ತು ತಳಹದಿಯ ಕೆಲಸವನ್ನು ತಾನೇ ಮಾಡುತ್ತಿದ್ದ. ಸಹಾಯಕರನ್ನು ಕರೆಯುತ್ತಿರಲಿಲ್ಲ. ತಾನು ಕಂಡುಹಿಡಿದ ಇಗ್ನೈಟರ್ (igniter) ನಿರೂಪಣೆಗೊಂಡಾಗ ಮೊದಲ ಐವತ್ತು ಪ್ರಯೋಗಗಳನ್ನು ಅವನೊಬ್ಬನೇ ಜರುಗಿಸಿದ್ದ. ನಂತರವೇ ಇತರರ ಸಹಾಯ ಬಯಸಿದ್ದು. ಇದು ಅವನು ಜೀವನದ ಉದ್ದಕ್ಕೂ ಪಾಲಿಸಿಕೊಂಡು ಬಂದ ಕ್ರಮ. ಇದರೊಂದಿಗೆ ಆಲ್ಫ್ರೆಡ್ಡನಿಗಿದ್ದ ಅಪಾರ ಆತ್ಮವಿಶ್ವಾಸವನ್ನು ಮೆಚ್ಚಬೇಕಾಗಿದ್ದು.


ತಾನಾದರೋ ಪರಿಪೂರ್ಣತಾವಾದಿ (perfectionist) ಯಾಗಿದ್ದು ಮಿಕ್ಕವರಿಂದ ಸಾಕಷ್ಟು ಪ್ರಗತಿಯನ್ನು ನಿರೀಕ್ಷಿಸುತ್ತಿದ್ದ. ಆದರೆ ಎಂದಿಗೂ ದುರಾಡಳಿತ ಮಾಡಲಿಲ್ಲ. ಮೆಕ್ಯಾನಿಕಲ್ ಎಂಜಿನಿಯರಿಂಗ್, ಬೆಳಕು (optics), ಜೀವಶಾಸ್ತ್ರ, ಎಲೆಕ್ಟ್ರೋ ಕೆಮಿಸ್ಟ್ರಿ (electrochemistry) ಮುಂತಾದ ಕ್ಷೇತ್ರಗಳಿಗೆ ಸಂಬಂಧಿಸಿದ ಹಾಗೆ ಹಲವಾರು ಯೋಜನೆಗಳು, ವಿಚಾರಗಳು ಅವನಿಗೆ. ಇವುಗಳಲ್ಲಿ ಕೆಲವು ಅಸ್ವಾಭಾವಿಕ ಎಂಬುದು ಅವನಿಗೆ ತಿಳಿದಿತ್ತು; ಆದರೂ ಅವನ ಹುರುಪು ಇಂಗಲಿಲ್ಲ. "ನನಗೆ ವರ್ಷಕ್ಕೆ ೩೦೦ ಆಲೋಚನೆಗಳು ಬರಬಹುದು. ಆದರೆ ಇವುಗಳಲ್ಲಿ ಒಂದು ಕೈಗೂಡಿದರೂ ನಾನು ತೃಪ್ತ" ಎಂದು ಅವನು ಹೇಳಿದ್ದಾನೆ.

ದುರಂತ

ಸೆಪ್ಟೆಂಬರ್ ೩, ೧೮೬೪, ಶನಿವಾರ ಸುಂದರವಾದ ದಿನ. ತನ್ನ ಪ್ರಯೋಗಾಲಯದಲ್ಲಿ ಆಲ್ಫ್ರೆಡ್ ಗ್ಲಿಸೆರಿನ್ ದ್ರವ್ಯವನ್ನು ಶುದ್ಧೀಕರಿಸುತ್ತಿದ್ದ. ಅವನೊಡನೆ ತಮ್ಮ ಎಮಿಲ್ ಮತ್ತು ಮಿತ್ರ ಹೆರ್ಟ್ಸ್ ಮನ್ (Hertzmann) ರೈಲ್ವೇ ವಿಭಾಗದಿಂದ ಬಂದಿದ್ದ ಆರ್ಡರ್ ಒಂದರ ಪೂರೈಕೆಯಲ್ಲಿ ನಿರತರಾಗಿದ್ದರು. ಈ ವೇಳೆಗಾಗಲೇ ೨೫೦ ಪೌಂಡುಗಳಷ್ಟು  ನೈಟ್ರೋಗ್ಲಿಸೆರಿನ್ ದ್ರವ್ಯವನ್ನು ಸಿದ್ಧಪಡಿಸಲಾಗಿತ್ತು. ಹಲವಾರು ದಿನಗಳಿಂದ ಈ ದ್ರವ್ಯವನ್ನು ಅಲ್ಲಿ ಇರಿಸಲಾಗಿದ್ದು, ನೆರೆಹೊರೆಯವರು



ಮೃತನಾದ ಎಮಿಲ್ ನೊಬೆಲ್



ಉಂಟಾದ ಆಸ್ಫೋಟ

ಆಲ್ಫ್ರೆಡ್ನನಿಗೆ ಮುಂಬರಬಹುದಾದ ಅಪಾಯದ ಬಗ್ಗೆ ಸದಾ ಎಚ್ಚರ ನೀಡುತ್ತಿದ್ದರು. ಅಲ್ಲದೆ ಕಟ್ಟಡದ ಮಾಲಿಕನಿಗೆ ದೂರನ್ನೂ ಕೊಟ್ಟಿದ್ದಾಯಿತು. ಆದರೆ ಆಲ್ಫ್ರೆಡ್ ಇಲ್ಲಿ ಯಾವ ಅಪಾಯವೂ ಇಲ್ಲವೆಂದು ಅವರ ಮಾತನ್ನು ಕಿವುಡುಗೇಳಿದ. ಆದರೆ ಅವನಿಗೆ ನೈಟ್ರೋಗ್ಲಿಸೆರಿನ್ನಿನ ಶಕ್ತಿಯ ಪೂರ್ಣದರ್ಶನ  ಇನ್ನೂ ಆಗಿರಲಿಲ್ಲ.

ಇದ್ದಕ್ಕಿದ್ದಂತೆಯೇ ಗುಡುಗು ಹೊಡೆದಂತಾಗಿ, ಶೆಡ್ಡಿನಲ್ಲಿದ್ದ ಪ್ರಯೋಗಶಾಲೆಯಲ್ಲಿ ದೊಡ್ಡ ಸ್ಫೋಟ ಉಂಟಾಯಿತು.   ಅಲ್ಲದೆ ಸುತ್ತಮುತ್ತಲಿನ ಮನೆಯ ಕಿಟಕಿ, ಬಾಗಿಲುಗಳು ಹೊಡೆದುಕೊಂಡವು, ಕಟ್ಟಡಗಳು ಕಂಪಿಸಿದವು. ಇವೆಲ್ಲಕ್ಕಿಂತ ದೊಡ್ಡ ಹಾನಿ ಎಂದರೆ ಎಮಿಲ್ ಮತ್ತು ಹೆರ್ಟ್ಸ್ ಮನ್ ಸ್ಥಳದಲ್ಲಿಯೇ ಮೃತರಾದರು. ಜೊತೆಗೆ ಪ್ರಯೋಗಶಾಲೆಯ ಸೇವಕಿ ಕೂಡ. ಆಲ್ಫ್ರೆಡ್ ಮತ್ತಿತರು ಇದ್ದಲ್ಲಿಂದ ಎಸೆಯಲ್ಪಟ್ಟರು.

ಆಲ್ಫ್ರೆಡ್ನನ ಮೇಲೆ ಈ ದುರಂತ ಏನು ಪರಿಣಾಮ ಬೀರಿತೋ ಹೇಳುವುದು ಕಷ್ಟ. ಅವನಾದರೋ ತನ್ನ ಜೀವಿತವಿಡೀ ಈ ಬಗ್ಗೆ ದಿವ್ಯ ಮೌನ ತಾಳಿದ. ಆದರೆ ಈ ಸಂಗತಿ ತನ್ನ ಸಿಡಿಮದ್ದಿನ ಕನಸುಗಳನ್ನು ಭಸ್ಮ ಮಾಡಬಹುದು ಎಂಬ ಭೀತಿ ಅವನಿಗೆ ತಲೆದೋರಿದಂತಿದೆ.

ಆದರೂ ಆಲ್ಫ್ರೆಡ್ ದೃತಿಗೆಡಲಿಲ್ಲ. ಆದರೆ ಇದು ಅವನ ತಂದೆ ಇಮ್ಯಾನ್ಯುಯೆಲ್ಲನನ್ನು ಕಾಡಿದಂತಿದೆ. ಕೆಲವೇ ದಿನಗಳಲ್ಲಿ ಅವನು ಪಾರ್ಶ್ವವಾಯು ಪೀಡಿತನಾದ. ಓಡಾಟ ಅಸಾಧ್ಯವಾಯಿತು; ಎಂಟು ವರ್ಷಗಳ ಮುಂದೆ ಸಾವನ್ನಪ್ಪಿದ.   ಈ ಅವಧಿಯಲ್ಲಿ ಆಲ್ಫ್ರೆಡ್ ತಂದೆ ತಾಯಿಯರಿಗೆ ಬೇಕಾದ ಹಣವನ್ನು ಒದಗಿಸಿ ಅವರಿಗೆ ಯಾವುದೇ ಕೊರತೆ ತಲೆದೋರದಂತೆ ಮಾಡಿದ. ಅವನ ತಾಯಿ ಹೇಳಿದ್ದಾಳೆ - ದೇವರನಂತರ ನಮಗೆ ಆಲ್ಫ್ರೆಡ್ ಇದ್ದಾನೆ.

ಪ್ರಯೋಗಶಾಲೆಯ ಆ ಸ್ಫೋಟಕ್ಕೆ ಸ್ಟಾಕ್ ಹೋಮಿನ ಜನ  'ನೊಬೆಲ್ ಸ್ಫೋಟ' ಎಂಬ ಹೆಸರನ್ನು ನೀಡಿದರು. ಹೀಗಾದರೂ ಅವನು ಮಾತ್ರ ಮರುದಿನವೇ ತನ್ನ ಕೆಲಸಕ್ಕೆ ಹಾಜರ್ ಆಗಿದ್ದ ಎನ್ನಲಾಗಿದೆ.

ಅಣ್ಣ ರಾಬರ್ಟ್ ಆಲ್ಫ್ರೆಡ್ನನಿಗೆ ಬುದ್ಧಿ ಹೇಳಿ ಸಿಡಿಮದ್ದಿನ ಉದ್ದಿಮೆಯನ್ನು ತ್ಯಜಿಸು ಎಂಬ ಸಲಹೆ ನೀಡಿದ. ಆದರೆ ಅವನು ಸ್ವೀಡನ್ನಿಗೆ ಬಂದು ತಮ್ಮನ ಪ್ರಗತಿಯನ್ನು ಕಂಡು, ತಾನೇ ಫಿನ್ಲೆಂಡಿಗೆ ಹಿಂತಿರುಗಿ, ಹೆಲ್ಸಿಂಕಿಯ ಬಳಿ ಅದೇ ಉದ್ದಿಮೆಯನ್ನು ಕೈಗೊಂಡ! ಅಲ್ಲದೆ ಅದರ ವ್ಯಾಪಾರಕ್ಕೂ ಮುಂದಾದ.

# ೪. ಸಿಡಿಮದ್ದಿನ ಕಂಪೆನಿ

ಸ್ಟಾಕ್ ಹೋಮಿನ ಜನತೆ ಆಲ್ಫ್ರೆಡ್ಡನನ್ನು ಇನ್ನೂ ಶಪಿಸುತ್ತಲೇ ಇದ್ದರು. ಆದರೆ ಸ್ಫೋಟನೆ ಉಂಟಾದ ಕೆಲವೇ ದಿನಗಳ ನಂತರ ಸ್ವೀಡನ್ನಿನ ಡಾನೆಮೊರಾ ಮತ್ತು ಹೆರ್ರಾಂಗ್ ಗಳ ಗಣಿಗಳು ಅವನಿಂದ ಗಣನೀಯ ಪ್ರಮಾಣದಲ್ಲಿ ನೈಟ್ರೋಗ್ಲಿಸೆರಿನ್ ಕೊಳ್ಳಲು ಮುಂದೆ ಬಂದರು. ಇದಲ್ಲದೇ ಸ್ಫೋಟನೆಯಾಗಿ ಕೇವಲ ಐದು ವಾರಗಳಲ್ಲಿ ಸರ್ಕಾರದ ರೈಲ್ವೆ ವಿಭಾಗ ಸುರಂಗ ನಿರ್ಮಾಣದಲ್ಲಿ ನೊಬೆಲ್ ಸಿದ್ಧಪಡಿಸಿದ ಮಿಶ್ರಣವನ್ನು ಉಪಯೋಗಿಸುವುದಾಗಿ ಘೋಷಿಸಿತು. ಹೀಗಾಗಿ ಆಲ್ಫ್ರೆಡ್ಡನ ಯತ್ನಕ್ಕೆ ಸರ್ಕಾರದ ಬೆಂಬಲ ದೊರೆತಂತಾಯ್ತು.

ಆಲ್ಫ್ರೆಡ್ ಕಂಪೆನಿಯೊಂದನ್ನು ಕಟ್ಟಲು ಮುಂದಾದ. ಆದರೆ ಅದಕ್ಕೆ ಬಂಡವಾಳ ಎಲ್ಲಿಂದ ದೊರಕಬೇಕು? ಅವನ ಸುದೈವದಿಂದ ಇಬ್ಬರು ಸಿರಿವಂತರು ಪಾಲುದಾರರಾಗಲು ಮುಂದೆಬಂದರು. ೧೮೬೪ರ ಅಕ್ಟೋಬರ್ ೨೨ ರಂದು ಅವನು ಸಿಡಿಮದ್ದಿನ ತಯಾರಿಕೆಗಾಗಿ ತಲೆ ಎತ್ತಿದ ವಿಶ್ವದ ಪ್ರಥಮ ಕಂಪೆನಿಯನ್ನು ಸ್ಥಾಪಿಸಿದ. ಅದರಲ್ಲಿ ತನ್ನದು ಅರ್ಧಪಾಲು, ಮಿಕ್ಕ ಇಬ್ಬರದು ಇನ್ನರ್ಧ ಪಾಲು. ಇದರಲ್ಲಿ ಮೊದಲು ಬಂದ ತೊಡಕು ಎಂದರೆ ತಂದೆ ಇಮ್ಯಾನ್ಯುಯೆಲ್ ತಾನೇ ಡೈರೆಕ್ಟರ್ ಆಗ ಬೇಕೆಂದು ಹಟ ಹಿಡಿದು ಹೇಗೋ ಆ ಪದವಿಗೆ ಏರಿದ್ದು. ಎರಡನೆಯ ಸಮಸ್ಯೆ ಸ್ವೀಡನ್ನಿನ ಸರ್ಕಾರ ತನ್ನ ಭೂಪ್ರದೇಶದಲ್ಲಿ ಸಿಡಿಮದ್ದಿನ ತಯಾರಿಕೆಗೆ ಅನುಮತಿ ಕೊಡಲು ನಿರಾಕರಿದ್ದು. ಇದನ್ನು ಪರಿಹರಿಸಲು ಆಲ್ಫ್ರೆಡ್ ಬಂದರಿನಲ್ಲಿ ಲಂಗರು ಹಾಕಿದ್ದ ಹಡಗೊಂದನ್ನು ಕೊಂಡು ಅದರಲ್ಲಿ ತನ್ನ ಪ್ರಯೋಗಶಾಲೆಯನ್ನು ನಿರ್ಮಿಸಿದ. ಇಲ್ಲಿ ತಯಾರಾದ ನೈಟ್ರೋಗ್ಲಿಸೆರಿನ್ನನ್ನು ಒಂದು ಪೌಂಡಿಗೆ ೨.೫ ಕ್ರೌನುಗಳಂತೆ ಮಾರಿದ. ಇದು ೫೦ ಸೆಂಟಿಗೆ ಸಮಾನ. ಹೀಗೆ ಮುಂದೆ ಇಡೀ ವಿಶ್ವವನ್ನೇ ಆವರಿಸಿದ ಸಂಸ್ಥೆಯೊಂದು ಪ್ರಾರಂಭವಾಯಿತು.

ಪ್ರಾರಂಭದ ದಿನಗಳಲ್ಲಿ ಹಣ ಕಾಸು ಹೆಚ್ಚಾಗಿ ಇರಲಿಲ್ಲ. ಮಿತವ್ಯಯ ಮಾಡಬೇಕಾಯಿತು. ಆಲ್ಫ್ರೆಡ್ ಕಂಪೆನಿಯ ಮ್ಯಾನೇಜಿಂಗ್ ಡೈರೆಕ್ಟರ್, ತಯಾರಿಕಾ ವಿಭಾಗದ ಮುಖ್ಯಸ್ಥ, ಆರ್ಥಿಕ ಮ್ಯಾನೇಜರ್, ಜಾಹಿರಾತು ವಿಭಾಗದ ನೇತಾರ, ಹೀಗೆ ವಿವಿಧ ಹುದ್ದೆಗಳನ್ನು ಅಲಂಕರಿಸ ಬೇಕಾಯಿತು.  ಸಾಕಷ್ಟು ಜನ ಮತ್ತು ಸಂಸ್ಥೆಗಳಿಗೆ ಅವನ ಕಂಪೆನಿಯ ಬಗ್ಗೆ ಮತ್ತು ಅವನು ತಯಾರಿಸುವ ಮಿಶ್ರಣದ ಬಗ್ಗೆ ಮಾಹಿತಿ ದೊರೆಯಿತು. ಇದಲ್ಲದೇ ತಾನೇ ಶಿಲಾಶಯ (quarry) ಮತ್ತು ಗಣಿಗಳಿಗೆ ಭೇಟಿ ನೀಡಿ ತನ್ನ ಉತ್ಪನ್ನದ ಬಗ್ಗೆ ತಿಳಿಸಿಕೊಟ್ಟ -  ತನ್ನ ಮಿಶ್ರಣದ ಶಕ್ತಿ ಅಪಾರ,  ಅದರ ಸಹಾಯದಿಂದ ಬಂಡೆಯೊಡೆವುದು ತ್ವರಿತವಾಗುತ್ತದೆ, ಇದಕ್ಕೆ ಜನಬಲದ ಅವಶ್ಯಕತೆ ಕಡಿಮೆ.

ತನಗೆ ಬೇಕಿದ್ದ ಹಣ ಮತ್ತು ಸಹಕಾರ ದೊರೆತ ನಂತರ ಆಲ್ಫ್ರೆಡ್ ನೈಟ್ರೋಗ್ಲಿಸೆರಿನ್ನಿನ ತಯಾರಿಕೆಯನ್ನು ಪ್ರಾರಂಭಿಸಿದ. ತನ್ನ ಸಿಡಿಮದ್ದು ಏನೆಲ್ಲಾ ಮಾಡಬಲ್ಲುದು ಎಂಬುದನ್ನು ಪ್ರತ್ಯಕ್ಷವಾಗಿ ತೋರಿಸಲು ಅವನು ಯುವರಾಜ ಆಸ್ಕರನನ್ನು ವೀಕ್ಷಣೆಗೆ ಆಹ್ವಾನಿಸಿದ. ಬೆಟ್ಟವೊಂದರಲ್ಲಿ ಮೂವತ್ತು ಅಡಿ ಆಳದ ಗುಂಡಿಯನ್ನು ತೋಡಿ ಅದರಲ್ಲಿ ಆ ದ್ರವ್ಯವನ್ನು ತುಂಬಲಾಯಿತು. ಅದಕ್ಕೆ ಬೆಂಕಿ ತಗುಲಿದಾಗ ಇಡೀ ಬೆಟ್ಟವೇ ಮೇಲೇರಿದಂತೆ  ಭಾಸವಾಯಿತು. ಬೃಹತ್ ಗಾತ್ರದ ಬಂಡೆಯೊಂದು ಸಡಿಲವಾಯಿತು. ಪರಿಣಾಮ - ರಾಜಮನ್ನಣೆ ಮತ್ತು ಅಪಾರ ಪ್ರಚಾರ. ಅವನ ಕಾರ್ಖಾನೆಯಲ್ಲಿ ಪ್ರಾರಂಭದಲ್ಲಿ ನೂರು ಪೌಂಡು ದ್ರವ್ಯ ನಿರ್ಮಾಣವಾಗಿದ್ದರೆ ಕಾಲಕ್ರಮೇಣ ಅದು ತಿಂಗಳಿಗೆ ಎರಡು  ಟನ್ ಆಯಿತು.


ಡೆಟೋನೇಟಿಂಗ್ ಕ್ಯಾಪ್ (ಮುಚ್ಚಳ)

ಆಲ್ಫ್ರೆಡ್ಡಿಗಾದರೋ ಹಗಲು ರಾತ್ರಿ ಎಲ್ಲಾ ಕೆಲಸ. ಸದಾ ಸೀಮೆ ಎಣ್ಣೆ ದೀಪದಿಂದ ಪ್ರಜ್ವಲಿಸುತ್ತಿದ್ದ ಪ್ರಯೋಗಶಾಲೆ. ನೈಟ್ರೋಗ್ಲಿಸೆರಿನ್ ದ್ರವ್ಯ ಮತ್ತು ಗನ್ ಪೌಡರುಗಳ ಮಿಶ್ರಣಕ್ಕೆ ಅಗಾಧವಾದ ಶಕ್ತಿ ಇದ್ದದ್ದು ಸರಿಯೇ. ಆದರೆ ಅದನ್ನು ವ್ಯವಸ್ಥಿತವಾದ ರೀತಿಯಲ್ಲಿ, ನಿಯಂತ್ರಣಕ್ಕೆ ಒಳಪಡಿಸಿ ಸ್ಫೋಟಿಸುವುದು ದೊಡ್ಡ ಸವಾಲು ಎನಿಸಿತ್ತು. ೧೮೬೪ರಲ್ಲಿ ಅವನು ಡೆಟೋನೇಟಿಂಗ್ ಕ್ಯಾಪ್ ಎಂಬ ಹೊಸ ವಿಧಾನವನ್ನು ಕಂಡುಹಿಡಿದ. ಒಂದು ಕೊಳವೆಯಲ್ಲಿ ಮಿಶ್ರಣವನ್ನು ಒತ್ತಾಗಿ ಇರಿಸಿ, ಅದರ ತೆರೆದ ತುದಿಯಲ್ಲಿ ಮರದ ಚೂರಿನ ಮೂಲಕ ಬತ್ತಿಯೊಂದನ್ನು ಅಂಟಿಸಿದ. ಇದು ಪರಿಣಾಮಕಾರಿ ಎನಿಸಿದರೂ ಹೆಚ್ಚು ಪ್ರಮಾಣದ ಮಿಶ್ರಣವಿದ್ದಲ್ಲಿ ದಕ್ಷವಾದುದಲ್ಲ ಎನಿಸಿತು. ಪರಿಹಾರ ಕ್ರಮವಾಗಿ ಆಲ್ಫ್ರೆಡ್ ಪಾದರಸದ ಫಲ್ಮಿನೇಟ್ (mercury fulminate) ಎಂಬ ಸಿಡಿಯನ್ನು ವಸ್ತುವನ್ನು ಅಲ್ಪ ಪ್ರಮಾಣದಲ್ಲಿ ನೈಟ್ರೋ ಗ್ಲಿಸೆರಿನ್ ಜೊತೆಗಿರಿಸಿದ. ಅದಕ್ಕೆ ಬತ್ತಿಯೊಂದನ್ನು ಒದಗಿಸಿದ. ಇದು ಅತ್ಯಂತ ಸಮರ್ಥವಾದ ಸ್ಫೋಟಕ ಎನಿಸಿ ಅದರ ತಯಾರಿಕೆಯಲ್ಲಿ ಹೊಸ ಅಧ್ಯಾಯವನ್ನು ತೆರೆಯಿತು.



ಬಂಡೆಯ ಮೇಲಿರಿಸಿರುವ ಡೆಟೋನೇಟಿಂಗ್ ಕ್ಯಾಪ್

ಆಲ್ಫ್ರೆಡ್ ಎರಡು ವಿರೋಧಗಳನ್ನು ಎದುರಿಸ ಬೇಕಾಯಿತು. ಒಂದು, ಹೊಸದೇನನ್ನೂ ಒಪ್ಪಿಕೊಳ್ಳದ ಜಡ ಸಮಾಜ ಮತ್ತು ಸರ್ಕಾರ ವ್ಯವಸ್ಥೆ, ಎರಡು, ಅವನ ಪ್ರಯೋಗಶಾಲೆಯಲ್ಲಿ ಉಂಟಾದ ಅನಾಹುತಗಳನ್ನು ಎತ್ತಿಹಿಡಿದು ಅವನನ್ನು "ಮನುಜ ರೂಪದಲ್ಲಿ ಬಂದ ರಾಕ್ಷಸ" ಎಂದೆಲ್ಲ ಕರೆದ ಮಾಧ್ಯಮ. ಜನಾಭಿಪ್ರಾಯವನ್ನು ತಿದ್ದಲು ಆಲ್ಫ್ರೆಡ್ ಅಲ್ಲಿಂದಿಲ್ಲಿ ತಿರುಗುತ್ತಾ ಭಾಷಣಗಳನ್ನು ನೀಡಿ, ಪತ್ರಿಕೆಗಳಲ್ಲಿ ಪತ್ರಗಳನ್ನು ಬರೆದು, ಪ್ರದರ್ಶನಗಳನ್ನು ನೀಡಿ "ಸಮರ್ಥವಾದ ಸ್ಫೋಟಕ ರೂಪಿತವಾಗ ಬೇಕಾದರೆ ಸಾವು ನೋವುಗಳು ಅನಿವಾರ್ಯ" ಎಂದು ತಿಳಿಸಿದ.




ಡೆಟೋನೇಟಿಂಗ್ ಕ್ಯಾಪ್ ಬಳಕೆಯ ಹೊಸ ರೂಪ

ಕೆಲವೇ ವರ್ಷಗಳಲ್ಲಿ ಅವನು ಜರ್ಮನಿ, ನಾರ್ವೆ, ಸ್ವೀಡನ್ ಮತ್ತು ಆಸ್ಟ್ರಿಯಾಗಳಲ್ಲಿ ಘಟಕಗಳನ್ನು ತೆರೆಯುವುದು ಸಾಧ್ಯವಾಯಿತು. ನಂತರ ಇಂಗ್ಲೆಂಡ್ ಮತ್ತು ಫ್ರಾನ್ಸಿನಲ್ಲಿ ಕೂಡ. ಮಿಕ್ಕವರ ಟೀಕೆ ಟಿಪ್ಪಣಿಗಳನ್ನು ಕೆಲವೊಮ್ಮೆ ಸಹಿಸಲಾರದೆ ಅವನು ಊರನ್ನು ಬಿಟ್ಟು ಅಲ್ಲಿ ಇಲ್ಲಿ ಸಂಚರಿಸಿದ್ದೂ ಉಂಟು. ತಯಾರಿಕೆ ಮತ್ತು ಘಟಕಗಳ ಸಂಖ್ಯೆ ಹೆಚ್ಚುತ್ತಿದ್ದಂತೆ ನಕಲಿ ಸಂಸ್ಥೆಗಳು ಹುಟ್ಟಕೊಂಡವು, ನಕಲಿ ಅನ್ವೇಷಕರು ಉದ್ಭವಿಸಿದರು.  ಕೋರ್ಟು, ಕಛೇರಿ ಹತ್ತದೇ ವಿಧಿ ಇಲ್ಲ ಎನಿಸಿತು. ೧೮೮೦ರಲ್ಲಿಯೂ ಅವನು ಇಂತಹ ತಕರಾರುಗಳ ಇತ್ಯರ್ಥದಲ್ಲಿ ತೊಡಗಿದ್ದ ಎಂದರೆ ಅಶ್ಚರ್ಯವಾಗುತ್ತದೆ. ಅವನಿಗೆ ಬಹಳವಾಗಿ ತಲೆನೋವು ತಂದ ವ್ಯಕ್ತಿ ಎಂದರೆ ಶ್ಯಾಫ್ನರ್ (Shaffner) ಎಂಬಾತ. ಅಮೆರಿಕಾದಲ್ಲಿ ಈ ಉದ್ಯಮದಲ್ಲಿ ತೊಡಗುವ ಆಸೆ ಅವನಿಗೆ. ಹೀಗಾಗಿ ಆಲ್ಫ್ರೆಡ್ಡನಿಗೆ ಸಿಡಿಮದ್ದು ತಯಾರಿಸಲು ಅಮೆರಿಕಾದ ಪೇಟೆಂಟ್ ದೊರೆಯುವುದನ್ನು ತಪ್ಪಿಸಲು ನಾನಾ ಯತ್ನಗಳನ್ನು ಮಾಡಿದ. "ನಾನೇ ನೈಟ್ರೋಗ್ಲಿಸೆರಿನ್ ಮಿಶ್ರಣವನ್ನು ಕಂಡುಹಿಡಿದದ್ದು ಎಂದು ಸಾಧಿಸ ಹೊರಟ. ಆಲ್ಫ್ರೆಡ್ಡನಿಂದ ಹಣ ಕೀಳುವ ಪ್ರಯತ್ನ ಮಾಡಿದ. ಆದರೆ ನ್ಯಾಯಾಲಯದ ತೀರ್ಮಾನ ಅವನಿಗೆ ವಿರುದ್ಧವಾಗಿತ್ತು.

ಅಮೆರಿಕಾ

ಆಲ್ಫ್ರೆಡ್ಡನ ಮುಂದಿನ ಗುರಿ ಅಮೆರಿಕಾ ಆಗಿತ್ತು. ೧೮೬೬ರಲ್ಲಿ ಅಲ್ಲಿ  ಪ್ರವಾಸ ಕೈಗೊಂಡು ತನ್ನ ಉದ್ದಿಮೆಯನ್ನು ಮತ್ತಷ್ಟು ವಿಸ್ತರಿಸುವ ಯೋಜನೆ ಹಾಕಿಕೊಂಡ. ಅಮೆರಿಕಾದಲ್ಲಿ ನೈಟ್ರೋಗ್ಲಿಸೆರಿನ್ ಬಗ್ಗೆ ಗೌರವವಿದ್ದರೂ ಅದನ್ನು ಸಾಗಿಸುವಲ್ಲಿ ತೋರುವ ಅಪಾಯದ ಬಗ್ಗೆ ಬಹು ಅನುಮಾನವಿತ್ತು. ಸೀಸದ ಸೀಸೆಗಳಲ್ಲಿ ಅದನ್ನು ಸಾಗಿಸುವುದು ಪ್ರಾಣಕ್ಕೆ ಮತ್ತು ಕೈಕಾಲುಗಳಿಗೆ ಹಾನಿ ಎಂಬ ಬಲವಾದ ನಂಬಿಕೆ. ಇದನ್ನು ಅಲ್ಲಗೆಳೆಯಲು ಆಲ್ಫ್ರೆಡ್ ತನ್ನೊಡನೆ ಸದಾ ಎರಡು ಇಂತಹ ಸೀಸೆಗಳನ್ನು ಒಯ್ಯುತ್ತಿದ್ದ. ಯಾವ ಕ್ಷಣದಲ್ಲಾದರೂ ಅಪಾಯ ಸಂಭವಿಸಬಹುದಾಗಿತ್ತು. ಇದಲ್ಲದೇ ಆಲ್ಫ್ರೆಡ್ ಆಗಮಿಸಲು ಕೆಲದಿನಗಳಿದ್ದಂತೆ ನ್ಯೂಯಾರ್ಕಿನ ಹೊಟೆಲ್ ಒಂದರಲ್ಲಿ ಇಳಿದುಕೊಂಡಿದ್ದ ಜರ್ಮನ್ ಪ್ರಜೆಯೊಬ್ಬ ನೈಟ್ರೋಗ್ಲಿಸೆರಿನ್ ಉಳ್ಳ ಸೀಸೆಗಳನ್ನು ಒಂದು ಮರದ ಪೆಟ್ಟಿಗೆಯಲ್ಲಿ ಇರಿಸಿ ಅದನ್ನು ಅಲ್ಲಿಯ ರಿಸೆಪ್ಷನ್ ಬಳಿ ಬಿಟ್ಟು ಹೋದ, ಹಿಂತಿರುಗಿ ಬರಲಿಲ್ಲ. ಒಂದೆರಡು ದಿನಗಳ ನಂತರ ಪೆಟ್ಟಿಗೆಯಿಂದ ಹೊಗೆ ಆಡಲಾರಂಭಿಸಿತು. ಕೂಡಲೆ ಸೇವಕನೊಬ್ಬ ಅದನ್ನು ರಸ್ತೆಯ ಮೇಲೆ ಇರಿಸಿ ಪೊಲೀಸರಿಗೆ ಫೋನ್ ಮಾಡಿ ಹೇಳಿದ. ಅವನು ಫೋನನ್ನು ಕೆಳಗಿಡುವ ಮುಂಚೆಯೇ ಭಾರಿ ಆಸ್ಫೋಟ ಸಂಭವಿಸಿತು. ೧೯ ಜನರಿಗೆ ಗಾಯವಾಯಿತು. ಇದಲ್ಲದೇ ಅದೇ ಸಮಯದಲ್ಲಿ ಸಾಗರದಲ್ಲಿ  ನೈಟ್ರೋಗ್ಲಿಸೆರಿನ್ ಹೊತ್ತ ಎರಡು ಹಡಗುಗಳಲ್ಲಿ ಸ್ಫೋಟನೆಗಳಾಗಿ ೧೨೦ ಜನ ಮಡಿದಿದ್ದಲ್ಲದೆ ಸಾಕಷ್ಟು ಜನ ನೋವನ್ನನುಭವಿಸಿದರು. ದೂರದ ಆಸ್ಟ್ರೇಲಿಯಾದಲ್ಲಿಯೂ ಒಂದು ಅನಾಹುತವಾಗಿ ಸಾಕಷ್ಟು ಜನ ಅಸು ನೀಗಿದರು.  ಪತ್ರಿಕೆಗಳಿಗೆ ಸುಗ್ಗಿಯೋ ಸುಗ್ಗಿ! ಅಮೆರಿಕಾ ಆಲ್ಫ್ರೆಡ್ಡನನ್ನು ಬರಮಾಡಿಕೊಂಡ ವೈಖರಿಯನ್ನು ಹೇಳ ಬೇಕಾಗಿಯೇ ಇಲ್ಲ. ಅನಾಹುತಗಳ ಪುಷ್ಪಮಾಲೆ ಅವನ ಕೊರಳಿಗೆ!


ಹಡಗಿಳಿದವನೇ ಆಲ್ಫ್ರೆಡ್ ನ್ಯೂಯಾರ್ಕಿನ ಮೇಯರ್ ಮುಂತಾದವರನ್ನು ಬೇಟಿ ಮಾಡಿ ತನ್ನ ಸಿಡಿಮದ್ದು ಅಂತಹ ಅಪಾಯಕಾರಿಯಲ್ಲವೆಂದು ಸಾಧಿಸಿದ. ಅಲ್ಲದೆ ಪ್ರದರ್ಶನಗಳನ್ನೂ ನೀಡಿದ. ಪ್ರಯೋಜನವಾಗಲಿಲ್ಲ. ಅವನ ಅಹವಾಲನ್ನು ಅಮೆರಿಕನ್ನರು ಕೇಳುವ ಸ್ಥಿತಿಯಲ್ಲಿರಲಿಲ್ಲ. ಪತ್ರಿಕೆಗಳ ಸಂಪಾದಕೀಯಗಳು ಮತ್ತು ಓದುಗರ ಪತ್ರಗಳು ಅವನನ್ನು "ಸಾವು ಮತ್ತು ಅನಾಹುತಗಳ ಹರಿಕಾರ" ಎಂದು ವರ್ಣಿಸಿದವು.

ಎಚ್ಚೆತ್ತ ಆಲ್ಫ್ರೆಡ್. ನೈಟ್ರೋಗ್ಲಿಸೆರಿನ್ ಇನ್ನೂ ಸುಧಾರಿಸ ಬೇಕು. ಅದನ್ನು ಸಾಗಾಣಿಕೆಗೆ ಯೋಗ್ಯ, ನಿರಪಾಯಕಾರಿ ಎನಿಸಬೇಕು. ನ್ಯೂಯಾರ್ಕಿನಲ್ಲಿಯೇ ಒಂದೆರಡು ಪ್ರಯೋಗಗಳನ್ನು ಮಾಡಿದ. ಮೀತೈಲ್ ಆಲ್ಕೊಹಾಲ್ (ಒಂದು ಬಗೆಯ ಮಧ್ಯಸಾರ) ಮಿಶ್ರ ಮಾಡಿದರೆ ನೈಟ್ರೋಗ್ಲಿಸೆರಿನ್ನಿನ ಸ್ವಯಂ ಸ್ಫೋಟಕ ಗುಣವನ್ನು ಕಡಿಮೆ ಮಾಡಬಹುದು ಎಂಬುದು ಹೊರ ಬಂದಿತು. ಕೂಡಲೇ ಅದಕ್ಕೆ ಪೇಟೆಂಟ್ ಪಡೆದ. ಇದಲ್ಲದೆ ಅಮೆರಿಕಾದ ಉದ್ದಿಮೆಕಾರ ಬುರ್ಸ್ಟೆನ್ ಬೈಂಡರ್ ಎಂಬಾತ ಆಲ್ಫ್ರೆಡ್ಡನೊಡನೆ ಒಪ್ಪಂದ ಮಾಡಿಕೊಂಡು ಅಲ್ಲಿ ಸಿಡಿಮದ್ದು ತಯಾರಿಸಲು ಮುಂದೆ ಬಂದ. ಆದರೆ ಆ ವೇಳೆಗೆ ಇನ್ನೂ ಅಮೆರಿಕನ್ ಸರ್ಕಾರ ಅಲ್ಫ್ರೆಡ್ಡನಿಗೆ ಅನುಮತಿ ನೀಡಿರಲಿಲ್ಲ. ಜರ್ಮನಿಯಲ್ಲಿನ ಕಾರ್ಖಾನೆಯೊಂದರಲ್ಲಿ ನೈಟ್ರೋಗ್ಲಿಸೆರಿನ್ ಸಿಡಿದು ಅಪಾರ ಹಾನಿಯುಂಟಾಯಿತು. ಹೀಗೆಯೇ ಬಿಟ್ಟಿದ್ದರೆ ಅವನಿಗೆ ಅಮೆರಿಕಾದ ಅನುಮತಿ ಕನಸಾಗುತ್ತಿತ್ತು. ವ್ಯವಹಾರ ಚತುರ ಆಲ್ಫ್ರೆಡ್ ಈಗ ಶಾಫ್ನರ್ ಜೊತೆಯೇ ಒಪ್ಪಂದ ಮಾಡಿಕೊಂಡು ಅವನಿಗೆ ಅಮೆರಿಕಾದಲ್ಲಿ ಸಿಡಿಮದ್ದು ತಯಾರಿಸಲು ಸಹಾಯ ಮಾಡಲು ಸಿದ್ಧನಾದ. ಕಾರಣ ಇಷ್ಟೆ, ಶಾಫ್ನರ್ ಅವನಿಗೆ ಸರ್ಕಾರದ ಪ್ರಭಾವಿತ ಜನರ ಪರಿಚಯವಿತ್ತು. ಅವನು ಹೇಗೋ ಸರ್ಕಾರದ ಅನುಮತಿ ಗಿಟ್ಟಿಸುವುದು ಖಚಿತ ಎನಿಸಿತ್ತು. ಹೀಗಾಗಿ ಅವನಿಗೆ ಕೇವಲ ಒಂದು ಡಾಲರಿಗೆ ಹಕ್ಕುಗಳನ್ನು ಮಾರಿದ  ಆಲ್ಫ್ರೆಡ್. ಕೆಲವು ಷರತ್ತುಗಳನ್ನು ಹಾಕಿ ಅಮೆರಿಕಾ ಸರ್ಕಾರ ಶಾಫ್ನರನಿಗೆ ನೈಟ್ರೋ ಗ್ಲಿಸೆರಿನ್ನನ್ನು ಸ್ಥಳದಿಂದ ಸ್ಥಳಕ್ಕೆ ಸಾಗಿಸಲು ಅನುಮತಿ ನೀಡಿತು. ಆದರೆ ಅದು ಮಿಲಿಟರಿ ಬಳಕೆಗೆ ಮಾತ್ರವಾಗಿತ್ತು. ಮುಂದೆ ಅದೇ ಸರ್ಕಾರ ಆಲ್ಫ್ರೆಡ್ ನೊಬೆಲನಿಗೂ ಅದರ ತಯಾರಿಕೆಗೆ ಪೇಟೆಂಟ್ ನೀಡಿತು. ಅಮೆರಿಕಾದ ಫಲವತ್ತಾದ ಮಾರ್ಕೆಟ್ ಅವನ ಜೇಬಿನೊಳಗಿತ್ತು ಈಗ. ಹೀಗಾದರೂ ಅಮೆರಿಕಾಕ್ಕೆ ಅವನು ಮತ್ತೆ ಹೋಗಲಿಲ್ಲ. ಅಮೆರಿಕಾದಲ್ಲಿ ಹಣದ ಮೇಲಿನ ಒತ್ತು ವಿಪರೀತವಾಗಿ ಸಮಾಜದಲ್ಲಿನ ಅನೇಕ ಸುಖಗಳನ್ನು ಅದು ಕೊಲ್ಲುತ್ತದೆ, ಕೇವಲ ಕೃತಕ ಅವಶ್ಯಕತೆಗಳಿಗಾಗಿ ಜನ ಹಾತೊರೆಯುತ್ತಾರೆ ಎಂದು ತನ್ನ ಮಿತ್ರನಿಗೆ ಪತ್ರ ಬರೆದಿದ್ದಾನೆ ಆಲ್ಫ್ರೆಡ್.

ಜರ್ಮನಿಯ ಕಾರ್ಖಾನೆ ಆರ್ಥಿಕವಾಗಿ ಹಿಂದುಳಿದಿತ್ತು. ಅಲ್ಲಿನ ವ್ಯಾಪಾರವನ್ನು ಹತೋಟಿಗೆ ತಂದು ಅದು ಲಾಭ ತರುವಂತೆ ಮಾಡಿದ ಆಲ್ಫ್ರೆಡ್. ಅಲ್ಲಿಗೆ ಸ್ವೀಡನ್ನಿನಿಂದ ನುರಿತ ಕಾರ್ಮಿಕರನ್ನು ಕರೆಸಿಕೊಂಡ. ಅವರಿಗೆ ಸಾಕಷ್ಟು ವೇತನ ನೀಡಿ ಕಾರ್ಖಾನೆಯ ಕೆಲಸವನ್ನು ಹದಕ್ಕೆ ತಂದ. ಈ ದಿಸೆಯಲ್ಲಿ ಅವನಿಗೆ ನೆರವಾದವನು ಅವನ ಬಾಲಗೆಳೆಯ ಲೈಡ್ ಬೆಕ್ (Lied Beck). ಅವನು ಆಲ್ಫ್ರೆಡ್ಡನಿಗೆ ಸಲಹಾಗಾರನಾಗಿದ್ದ. ಅವನೊಡನೆ ಚರ್ಚಿಸದೆ ಆಲ್ಫ್ರೆಡ್ ಯಾವುದೇ ಆರ್ಥಿಕ ಅಥವಾ ತಾಂತ್ರಿಕ ನಿರ್ಧಾರವನ್ನೂ ತೆಗೆದುಕೊಳ್ಳುತ್ತಿರಲಿಲ.

ಡೈನಮೈಟ್ ಜನನ

ತನ್ನ ಸಿಡಿಮದ್ದಿನ ಮತ್ತಷ್ಟು ನ್ಯೂನತೆಗಳು ಪತ್ತೆ ಆದವು. ಯಾವುದಾದರೂ ಸ್ಫೋಟಕ್ಕೆ ಉಪಯೋಗಿಸಿದ ನಂತರ ಅಲ್ಲಿಯೇ ಉಳಿದ ದ್ರವ್ಯ ಬಂಡೆಗಳ ಮಧ್ಯೆ ಹೊಕ್ಕು ಅಪಾಯಕ್ಕೆ ಕಾರಣವಾಗುತ್ತಿತ್ತು. ಅಲ್ಲದೇ ಸಾಮಾನ್ಯ ಉಷ್ಣತೆಯಲ್ಲಿಯೇ ಆ ದ್ರವ್ಯ ಘನೀಕರಿಸುತ್ತಿತ್ತು. ಈಗ ಆಲ್ಫ್ರೆಡ್ ಇಂತಹ



ಅಂದಿನ ಡೈನಮೈಟ್

ಸಮಸ್ಯೆಗಳನ್ನು ಬಗೆಹರಿಸಿ ದ್ರವ್ಯವನ್ನು ಸುಲಭವಾಗಿ ಸಾಗಾವಣೆ ಮಾಡುವ ವಿಧಾನಗಳ ಬಗ್ಗೆ ಆಲೋಚಿಸಿದ.

ತನ್ನ ಊರಿನ ನದಿಯ ತೀರದಲ್ಲಿ ಅಪಾರ ಪ್ರಮಾಣದಲ್ಲಿದ್ದ ಕೈಸೆಲ್ಗುರ್ (kieselguhr) ಎಂಬ ಮಣ್ಣಿನತ್ತ ತನ್ನ ದೃಷ್ಟಿ ಹಾಯಿಸಿದ. ನದಿಗಳಲ್ಲಿ ಮತ್ತು ಸಾಗರಗಳಲ್ಲಿ ಬೆಳೆಯುವ ಪಾಚಿ ಒಣಗಿದಾಗ ಉಂಟಾಗುವ ಈ ವಸ್ತುವಿಗೆ ಡೈಆಟೋಮೈಟ್ (diatomite) ಎಂಬುದು  ಮತ್ತೊಂದು  ಹೆಸರು.  ಈ ವಸ್ತು ಮರಳಿನಗಾತ್ರದ್ದು ಮತ್ತು ಬಿಳಿಯ ಬಣ್ಣದ್ದು.  ಇಂದಿಗೂ ಟೂತ್ಪೇಸ್ಟ್ ಮತ್ತು  ವಿದ್ಯುತ್ ಪ್ರವಾಹವನ್ನು ತಡೆಯುವ ಇನ್ಸುಲೇಟರುಗಳಲ್ಲಿ  ಇದನ್ನು ಉಪಯೋಗಿಸುತ್ತಾರೆ.  ಶೇಕಡ ೨೫ ಕಿಸೆಲ್ಗುರ್ ಮತ್ತು ಶೇಕಡಾ ೭೫ ನೈಟ್ರೋಗ್ಲಿಸೆರಿನ್ ಮಿಶ್ರ ಮಾಡಿದರೆ ಅತ್ಯಂತ ಶಕ್ತಿಶಾಲಿ ಸಿಡಿಮದ್ದು ಪರಿಣಮಿಸುತ್ತದೆ ಎಂಬುದು ಹೊರಬಂದಿತು. ಅದೂ ಅಲ್ಲದೆ ಬರುವ ಮಿಶ್ರಣ ಘನ (solid) ರೂಪದ್ದು, ಸಾಗಾವಣೆ ಬಹಳ ಸುಲಭ. ಇದರ ಪ್ರಯೋಜನವನ್ನುಒಮ್ಮೆಗೇ ಗ್ರಹಿಸಿದ ಆಲ್ಫ್ರೆಡ್ ಇದಕ್ಕಾಗಿ ಪೇಟೆಂಟ್ ಪಡೆದ. ಆಗ ಅದಕ್ಕೆ ಅವನಿತ್ತ ಹೆಸರು -ಡೈನಮೈಟ್. ಗ್ರೀಕ್ ಮೂಲದ ಈ ಪದದ ಅರ್ಥ ಶಕ್ತಿಶಾಲಿ ಎಂದು.

ಕೆಂಪು ಮತ್ತು ಹಳದಿ ಮಿಶ್ರಿತ ಬಣ್ಣ, ಮೃದುವಾದ ಮತ್ತು ಚಿಕ್ಕ ಕಾಗದದಿಂದ ಆವರಿಸಲ್ಪಟ್ಟ ಕೊಳವೆಗಳಲ್ಲಿ ಇರಿಸಲಾದ ವಸ್ತುವಾಗಿತ್ತು ಡೈನಮೈಟ್. ನಂತರದ ದಿನಗಳಲ್ಲಿ ಇದರ ಸಂಯೋಜನೆ ಬದಲಾಗಿ ಅದರಲ್ಲಿ ಶೇಕಡಾ ೫೦-೭೦ ಆಸ್ಫೋಟಕ ಜಿಲಾಟಿನ್, ಶೇಕಡಾ ೨೪ - ೪೫ ಅಮೋನಿಯಮ್ ನೈಟ್ರೇಟ್ ಮತ್ತು ಶೇಕಡಾ ೨ -೫ ಮರದ ಪುಡಿ ಕೂಡಿರುತ್ತಿತ್ತು. ಬಂಡೆಗಳಲ್ಲಿ ಒಂದು ರಂಧ್ರವನ್ನು ಕೊರೆದು  ಇಂತಹ ಕೊಳವೆಗಳನ್ನು ಇರಿಸಲಾಗುತ್ತದೆ. ನಂತರ ಕೊಳವೆಗೆ ಬೆಂಕಿ ತಗುಲಿಸಿದರೆ ಆಸ್ಫೋಟ ಉಂಟಾಗಿ ಬಂಡೆ ಒಡೆದು ಸಿಡಿಯುತ್ತದೆ.

ಕೂಡಲೆ ಜರ್ಮನಿಯಲಿ ಆಲ್ಫ್ರೆಡ್ ನೊಬೆಲ್ "ಡೈನಮೈಟ್ ರಾಜ" ಎಂದು ಪ್ರಖ್ಯಾತನಾದ. ಅವನು ಶಾಂತಿ ಉದ್ದೇಶಕ್ಕಾಗಿ ಅದು ಬಳಕೆಯಾಗುತ್ತದೆ ಎಂದು ಎಣಿಸಿದ್ದ. ಆದರೆ ರಷ್ಯಾದಲ್ಲಿ ಅದು ತದ್ವಿರುದ್ಧವಾಯಿತು. ಬಂಡಾಯಗಾರರಿಗೆ ಅದು ಬಹು ಸುಲಭದ ಆಯುಧವಾಯಿತು. ಹಿಂದಿದ್ದ ಗನ್ ಪೌಡರಿಗಿಂತ ಡೈನಮೈಟಿನಿಂದ ಜನರನ್ನು ಕೊಲ್ಲುವುದು ಸರಾಗ ಎನಿಸಿತು. ಅದು ಹೊರಬಂದ ಒಂದು ವರ್ಷದಲ್ಲಿಯೇ ಇದನ್ನು ಉಪಯೋಗಿಸಿಯೆ ಕ್ಸಾರ್ ಅಲೆಕ್ಸಾಂಡರನ ಕೊಲೆಯೂ ಆಯಿತು.

# 4. ಪ್ಯಾರಿಸ್ ನನ್ನ ರಾಜಧಾನಿ



ಪ್ಯಾರಿಸ್ಸಿನಲ್ಲಿ ಆಲ್ಫ್ರೆಡ್ಡನ ಮನೆ

ಡೈನಮೈಟ್ ಮಾರುಕಟ್ಟೆಗೆ ಬರುತ್ತಿದ್ದಂತೆ ಅದರ ವ್ಯಾಪಾರ ಅವ್ಯಾಹತವಾಗಿ ಸಾಗಿ ಅನೇಕ ಹೊಸ ಗಿರಾಕಿಗಳು ದೊರಕಿದರು. ಸದಾ ಟ್ರೈನುಗಳಲ್ಲಿ ಸಂಚರಿಸುತ್ತಾ ಊರಿನಿಂದ ಊರಿಗೆ ಹೋಗಿ ಸಾಕಷ್ಟು ಪ್ರಚಾರ ಮಾಡಿ ತನ್ನ ಉದ್ದಿಮೆಯನ್ನು ಆಲ್ಫ್ರೆಡ್ ಎಚ್ಚರಿಕೆಯಿಂದ ಕಾಪಾಡಿಕೊಂಡು ಬಂದ, ಹಾಗೆಯೇ ಬೆಳೆಸುತ್ತಲೂ ಇದ್ದ. ಮುಂದೆ ಅವನ ಗುರಿ ಬ್ರಿಟನ್ನಿನಲ್ಲಿ ತನ್ನ ಉದ್ದಿಮೆಯನ್ನು ಹೂಡುವುದು. ಅಲ್ಲಿದ್ದ ಧನಿಕರನ್ನು ಸಂಪರ್ಕಿಸಿ ಅಲ್ಲಿಯೂ ಸಂಚಾರ ಆರಂಭಿಸಿದ. ಅಬೆರ್ಡೀನ್, ಗ್ಲಾಸ್ಗೋ, ಬ್ರಿಸ್ಟಲ್ ಮುಂತಾದ ನಗರಗಳಿಗೆ ತನ್ನ ಸೂಟ್ ಕೇಸ್ ಹಿಡಿದು ಆಗಮಿಸಿದ. ಅದರಲ್ಲಿ ೨೦ ಪೌಂಡುಗಳಷ್ಟು ಡೈನಮೈಟ್. ಎಲ್ಲಿಯಾದರೂ ಸಿಕ್ಕಿ ಬಿದ್ದಿದ್ದರೆ ಎರಡು ವರ್ಷ ಜೈಲ್ ವಾಸ ಗ್ಯಾರೆಂಟಿಯಾಗುತ್ತಿತ್ತು. ನುರಿತ ಉದ್ಯಮಿ ಅವನು ವ್ಯವಹಾರದಲ್ಲಿ ಅತಿ ಚತುರ. ಹೀಗಾಗಿ ೧೮೭೦ರ ವೇಳೆಗೆ ಅವನು ಯೂರೋಪಿನ ಪ್ರತಿಯೊಂದು ದೇಶದೊಡನೆಯೂ ಆರ್ಥಿಕ ಸಂಪರ್ಕ ಹೊಂದಿದ್ದ. ಅಲ್ಲದೆ ಕಾಲಕ್ರಮೇಣ ಅವನು ಪ್ಯಾರಿಸಿನಲ್ಲಿ ಹೆಚ್ಚು ಸಮಯ ಕಳೆದ. ಅದು ಅವನ ವಾಣಿಜ್ಯ ರಾಜಧಾನಿಯಾಯಿತು. ೧೮೭೩ರಲ್ಲಿ ಅವನ ಸಂಚಾರ ಕಡಿಮೆಯಾಗಿ ಅವನು ಪ್ಯಾರಿಸ್ಸಿನಲ್ಲಿ ಬಂದು ನೆಲೆಸಿದ.

ಅನೇಕ ರೀತಿಗಳಲ್ಲಿ ಪ್ಯಾರಿಸ್ ಅವನ ಮೆಚ್ಚಿನ ಪಟ್ಟಣವಾಯಿತು. ಹದಿನೇಳು ವರ್ಷದ ಯುವಕನಾಗಿದ್ದಾಗಲೇ ಅದಕ್ಕೆ ಮಾರು ಹೋಗಿದ್ದ. ಗಣನೀಯ ಘಟನೆಗಳೆಲ್ಲಾ ಅಲ್ಲಿಯೇ ಜರುಗುವುವು ಎಂಬ ನಂಬಿಕೆ ಬೇರೆ ಅವನಿಗೆ. ಫ್ರೆಂಚ್ ಭಾಷೆಯಲ್ಲಿ ಪರಿಣತಿ ಇದ್ದುದಲ್ಲದೇ ಅದರ ಸಾಹಿತ್ಯಾಭಿಮಾನಿ ಅವನು. ವಿಕ್ಟರ್ ಹ್ಯೂಗೋ ಜೊತೆ ಗೆಳೆತನವನ್ನೂ ಬೆಳೆಸಿದ್ದ. ಕಾಲಕ್ರಮೇಣ ಅವನ ಸ್ವೀಡಿಷ್ ಬರವಣಿಗೆಯಲ್ಲಿ ಫ್ರೆಂಚ್ ಬೆರೆಯ ತೊಡಗಿತು.

ಇದೆ ತನ್ನ ಮನೆಯೆಂದು ಬಗೆದ ಆಲ್ಫ್ರೆಡ್ ಪ್ಯಾರಿಸ್ಸಿನಲ್ಲಿ ದೊಡ್ಡ ಬಂಗಲೆಯನ್ನು ಕೊಂಡ. ಸುತ್ತಾ ಹಸಿರು. ಮನೆಯನ್ನು ಪ್ರವೇಶಿಸುತ್ತಿದ್ದಂತೆ ಒಂದೆಡೆ ಅವನ ಪ್ರಯೋಗಾಲಯ, ಮತ್ತೊಂದೆಡೆ ಪುಸ್ತಕಭಂಡಾರ. ಕೆಲವು ಕೊಠಡಿಗಳಿಗೆ ಗಾಜಿನ ಸೂರುಗಳು, ಮೇಲಿನಿಂದ ಇಳಿಯಬಿಟ್ಟ ಚಿತ್ರಮಯ ಪರದೆಗಳು, ದೊಡ್ಡ ತೂಗುದೀಪಗಳು, ಸಂಗೀತದ ಸ್ವರಪುಸ್ತಕಗಳು, ಚಿತ್ರಪಠಗಳು, ಎಲ್ಲೆಲಿಯೂ ವೈಭವ. ಆಲ್ಫ್ರೆಡ್ಡನಿಗೆ ಪ್ರಿಯವಾದದ್ದು ಎರಡು ವಸ್ತುಗಳು - ಆರ್ಕಿಡ್ ಹೂವುಗಳು ಮತ್ತು ಕುದುರೆ. ತನಗಾಗಿ ಸೈಂಟ್ ಪೀಟರ್ಸ್ ಬರ್ಗಿನಿಂದ ಎರಡು ಕುದುರೆಗಳನ್ನು ತರಿಸಿಕೊಂಡ.

ಆಲ್ಫ್ರೆಡ್ ತನ್ನ ದಿನದ ಬಹುಭಾಗವನ್ನು ಪ್ರಯೋಗಾಲಯದಲ್ಲಿ ಕಳೆಯುತ್ತಿದ್ದ. ಇದಲ್ಲದೆ ಅವನು ಪ್ಯಾರಿಸ್ಸಿನ ಮತ್ತೊಂದು ಭಾಗದಲ್ಲಿ ಜಮೀನನ್ನು ಕೊಂಡು ಮತ್ತೊಂದು ಪ್ರಯೋಗಾಲಯವನ್ನು ನಿರ್ಮಿಸಿದ. ಬೆಳಿಗ್ಗೆ ತನ್ನ ಮನೆಯಿಂದ ಅಲ್ಲಿಗೆ ತೆರಳಿ ತನ್ನ ಕೆಲಸ ಒಂದು ಹಂತವನ್ನು ತಲಪುವವರೆಗೆ, ಕೆಲ ದಿನಗಳಾದರೂ ಸರಿಯೇ, ಅಲ್ಲಿಯೇ ಇರುವುದು ವಾಡಿಕೆ ಆಯಿತು.

ಮನೆಯಲ್ಲಿ ತನಗೆ ನೆರವಾಗುವ ಸೇವಕನೊಬ್ಬ, ಇವನೇ ಮನೆಯ ಉಸ್ತುವಾರಿಯನ್ನೂ ವಹಿಸುತ್ತಿದ್ದ. ಆಲ್ಫ್ರೆಡ್ ತನ್ನ ದೇಶಾವರಿ ಸಂಚಾರ ಮುಗಿಸಿ ಬಂದಾಗ ಪತ್ರಗಳ ರಾಶಿ, ಆಹ್ವಾನಗಳು, ಹಣಕ್ಕಾಗಿ ಬೇಡಿಕೆಗಳು ಅವನನ್ನು ಕಾಯುತ್ತಿದ್ದವು. ಅವನು ತನ್ನ ಉದ್ದಿಮೆಯಲ್ಲಿ ಯಶಸ್ಸು ಗಳಿಸುತ್ತಿದ್ದಂತೆ, ಅವನಿಂದ ಹಣ, ನೆರವು ಬೇಡುವ ಜನರ ಸಂಖ್ಯೆಯೂ ಬೆಳೆಯತೊಡಗಿತು. ಪ್ರಪಂಚದ ಮೂಲೆ ಮೂಲೆಗಳಿಂದ ಬೇಡಿಕೆಗಳು ಬರುತ್ತಿದ್ದವು. ಪ್ರತಿದಿನವೂ ೨೫ ಅರ್ಜಿಗಳು ಬಂದರೆ, ಅವನಿಗೆ ಬಂದ ಬೇಡಿಕೆ ಹಣದ ಮೊತ್ತ ೨೦,೦೦೦ ಕ್ರೌನುಗಳಾಗುತ್ತಿತ್ತು (ಅಂದಿನ ೪೦೦೦ ಡಾಲರುಗಳು). "ನಾನು ಉದಾರಿ ಎಂಬ ಹೆಸರು ಪಡೆಯದೆ, ಜಿಪುಣನಾಗಿ ಪ್ರಸಿದ್ಧನಾಗಬೇಕಿತ್ತು" ಎಂದು ನುಡಿಯುತ್ತಿದ್ದ ಆಲ್ಫ್ರೆಡ್.

ಆಲ್ಫ್ರೆಡ್ ಸದಾ ಹಾಗೆ ಮುಚ್ಚಿದ ಕೈಯವನಾಗಿರಲಿಲ್ಲ. ಅವನ ಸೇವಕಿ ಒಬ್ಬಳಿಗೆ ಮದುವೆ ಆಗುವುದಿತ್ತು. ಅವನು ಅವಳನ್ನು ಕೇಳಿದ - ನಿನ್ನ ಮದುವೆಗೆ ಏನು ಉಡುಗೊರೆ ಕೊಡಲಿ? ಅದಕ್ಕೆ ಅವಳು ಉತ್ತರ ನೀಡಿದಳು - ಯಜಮಾನರೇ, ನಿಮ್ಮ ಒಂದು ದಿನದ ಸಂಪಾದನೆಯನ್ನು ಕೊಡುವುದಾದರೆ ಸಂತೋಷ. ಅವಳು ಕೇವಲ ಹಾಸ್ಯಕ್ಕೆ ಹೀಗಾಡಿರಲೂ ಸಾಧ್ಯ. ಆದರೆ ಆಲ್ಫ್ರೆಡ್ ಯೋಚಿಸಲೇ ಇಲ್ಲ. ಕೂಡಲೆ ಅವಳಿಗೆ ೪೦,೦೦೦ ಫ್ರಾಂಕುಗಳ (ಇಂದಿನ ೧೧೦,೦೦೦ ಡಾಲರ್) ಚೆಕ್ ನೀಡಿದ. ಈ ಮೊತ್ತ ಅವಳ ಜೀವಮಾನಕ್ಕೇ ಅತಿಯಾಗಿತ್ತು!

ಅವನ ಮನೆಗೆ ಪ್ರವೇಶ ಗಿಟ್ಟಿಸುವುದು ಸುಲಭವಾಗಿರಲಿಲ್ಲ. ಹೀಗಾದರೂ ಕೆಲವರು ಹೇಗೋ ಒಳಬಂದು ಅವನಲ್ಲಿ ನೆರವು ಬೇಡುತ್ತಿದ್ದರು. ಆಲ್ಫ್ರೆಡ್ 'ಅವರ ತಂದೆ ಹುಟ್ಟಿದ್ದು ಎಲ್ಲಿ? ಎಂತಹ ದೇವರನ್ನು ಅವನು ಪೂಜಿಸುತ್ತಾನೆ? ಅವನು ಯಾವ ದೇಶದವನು?" ಇಂತಹ ಪ್ರಶ್ನೆಗಳನ್ನು ಕೇಳುತ್ತಿರಲಿಲ್ಲ. ಹಣ ಕೊಡಬೇಕು ಎನಿಸಿದರೆ ಕೊಟ್ಟುಬಿಡುತ್ತಿದ್ದ.

ಪ್ರತಿದಿನ ಪತ್ರಗಳನ್ನು ತೆರೆದು ಓದಿದ ನಂತರ, ಜಗತ್ತಿನ ಅನೇಕ ವೃತ್ತಪತ್ರಿಕೆಗಳನ್ನು ತಿರುವಿ ಹಾಕುತ್ತಿದ್ದ. ತನ್ನ ಉತ್ಪನ್ನಗಳ ಬಗ್ಗೆ, ತಾನು ಹಾಜರಾಗಿದ್ದ ಕೋರ್ಟು ಕೇಸುಗಳ ಬಗ್ಗೆ ಅವು ಏನು ಹೇಳಿವೆ ಎಂಬುದನ್ನು ತಪ್ಪದೇ ನೋಡುತ್ತಿದ್ದ. ತನ್ನ ಪ್ರಯೋಗಶಾಲೆಯಲ್ಲಿ ಸಾಕೆನಿಸಿದಾಗ ಅಥವಾ ಮೀಟಿಂಗುಗಳ ಮಧ್ಯೆ ಪ್ಯಾರಿಸ್ಸಿನ ಬೂಲೆವಾರ್ಡುಗಳಲ್ಲಿ ವಾಕಿಂಗ್ ಹೋಗುತ್ತಿದ್ದ. ದಾರಿಯಲ್ಲಿ ಕಂಡುಬರುತ್ತಿದ್ದ ಕೆಫೆಗಳಲ್ಲಿ ಕಾಫಿ ಕುಡಿಯುವುದೇ ಮೋಜು ಎನ್ನಿಸಿತು. ಮನೆಯಲ್ಲಿ ಬೇಸರ ಎನಿಸಿದಾಗ ತನ್ನ ಮನೆಯಿದ್ದ ರಸ್ತೆಯಲ್ಲಿಯೇ ಇದ್ದ ಹೊಟೆಲೊಂದರಲ್ಲಿ ಸರಳ ಭೋಜನವನ್ನು ಉಂಡು ತನ್ನ ಸಮಸ್ಯೆಗಳ ಬಗ್ಗೆ ಯೋಚಿಸುತ್ತಿದ್ದ.

ಅವನಿಗೆ ಯೌವನ ಎಂಬುವುದು ಇತ್ತೇ ಇಲ್ಲವೇ ಹೇಳುವುದು ಕಷ್ಟ. ನಲವತ್ತನೇ ವರ್ಷದಲ್ಲಿಯೇ ಗೂನು ಬೆನ್ನು. ಪುಟ್ಟ ಪುಟ್ಟ ಹೆಜ್ಜೆ ಇಡುತ್ತಾ ಸರಸರನೆ ನಡುಗೆ. ಆಗಲೇ ಬೆಳ್ಳಗಾದ ತಲೆಗೂದಲು. ಆದರೆ ಗಡ್ಡ ಮಾತ್ರ ಮಿಕ್ಕ ಪುರುಷರಿಗೆ ಇದ್ದಂತೆ. ಬಿಸಿಲಿದ್ದಾಗ ನೆರಳಿನಲ್ಲಿ ಇದ್ದುಬಿಡುತ್ತಿದ್ದ. ಆದರೆ ಸದಾ ಗಾಢಬಣ್ಣದ ಸೂಟು, ಅಚ್ಚುಕಟ್ಟಾಗಿ ಕಟ್ಟಿದ್ದ ಟೈ. ಒಂದು ಕಡೆ ಸುಮ್ಮನೆ ಕೂರುವುದು ಅಸಾಧ್ಯ ಎನಿಸಿತು ಅವನಿಗೆ. ಏನೋ ಮಾನಸಿಕ ಖಾಯಿಲೆ ಇದ್ದವನಂತೆ ವಿಚಿತ್ರ ಭಂಗಿಗಳಲ್ಲಿ ಕೂರುತ್ತಿದ್ದ;

ಅವನಿಗೆ ಸಂಧಿವಾತವಿತ್ತು ಎನಿಸುತ್ತದೆ. ಹೀಗಿದ್ದರೂ ಅವನು ಸಂಪಾದಿಸಿದ ಅಪಾರ ಹಣ ಮತ್ತು ಮೆಚ್ಚುಗೆ ಈ ನ್ಯೂನತೆಗಳನ್ನೆಲ್ಲಾ ಮುಚ್ಚುತ್ತಿತ್ತು. ಅವನು ಸದಾ ಆಶಾವಾದಿಯಾಗಿಯೇ ಉಳಿದ.

ಮನೆಯಲ್ಲಿ ಪಾರ್ಟಿಗಳು ಜರುಗುತ್ತಿದ್ದವು. ವಿವಿಧ ಕಂಪೆನಿಗಳ ಮುಖ್ಯಸ್ಥರು, ಬಂಡವಾಳ ಹೂಡಬಹುದಾದ ಧನಿಕರು ಮತ್ತು ತನ್ನ ಬಂಧು ಮಿತ್ರರು ಇವುಗಳಲ್ಲಿ ಪಾಲುಗೊಳ್ಳುತ್ತಿದ್ದರು.

ನಲವತ್ತು ವರ್ಷ ಮುಟ್ಟುತ್ತಿದ್ದಂತೆ ಆಲ್ಫ್ರೆಡ್ಡನಿಗೆ ಜೀವನದ ಅತ್ಯುತ್ತಮ ಭಾಗ ಕಳೆದುಹೋದಂತೆ ಭಾಸವಾಯಿತು. ಒಬ್ಬನೇ ಊಟಮಾಡುತ್ತಾ ಕುಳಿತರೆ ಯಾವುದೋ ಗ್ಲಾನಿಗೆ ಒಳಗಾದವನಂತೆ ಕಾಣುತ್ತಿತ್ತು. ಸಮಾಜದಿಂದ ದೂರನಾಗಿ ಏಕಾಂತವನ್ನು ಬಯಸಿದ ಅವನು. ಅನೇಕ ಆಹ್ವಾನಗಳು ಬರುತ್ತಿದ್ದವು. ಅವಕ್ಕೆಲ್ಲಾ "ತುರ್ತಾಗಿ ಪ್ರಯಾಣ ಮಾಡುವುದಿದೆ " ಎಂಬ ನೆವ ನೀಡಿ ತಪ್ಪಿಸಿಕೊಳ್ಳುತ್ತಿದ್ದ. ಹೀಗಾದರೂ ರಾಜರು, ದೇಶದ ಮುಖ್ಯಸ್ಥರು ಆಹ್ವಾನಿಸಿದಾಗ  ನಿರಾಕರಿಸುವುದು ಅಸಾಧ್ಯವಾಯಿತು. ಸರ್ಕಾರಗಳು ಅವನೊಬ್ಬ ಗಣ್ಯನೆಂದು ಗುರುತಿಸಿ ವಿಶೇಷ ಸಮಾರಂಭಗಳಿಗೆ ಅವನನ್ನು ಬರ ಮಾಡಿಕೊಳ್ಳುತ್ತಿದ್ದರು. ಹೋದಲ್ಲೆಲ್ಲಾ ಅವನು ಕೇಂದ್ರವ್ಯಕ್ತಿ ಆಗುತ್ತಿದ್ದ. ಎಲ್ಲರ ಗಮನವೂ ಇವನ ಮೇಲೆಯೇ. ಬಂದವನೇ ಎಲ್ಲರಿಗೂ ಗೌರವ ಸೂಚಿಸಿ ಯಾವುದೋ ಮೂಲೆಯಲ್ಲಿ ತಾನೊಬ್ಬನೇ ನಿಂತುಬಿಡುತ್ತಿದ್ದ. ಅಲ್ಲಿಂದಲೇ ಇದ್ದವರೆಲ್ಲರ ಚರ್ಯೆಯನ್ನು ಗಮನಿಸುತ್ತಿದ್ದ. ಯಾರೂ ಅವನನ್ನು ಮಾತಿಗೆ ಎಳೆಯಲಾಗುತ್ತಿರಲಿಲ್ಲ. ತಾನು ಮಾತನಾಡಿ ಮತ್ತೊಬ್ಬರನ್ನು ಆಕರ್ಷಿಸುವ ವ್ಯಕ್ತಿಯಲ್ಲ ಎಂಬುದು ಅವನಿಗೆ ತಿಳಿದಿತ್ತು. ಇವನಿಂದ ಯಾವುದೇ ಪಾರ್ಟಿಯ ಮೋಜು ಇಂಗಿಹೋಗುತ್ತದೆ ಎಂಬ ಹೆದರಿಕೆ ಅವನಿಗಿತ್ತು. ಹೀಗಾಗಿ ಜನರಿಂದ ದೂರವಿರುತ್ತಿದ್ದ.

ಪಾರ್ಟಿಯ ಊಟಕ್ಕಾಗಿ ಮೇಜಿನ ಹಿಂದೆ ಕುಳಿತಾಗ ಅಲ್ಲಿರುತ್ತಿದ್ದ ಪ್ರಕಾಶಮಾನವಾದ ದೀಪದ ಬೆಳಕಿನಿಂದಲೋ ಏನೋ ಅವನನ್ನು ಮೈಗ್ರೇನ್ ತಲೆನೋವು ಆಕ್ರಮಿಸುತ್ತಿತ್ತು. ಎರಡು ಗ್ಲಾಸುಗಳಷ್ಟು ವೈನ್ ಕುಡಿದರೆ ಅದು ಸ್ವಲ್ಪ ಉಪಶಮನವಾಗುತ್ತಿತ್ತು.

ತಾನು ಹೀಗೆ ಜನರಿಂದ, ವಿದ್ಯಾವಂತರ ಸಂಗದಿಂದ ದೂರವಾಗಿ ಅಭಿಪ್ರಾಯ ವಿನಿಮಯ ಮಾಡಿಕೊಳ್ಳದೇ ಹೋದರೆ ಕೊನೆಗೆ ಮಿಕ್ಕವರಲ್ಲಿ ಮತ್ತು ತನ್ನಲ್ಲಿಯೇ ತಾನು ಗೌರವ ಕಳೆದುಕೊಳ್ಳುವ ಸ್ಥಿತಿ ಬರುತ್ತದೆ ಎಂಬುದರ ಅರಿವು ಅವನಿಗೆ ಬಹಳವಾಗಿಯೇ ಇತ್ತು.

# ೫. ಪ್ರಣಯಾಸಕ್ತ ಆಲ್ಫ್ರೆಡ್ ನೊಬೆಲ್

ಅವನೇಕೆ ಮದುವೆಯಾಗಲಿಲ್ಲ ಎಂಬುದು ದೊಡ್ಡ ನಿಗೂಢ. ಗೆಳತಿಯರಿಗೆ ಅವನು ಬರೆದಿರುವ ಪತ್ರಗಳನ್ನು ಓದಿದರೆ ಅವನೊಬ್ಬ ನಾಚುವ ವ್ಯಕ್ತಿ ಎಂಬುದು ತಿಳಿಯುತ್ತದೆ. ನಾನೊಬ್ಬ ಕುರೂಪಿ ಎಂಬ ಭಾವನೆಯೂ ಅವನನ್ನು ಕಾಡಿದಂತಿದೆ. ಮದುವೆಯಾದರೆ ಹೆಣ್ಣಿನ ಜೊತೆ ಒಂದು ಬಗೆಯ ಭಾವನಾತ್ಮಕ ಅವಲಂಬನೆ ಅನಿವಾರ್ಯವಾಗುತ್ತದೆ; ಅಲ್ಲದೆ ತನ್ನ ನೊಬೆಲ್ ಚಕ್ರಾಧಿಪತ್ಯವನ್ನು ಆಳುವುದು ಕಷ್ಟವಾಗುತ್ತದೆ,  ಎಂದೆಲ್ಲಾ  ಅವನ ಎಣಿಕೆ. ತನ್ನ ಏಕಾಂತಕ್ಕೆ ಆಲ್ಫ್ರೆಡ್ ದೊಡ್ಡ ಬೆಲೆಯನ್ನೇ  ಕೊಟ್ಟ ಎನಿಸುತ್ತದೆ. ಅವನೇ ಹೇಳಿರುವಂತೆ - ನನ್ನದು ಅರ್ಧ ಜೀವನ ಅಷ್ಟೆ.

ತನ್ನ ಏಕಾಂತ ಜೀವನ ಆಲ್ಫ್ರೆಡ್ಡನನ್ನು ಬಾಧಿಸುತ್ತಲೇ ಇತ್ತು. ಅದನ್ನು ನಿವಾರಿಸಲು ಮನಸ್ಸು ಮಾಡಿದ. ಒಮ್ಮೆ ಅವನು ಆಸ್ಟ್ರಿಯಾ ದೇಶದ ರಾಜಧಾನಿ ವಿಯೆನ್ನಾದಲ್ಲಿದ್ದಾಗ ತನ್ನ ಜೀವನವನ್ನು ವ್ಯವಸ್ಥಿತ ರೂಪಕ್ಕೆ ತರುವ ವ್ಯಕ್ತಿಯೊಬ್ಬಳನ್ನು ಹುಡುಕುವ ಯೋಜನೆ ಹಾಕಿಕೊಂಡ. ಅವರೆಗೆ ತನ್ನೊಡನೆ ಓರ್ವ ಸೇವಕಿಯಿದ್ದು ಅವಳು ಮನೆ ಕೆಲಸ ಮತ್ತು ಸರಳ ಕಛೇರಿಕೆಲಸಗಳನ್ನು ಮಾಡುತ್ತಿದ್ದಳು. ಈಗ ಅವನಿಗೆ ತನ್ನ ಪತ್ರಗಳನ್ನು ಬರೆಯುವ ಕಾರ್ಯದರ್ಶಿ ಬೇಕು ಎನಿಸಿತು. ವಿಯೆನ್ನಾದ ವೃತ್ತಪತ್ರಿಕೆಗಳಲ್ಲಿ ಜಾಹಿರಾತನ್ನು ನೀಡಿದ- ಧನಿಕ, ವಿದ್ಯಾವಂತ, ಹಿರಿಯ ಪ್ರಜೆ ನಾನು. ನನಗೆ ಪ್ರಾಯದ , ಹಲವಾರು ಭಾಷೆಗಳಲ್ಲಿ ನಿಪುಣಳಾದ ಕಾರ್ಯದರ್ಶಿ ಮತ್ತು ಮನೆಯ ಮೇಲ್ವಿಚಾರಿಣಿ ಬೇಕಾಗಿದೆ.



ಬೆರ್ಥಾ

ಅವನಿಗಾಗ ೪೩ ವರ್ಷ. ಅವನು ಬಯಸಿದ್ದು ಐದು ಭಾಷೆಗಳಲ್ಲಿ ಸರಾಗವಾಗಿ ಪತ್ರಗಳನ್ನು ಬರೆಯಬಲ್ಲ, ಸಾಹಿತ್ಯ, ಚರಿತ್ರೆ ಮತ್ತು ಸಂಗೀತದಲ್ಲಿ ಆಸಕ್ತಿಯುಳ್ಳ ಹೆಂಗಸು; ಅವಳು ಅಡುಗೆಯನ್ನೂ ಮಾಡಬೇಕು! ಈ ಜಾಹಿರಾತಿಗೆ ಬಂದ ಅತ್ಯುತ್ತಮ ಉತ್ತರ ದೀರ್ಘ ಹೆಸರಿನ ಬೆರ್ಥಾ ಸೊಫಿಯಾ ಫೆಲಿಟಾಸ್ ಕಿನ್ಸ್ಕಿ ವಾನ್ ಚಿನಿಕ್ ಉಂಡ್ ಟೆಟ್ಟೌ (Bertha Sofia Felitas Kinsky von Chinic und Tettau) ಎಂಬುವಳಿಂದ. ಇನ್ನೂ ಮದುವೆ ಇಲ್ಲದ, ಮೂವತ್ತು ಮೂರು ವರ್ಷ ಪ್ರಾಯದ ಈಕೆ ಸ್ಫುಟವಾದ ಬರವಣಿಗೆಯಲ್ಲಿ ಅತಿ ಸಮರ್ಪಕ ಎನಿಸುವ ಪದಗಳನ್ನು ಬಳಸಿದ್ದಳು. ಅರ್ಜಿ ಹಾಕುವಾಗ ಆಕೆ ವಾನ್ ಸಟ್ನರ್ ಎಂಬ ಧನಿಕ ಕುಟುಂಬದ ಮಕ್ಕಳ ಪಾಲಕಿಯಾಗಿದ್ದಳು. ಆಲ್ಫ್ರೆಡ್ ಮತ್ತು ಬೆರ್ಥಾ ನಡುವೆ ಪತ್ರವ್ಯವಹಾರವಾಗಿ ಆಕೆಯನ್ನು ನೇಮಿಸಿಕೊಂಡ.

ಬೆರ್ಥಾ ಅನೇಕ ಕಾರಣಗಳಿಂದ ಮಕ್ಕಳನ್ನು ಪಾಲಿಸುವ ಕೆಲಸಕ್ಕೆ ಸೇರಿದ್ದಳು. ಧನಿಕ ದಂಪತಿಗಳ ಮಗ ಆರ್ಥರ್ ಮತ್ತು ಬೆರ್ಥಾ ಅವರಿಬ್ಬರ ನಡುವೆ ಪ್ರೇಮ ಅಂಕುರಿಸಿತು. ಅವನು ಅವಳಿಗಿಂತ ಏಳು ವರ್ಷ ಚಿಕ್ಕವನು. ವಾನ್ ಸಟ್ನರ್

ದಂಪತಿಗಳಿಗೆ ಈ ಸಂಬಂಧ ಸ್ವಲ್ಪವೂ ಇಷ್ಟವಿರಲಿಲ್ಲ; ಕಾರಣ ಬೆರ್ಥಾ ತರುತ್ತಿದ್ದ ವರದಕ್ಷಿಣೆ ತೀರಾ ಅಲ್ಪ. ಪತ್ರಿಕೆಯಲ್ಲಿ ಆಲ್ಫ್ರೆಡ್ಡನ ಜಾಹಿರಾತನ್ನು ನೋಡಿದ ತಕ್ಷಣ ಆರ್ಥರನ ತಾಯಿ ಬೆರ್ಥಾಳನ್ನು ಅರ್ಜಿ ಹಾಕುವಂತೆ ಪ್ರಚೋದಿಸಿದಳು. ಆರ್ಥರ್ ಮತ್ತು ಬೆರ್ಥಾರನ್ನು ಪರಸ್ಪರ ದೂರವಿಟ್ಟರೆ ಕ್ಷೇಮ ಅನ್ನಿಸಿತು ಅವಳಿಗೆ.

ಬೆರ್ಥಾಳಿಗೆ ಆಲ್ಫ್ರೆಡ್ಡನ ಡೈನಮೈಟ್ ಬಗ್ಗೆ, ಅವನ ಸಾಹಿತ್ಯಾಸಕ್ತಿಯ ಬಗ್ಗೆ , ಅವನ ಏಕಾಂಗಿತನದ ಬಗ್ಗೆ ಸಾಕಷ್ಟು ಅರಿವಿತ್ತು. ಅವಳು ಪ್ಯಾರಿಸ್ಸಿಗೆ ಟ್ರೈನಿನಲ್ಲಿ ಬಂದಾಗ ಆಲ್ಫ್ರೆಡ್ ಅವಳನ್ನು ಬರಮಾಡಿಕೊಂಡು ದೊಡ್ಡ ಹೋಟೆಲೊಂದರಲ್ಲಿ ಇರಿಸಿದ. ಕಾರಣ ಅವನ ಮನೆಯಲ್ಲಿ ಕೆಲವು ಮಾರ್ಪಾಟುಗಳು ಜರುಗುತ್ತಿದ್ದು ಅವಳು ಅಲ್ಲಿರುವುದು ಬೇಡ ಎನಿಸಿತು. ಆಲ್ಫ್ರೆಡ್ಡನಿಗೆ ಇವಳೇ ನನಗೆ ತಕ್ಕವಳು ಎಂಬ ಭಾವನೆ. ಅವಳ ಸೌಂದರ್ಯವನ್ನು ಅವನು ಮೆಚ್ಚಿದ್ದು ಸರಿಯೇ, ಆದರೆ ಅವಳನ್ನು ತನ್ನ ಬುದ್ಧಿವಂತ ಸಂಗಾತಿ ಎಂದು ಭಾವಿಸಿದ. ಅವಳೊಡನೆ ಅವನು ನಾನಾ ವಿಷಯಗಳ ಬಗ್ಗೆ ಚರ್ಚೆ ನಡೆಸಬಹುದಿತ್ತು ಎಂಬುದು ಅವನ ಎಣಿಕೆ.  ಅವಳು ಅವನನ್ನು ಒಮ್ಮೆಗೇ ಅಳೆದು "ಎಂತಹ ಮಹಾನುಭಾವ" ಎಂದುಕೊಂಡಳು. ಅವನ ಪುಸ್ತಕಭಂಡಾರವನ್ನು ಮೆಚ್ಚಿದಳು. ಅಲ್ಫ್ರೆಡ್ ತನ್ನ ಸಿಡಿಮದ್ದಿನ ಚಕ್ರಾಧಿಪತ್ಯದ ಬಗ್ಗೆ ಅವಳಿಗೆ ಸಾಕಷ್ಟು ತಿಳಿಸಿದ. ಅವಳಿಗೆ ಆ ಸಮಾಚಾರ ಬೇಕಿತ್ತೋ ಇಲ್ಲವೋ ಎಂಬುದು ಬೇರೆಯ ವಿಚಾರ. ಅವಳನ್ನು ಕಂಡ ಎರಡು ದಿನಗಳನಂತರ ಅವಳನ್ನು ಕುರಿತು ಒಂದು ಕವಿತೆಯನ್ನೂ ರಚಿಸಿ ಆಕೆಗೆ ತೋರಿಸಿದ. ಒಮ್ಮೆ ಊಟಮಾಡುತ್ತಾ ಇದ್ದಾಗ "ನಿನ್ನ ಹೃದಯವನ್ನು ಯಾರಾದರೂ ಗೆದ್ದಿದ್ದಾರೆಯೇ" ಎಂದು ಧೈರ್ಯ ವಹಿಸಿ ಕೇಳಿದ. ಅಗ ಅವಳು ತನ್ನ ಕತೆಯನ್ನೆಲ್ಲಾ ಹೇಳಿಕೊಂಡಳು.

ಮುಂದಾಗಿದ್ದು ನಿಜವಾಗಿಯೂ ಕೌತುಕ. ಆಲ್ಫ್ರೆಡ್ ಕಾರ್ಯ ನಿಮಿತ್ತ ಪರ ದೇಶಕ್ಕೋ, ಪರ ಊರಿಗೋ ಹೋಗಬೇಕಾಗಿ ಬಂತು. ಆಗ ಅವಳನ್ನು ಅದೇ ಹೋಟೆಲಿನಲ್ಲಿ ತಂಗುವಂತೆ ಹೇಳಿ, ಹೋಟೆಲಿನ ಖರ್ಚೆಲ್ಲವನ್ನೂ ತಾನು ವಹಿಸುವುದಾಗಿ ಮಾಲಿಕನಿಗೆ ಹೇಳಿದ. ಆದರೆ ಅವನು ತನ್ನ ಕೆಲಸ ಮುಗಿಸಿ ಬಂದಾಗ ಬೆರ್ಥಾ ಹೊಟೆಲಿನ ರೂಮನ್ನು ಖಾಲಿ ಮಾಡಿ ವಿಯೆನ್ನಾಗೆ ಹಿಂದಿರುಗಿದ್ದಳು. ಅಲ್ಲದೆ ತನ್ನಲ್ಲಿದ್ದ ವಜ್ರದ ಪಿನ್ ಒಂದನ್ನು ಮಾರಿ ರೂಮಿನ ಬಾಡಿಗೆಯನ್ನು ಕೊಟ್ಟಿದ್ದಳು. ಇಷ್ಟಕ್ಕೆಲ್ಲಾ ಕಾರಣ, ಅವಳ ಹೃದಯ ಅವಳನ್ನು ತನ್ನ ನಿಜ ಪ್ರೇಮಿಯತ್ತ ಒಯ್ದಿತ್ತು. ಅಲ್ಲದೆ ಕೆಲವೇ ದಿನಗಳಲ್ಲಿ ಅವಳು ಆರ್ಥರನನ್ನು ಮದುವೆಯಾಗಿ ಬೆರ್ಥಾ ವಾನ್ ಸ್ಟುಟರ್ ಆದಳು. ಆದರೆ ಅವಳ ಮತ್ತು ಆಲ್ಫ್ರೆಡ್ಡನ ಸ್ನೇಹ ಮುಂದುವರೆಯಿತು. ಮುಂದೆ ಅವಳು ಶಾಂತಿಗಾಗಿ ದುಡಿಯುವವರಿಗೆ ಏನಾದರೂ ಬಹುಮಾನ ಕೊಡಬೇಕು ಎಂದು ಆಲ್ಫ್ರೆಡ್ಡನನ್ನು ವಿನಂತಿಸಿಕೊಂಡಳು. ಅಲ್ಲದೆ ೧೯೦೫ರಲ್ಲಿ ಅವಳು ಶಾಂತಿಗಾಗಿ ನೊಬೆಲ್ ಬಹುಮಾನವನ್ನೂ ಪಡೆದಳು. ಆಲ್ಫ್ರೆಡ್ಡನಿಗೆ ಒಂದೇ ಚಿಂತೆ - ನಾನು ಅವಳೊಡನೆ ಸರಿಯಾಗಿ ನಡೆದು ಕೊಳ್ಳಲಿಲ್ಲವೇನೋ! ನಗೆಪಾಟಲಾದೆನೇನೋ!

# ೬. ಡೈನಮೈಟ್ ನಂತರ


ಸದಾ ತುಡಿವ ಜೀವ. ತನ್ನದೇ ಎಷ್ಟೇ ಸಮಸ್ಯೆಗಳಿದ್ದರೂ ಆಲ್ಫ್ರೆಡ್ ತನ್ನ ಅನ್ವೇಷಣೆಯನ್ನು ನಿಲ್ಲಿಸಲಿಲ್ಲ. ಜಿಲಾಟಿನ್ ಎಂಬ ಮತ್ತೊಂದು ಸಿಡಿಮದ್ದನ್ನು ಕಂಡುಹಿಡಿದ. ಇದು ಶೇಕಡಾ ೯೨ ಗ್ಲಿಸೆರಿನ್ ಮತ್ತು ಶೇಕಡಾ ೮ ನೈಟ್ರೋ ಸೆಲ್ಲುಲೋಸ್ ಗಳ ಮಿಶ್ರಣ. ಇದು ಡೈನಮೈಟಿನಂತೆ ಸುರಕ್ಷಿತ ಎನಿಸಿದ್ದಲ್ಲದೇ ಇದನ್ನು ನೀರಿನ ಒಳಗೂ ಉಪಯೋಗಿಸಬಹುದಾಗಿತ್ತು. ಫ್ರಾನ್ಸಿನಲ್ಲಿ ಸುರಂಗ ಒಂದನ್ನು ತೋಡುವಾಗ ಹೊಸ ಮಿಶ್ರಣದ ಗುಣ ಹೊರಬಂದಿತು. ಡೈನಮೈಟ್ ಉಪಯೋಗಿಸಿದಾಗ ತಿಂಗಳಿಗೆ ೪೦ - ೫೦ ಅಡಿ ಸುರಂಗ ತೋಡಿದರೆ, ಹೊಸ ಮಿಶ್ರಣದಲ್ಲಿ ಅದು ೭೦ - ೮೦ ಅಡಿಗಳಾಗಿದ್ದವು.

ದೇಶ ವಿದೇಶಗಳಲ್ಲಿ ಕಂಪೆನಿಗಳು

ನೈಟ್ರೋಗ್ಲಿಸೆರಿನ್, ಡೈನಮೈಟ್, ಜಿಲಾಟಿನ್ ಹೀಗೆ ಅನ್ವೇಷಣೆಗಳು ಹೊರಬರುತ್ತಿದ್ದಂತೆ ಆಲ್ಫ್ರೆಡ್ ತನ್ನ ಚಕ್ರಾಧಿಪತ್ಯವನ್ನು ವಿಸ್ತರಿಸುತ್ತಾ ಬಂದ. ಪ್ಯಾರಿಸ್ಸಿಗೆ ಬಂದು ನೆಲೆಸಿದ ಅವನು ಪಾಲ್ ಫ್ರಾಂಕ್ವಾ ಬಾರ್ಬೆ (Paul Francois Barbe) ಎಂಬ ಮತ್ತೊಬ್ಬ ಉದ್ಯಮಿಯೊಡನೆ ಒಂದು ಕಂಪೆನಿಯನ್ನು ಸ್ಥಾಪಿಸಿದ. ೧೮೭೦ರಲ್ಲಿ ಫ್ರಾನ್ಸ್ ಯುದ್ಧವೊಂದರಲ್ಲಿ ತೊಡಗಿದಾಗ ಬಾರ್ಬೆ ಡೈನಮೈಟ್ ಒಂದು ನಿಜಕ್ಕೂ ಕ್ರೂರವಾದ ಅಸ್ತ್ರ ಎಂಬುದನ್ನು ಸರ್ಕಾರಕ್ಕೆ ಮನನ ಮಾಡಿಕೊಟ್ಟ. ಇದನ್ನು ಅರಿತುಕೊಂಡ ಸರ್ಕಾರ ಕಂಪೆನಿಗೆ ೬೦ ಸಾವಿರ ಫ್ರಾಂಕುಗಳ ಧನಸಹಾಯ ನೀಡಿ ಡೈನಮೈಟ್ ಕಾರ್ಖಾನೆಯನ್ನು ಸ್ಥಾಪಿಸಲು ಉತ್ತೇಜನ ನೀಡಿತು. ಅಲ್ಫ್ರೆಡ್ಡನಿಗೂ ಯುದ್ಧದಲ್ಲಿ ತನ್ನ ಉತ್ಪನ್ನದ ಮಹತ್ವ ತಿಳಿದಿದ್ದು ಈಗಲೇ ಎನ್ನಲಾಗಿದೆ. ಈ ಅಂಶ ಅವನಿಗೆ ಮನನವಾಗಿದ್ದರೂ ಬಲವಂತವಾಗಿ ಅದನ್ನು ಮನಸ್ಸಿನಲ್ಲಿ ಅದುಮಿ ಹಿಡಿಯುತ್ತಿದ್ದ ಎಂದೂ ಹೇಳಲಾಗಿದೆ. ಫ್ರಾನ್ಸಿನ ಯಶಸ್ಸನ್ನು ಆಧರಿಸಿ ಆಲ್ಫ್ರೆಡ್ ಯೂರೋಪಿನ ಮಿಕ್ಕ ದೇಶಗಳಲ್ಲಿಯೂ ತನ್ನ ಉದ್ದಿಮೆಯನ್ನು ವಿಸ್ತರಿಸುವ ಯೋಜನೆ ಹಾಕಿದ. ಬಾರ್ಬೆ ಫ್ರಾನ್ಸಿನ ವ್ಯವಸಾಯ ಮಂತ್ರಿಯೂ ಆಗಿ ತನ್ನದೇ ಒಂದು ಕಂಪೆನಿಯನ್ನು ಪನಾಮಾ ಕಾಲುವೆ ನಿರ್ಮಾಣಕ್ಕೆ ಉಜ್ಜುಗಿಸಿದ; ಅದಕ್ಕೆ ಎಂಜಿನಿಯರ್ ಆದವನು ವಿಶ್ವವಿಖ್ಯಾತ, ಸೂಯೆಜ಼್ ಕಾಲುವೆಯ ಪ್ರಾಯೋಜಕ ಫರ್ಡಿನೆಂಡ್ ಡಿ ಲೆಸ್ಸಪ್ಸ್. ಅನೇಕ ಅವ್ಯವಹಾರಗಳಿಂದಲೂ, ಮುಖ್ಯವಾಗಿ ಮಲೇರಿಯ ಮತ್ತು yellow fever ಗಳ ಕಾಟದಿಂದಲೂ ಈ ಯೋಜನೆ ಕೈಗೂಡಲಿಲ್ಲ. ಇದರಲ್ಲಿ ಆಲ್ಫ್ರೆಡ್ ತನ್ನ ಹಣವನ್ನು ಹೂಡಿದ್ದನಲ್ಲದೆ ಬಾರ್ಬೆಗೆ ಸಹಾಯವಾಗುವಂತೆ ಆ ಉದ್ದಿಮೆಯ ಶೇರುಗಳನ್ನೂ ಕೊಂಡಿದ್ದ.

ತನ್ನ ಜೊತೆ ಎಷ್ಟೇ ಸಹಕರಿಸಿದರೂ, ವ್ಯವಹರಿಸಿದರೂ ಬಾರ್ಬೆ ಆಲ್ಫ್ರೆಡ್ಡನ ಅಂತರಂಗದ ಗೆಳೆಯನಾಗಿರಲಿಲ್ಲ. ಅಲ್ಲದೆ ಬಾರ್ಬೆ ಪ್ರಾಮಾಣಿಕನಾಗಿಯೂ ಇರಲಿಲ್ಲ. ಅವನದೇ ಆದ ವ್ಯವಹಾರಗಳಿದ್ದವು. ಅವನು ಆಲ್ಫ್ರೆಡ್ಡನಿಗೆ ಎರಡು ಬಗೆದದ್ದು ಖಚಿತವಾಯಿತು. ಆಲ್ಫ್ರೆಡ್ ಅವನಿಗೆ ಪತ್ರ ಬರೆದು - “ಪ್ರಾಮಾಣಿಕತೆ ಮಾಯವಾದರೆ ಒಳ್ಳೆಯ ಬಾಂಧವ್ಯಗಳು ಸತ್ತುಹೋಗುತ್ತವೆ” ಎಂದು ತಿಳಿಸಿದ. ಕೊನೆಗೆ ತನ್ನ ಸಾಲಿಗರನ್ನು ಎದುರಿಸಲಾರದೆ ಬಾರ್ಬೆ ಆತ್ಮಹತ್ಯೆ ಮಾಡಿಕೊಂಡ.

ತನ್ನ ಸ್ವೀಡನ್ನಿನ ಕಾರ್ಖಾನೆಗಳಲ್ಲಿ ಲಾಭ ಕಡಿಮೆಯಾಗುತ್ತಿದ್ದಂತೆ, ಆಲ್ಫ್ರೆಡ್ಡನಿಗೆ ಜರ್ಮನಿ ಆಶಾದಾಯಕ ಎನಿಸಿತು. ಅಲ್ಲಿ ರೈಲುಮಾರ್ಗಗಳ ನಿರ್ಮಾಣ ಆಗತಾನೇ ಪ್ರಾರಂಭವಾಗಿತ್ತು. ಇದರಲ್ಲಿ ಅವನ ಉತ್ಪನ್ನಗಳಿಗೆ ಹೇಳತೀರದ ಅವಶ್ಯಕತೆ. ಅವನು ಕಂಡುಹಿಡಿದಿದ್ದ ಸಿಡಿಯುವ ದ್ರವ್ಯ ಜರ್ಮನರಿಗೆ ಬಹು ಆಕರ್ಷಣೀಯವಾಗಿತ್ತು. ಕೂಡಲೆ ಆಲ್ಫ್ರೆಡ್ ಜರ್ಮನ್ ಉದ್ದಮಿಗಳನ್ನು ಕೂಡಿ ಹ್ಯಾಂಬರ್ಗ್ ಪಟ್ಟಣದ ಬಳಿ ಕ್ರುಮೆಲ್ ಎಂಬಲ್ಲಿ ಕಾರ್ಖಾನೆಯನ್ನು ನಿರ್ಮಿಸಿದ. ಇಲ್ಲಿಯೇ ಮುಂದೆ ಡೈನಮೈಟನ್ನೂ ತಯಾರಿಸಲಾಯಿತು. ೧೮೭೧ರಲ್ಲಿ ೭೮೫ ಟನ್ ಡೈನಮೈಟ್ ತಯಾರಿಸುತ್ತಿದ್ದ ನೊಬೆಲ್ ಉದ್ದಿಮೆಗಳು ೧೮೭೪ರಲ್ಲಿ ೩೧೨೦ ಟನ್ ಉತ್ಪಾದಿಸುತ್ತಿದ್ದವು. ೧೮೬೫ - ೧೮೭೩ ಅವಧಿಯಲ್ಲಿ ಆಲ್ಫ್ರೆಡ್ ಪ್ರಪಂಚಾದ್ಯಂತ (ಸ್ವೀಡನ್, ಜರ್ಮನಿಯಲ್ಲಿ ೨, ನಾರ್ವೆ, ಫ್ರಾನ್ಸ್, ಅಮೆರಿಕಾದಲ್ಲಿ ೪, ಜೆಕೋಸ್ಲವೇಕಿಯಾ, ಫಿನ್ಲ್ಯಾಂಡ್, ಸ್ಕಾಟ್ಲೆಂಡ್, ಸ್ಪೈನ್, ಸ್ವಿಟ್ಸರ್ಲಂಡ್, ಇಟಲಿ, ಪೋರ್ಚುಗಲ್ ಮತ್ತು ಬ್ರಾಟಿಸ್ಲಾವಾ) ೧೭ ಕಾರ್ಖಾನೆಗಳನ್ನು ತೆರೆದಿದ್ದ. ಹೀಗಿದ್ದರೂ ನಿರೀಕ್ಷಿತ ವರಮಾನ ಬರುತ್ತಿರಲಿಲ್ಲ. ಸ್ಪರ್ಧಿಗಳ ಪೈಪೋಟಿ ಹೆಚ್ಚಾಯಿತು. ಪರಿಹಾರವಾಗಿ ಆಲ್ಫ್ರೆಡ್ ನೊಬೆಲ್ ಡೈನಮೈಟ್ ಟ್ರಸ್ಟ್ ಎಂಬ ಕಂಪೆನಿಯನ್ನು ತೆರೆದು ತನ್ನ ಕೆಲವು ಕಂಪೆನಿಗಳನ್ನು ಅದರ ಪರಿಧಿಗೆ ತಂದ. ಇದು ಅವನ ವ್ಯವಹಾರ ಚಾತುರ್ಯಕ್ಕೆ ನಿದರ್ಶನ.



ಕ್ರುಮೆಲ್ ಬಳಿ ಇದ್ದ ಕಾರ್ಖಾನೆ.

ಜರ್ಮನಿಯ ಉದ್ದಿಮೆ ಲಾಭದಾಯಕ ಎನಿಸಿತು. ೧೮೮೮ರಲ್ಲಿ ೫ ಮಿಲಿಯನ್ ಮಾರ್ಕ್ ಇದ್ದ ಅದರ ಶೇರ್ ಬಂಡವಾಳ ೧೯೧೮ರಲ್ಲಿ ೩೬ ಮಿಲಿಯನ್ ಆಗಿತ್ತು. ೧೯೩೯ರಲ್ಲಿ ಎರಡನೆಯ ಮಹಾಯುದ್ಧ ಪ್ರಾರಂಭವಾದಾಗ ಅದರಲ್ಲಿ ೩೦೦೦ ಕ್ಕೂ ಹೆಚ್ಚು ಕಾರ್ಮಿಕರಿದ್ದರು, ಬಂಡವಾಳ ೪೭ ಮಿಲಿಯನ್ ಮೀರಿತ್ತು.

ವಿಪರ್ಯಾಸವೆಂದರೆ ಯುದ್ಧ ಅಂತ್ಯವಾಗುತ್ತಿದ್ದಂತೆಯೇ ವಿಮಾನ ಧಾಳಿಯಿಂದಾಗಿ ಕ್ರುಮೆಲ್ ಕಾರ್ಖಾನೆ ನಾಶವಾಯಿತು. ಆಗ ಉಪಯೋಗಿಸಿದ ಬಾಂಬುಗಳಲ್ಲಿ ಆಲ್ಫ್ರೆಡ್ ನಿರ್ಮಿತ ಸಿಡಿಮದ್ದುಗಳಿದ್ದವಂತೆ! ಇದು ಸಂಭವಿಸಿದಾಗ ಕಾರ್ಖಾನೆಯಲ್ಲಿ ೯೦೦೦ ಉದ್ಯೋಗಿಗಳಿದ್ದರು ಎನ್ನಲಾಗಿದೆ. ಉಳಿದಿದ್ದು ಆಡಳಿತ ಕಛೇರಿಗಳು ಮತ್ತು ಆಲ್ಫ್ರೆಡ್ಡನ ಒಂದು ಎದೆ ಮಟ್ಟದ ಪ್ರತಿಮೆ! ನಂತರ ಕ್ರುಮೆಲ್ ಕಾರ್ಖಾನೆಯಿದ್ದ ಪ್ರದೇಶದಲ್ಲಿ ಅಣು ರಿಯಾಕ್ಟರ್ ಒಂದನ್ನು ನಿರ್ಮಿಸಲಾಯಿತು.

ಇಂಗ್ಲೆಂಡಿನಲ್ಲಿಯೂ ತನ್ನ ಧ್ವಜವನ್ನೇರಿಸಿದ ಆಲ್ಫ್ರೆಡ್. ಅಲ್ಲಿಯೂ ಅನೇಕ ತಕರಾರುಗಳು ಉದ್ಭವಿಸಿದವು. ಅವನ್ನೆಲ್ಲಾ ಪರಿಹರಿಸುವುದು ಬಹಳ ಕಷ್ಟವೇನೂ ಎನಿಸಲಿಲ್ಲ. ಅವನಿಗೆ ಸಹಾಯ ಮಾಡಿದವನೆಂದರೆ ಜಾನ್ ಡೌನೀ. ಆದರೆ ಕಾರ್ಖಾನೆಯ ಅಪಘಾತವೊಂದರಲ್ಲಿ ಅವನು ೧೮೭೫ರಲ್ಲಿ ಅಸು ನೀಗಿದ. ಡೈನಮೈಟನ್ನು ಸಾಗಿಸುವಾಗ ಅದರಲ್ಲಿ ನೀರು ತುಂಬಿದ್ದು ಇದಕ್ಕೆ ಕಾರಣವೆನ್ನುವುದು ಹೊರಬಂದಿತು. ಡೈನಮೈಟಿಗಿಂತ ಸುರಕ್ಷಿತ ಸಿಡಿಮದ್ದನ್ನು ಕಂಡುಹಿಡಿಯುವುದು ಅವಶ್ಯಕ ಎನಿಸಿತು ಆಲ್ಫ್ರೆಡ್ಡನಿಗೆ. ಹೀಗೆ ೧೮೭೫ರಲ್ಲಿ ಹೊರಬಂದದ್ದೇ ಸಿಡಿಯುವ ಜಿಲಾಟಿನ್.

## ಆಲ್ಫ್ರೆಡ್ಡನ ಕಾರ್ಯನಿಷ್ಠೆ

ಆಲ್ಫ್ರೆಡ್ಡನ ಕಾರ್ಯನಿಷ್ಠೆ ಯಾರಿಗಾದರೂ ಮಾದರಿ. ಅವನು ಸದಾ ಪೇಟೆಂಟುಗಳು ಬಯಸುತ್ತಿದ್ದ, ಅವುಗಳ ಮಹತ್ವವನ್ನು ಅರಿತಿದ್ದ, ಮತ್ತು ಅವುಗಳನ್ನು ಪಡೆಯುವುದಕ್ಕಾಗಿ ಕೋರ್ಟು ಕಛೇರಿಗಳಿಗೆ ಹೋಗುತ್ತಿದ್ದದ್ದು ಅನಿವಾರ್ಯ. ಆದರೆ ದೀರ್ಘಕಾಲದ ವರೆಗೆ ಅವನು ಕಾರ್ಯದರ್ಶಿಯನ್ನಾಗಲೀ, ವಕೀಲನೊಬ್ಬನನ್ನಾಗಲೀ ನೇಮಿಸಿಕೊಂಡಿರಲಿಲ್ಲ. ತಾನೇ ಎಲ್ಲವನ್ನೂ ನಿರ್ವಹಿಸುತ್ತಿದ್ದ. ವರ್ಷಕ್ಕೆ ನಾಲ್ಕು ಬಾರಿ ತನ್ನ ವಹಿವಾಟುಗಳ ಆಯವ್ಯಯ ಪತ್ರವನ್ನು ರಚಿಸುತ್ತಿದ್ದ. ಅವನಿಗೆ ಬಂದ ಲಾಭವೆಷ್ಟು? ನಷ್ಟವೆಷ್ಟು? ನಿವ್ವಳ ಗಳಿಕೆ ಎಷ್ಟು ಎಂಬುದು ನಿಖರವಾಗಿ ಗೊತ್ತಿರುತ್ತಿತ್ತು. ಎಂದಿಗೂ ನಿರೀಕ್ಷಿತ ಲಾಭವನ್ನು ಲೆಕ್ಕ ಪತ್ರದಲ್ಲಿ ನಮೂದಿಸುತ್ತಿರಲಿಲ್ಲ. ಲಾಭ ಬಂದಿರುವುದು ಖಂಡಿತವಾದಾಗ ಮಾತ್ರ ಅದಕ್ಕೆ ಮನ್ನಣೆ. ಬಂದ ಲಾಭ ಅವಕಾಶ ನೀಡಿದರೆ ಮಾತ್ರ ಶೇರುದಾರರಿಗೆ ಡಿವಿಡೆಂಡ್ ಸಿಗುತ್ತಿತ್ತು. ಮಿಕ್ಕವರಿಂದ ಬಂಡವಾಳವನ್ನು ಆಹ್ವಾನಿಸಲು ಸುಳ್ಳು ಲೆಕ್ಕಗಳನ್ನು ಎಂದೂ ಮುಂದಿಟ್ಟವನಲ್ಲ ಆಲ್ಫ್ರೆಡ್. ಹಣದ ಮೇಲಿನ ಆಸೆಗೆ ಒಂದು ಮಿತಿ ಇರಬೇಕು ಎಂದು ನಂಬಿದ್ದ ಆಲ್ಫ್ರೆಡ್. ವಾಣಿಜ್ಯ ವ್ಯವಹಾರಗಳಲ್ಲಿ ಕೆಲವೊಮ್ಮೆ ಸುಳ್ಳು ಹೇಳುವುದು ಅನಿವಾರ್ಯವೆಂಬ ಸತ್ಯ ಎಂಬುದೂ ಅವನಿಗೆ ಗೊತ್ತಿದ್ದ ವಿಷಯವೇ.


ವ್ಯಾಪಾರದಲ್ಲಿ ಸೋಲು ಅನಿವಾರ್ಯ ಎಂಬುದು ಅವನಿಗೆ ಕಾಲಕ್ರಮೇಣ ಅರಿವಾಯಿತು. ಒಂದು ಕಂಪೆನಿಯ ಲಾಭ ಮತ್ತೊಂದರ ನಷ್ಟವನ್ನು ಸರಿದೂಗಬಹುದು ಎಂಬುದನ್ನೂ ಅರಿತ. ನಿರಾಶೆಗಳನ್ನು ತಕ್ಷಣ ಮರೆತು ಮುಂದೇನು ಎಂಬುದರ ಯೋಚನೆ ಮಾಡುವ ವ್ಯಾಪಾರಪಾಠ ಅವನಿಗಾಯಿತು. ತನ್ನ ಕಾರ್ಖಾನೆಗಳಲ್ಲಿ ಜರುಗಿದ ಅಪಘಾತಗಳನ್ನು ನೋಡಿಯೂ ನೋಡದಂತೆ ಇರುವುದನ್ನು ಕಲಿತ. ಆದರೆ ಯಾವುದಾದರೂ ಅಪಘಾತದಿಂದ ಪಾಠ ಕಲಿಯುವುದಿದ್ದರೆ ಅದರತ್ತ ಗಮನ ಹರಿಸಿದ.

ಅವನ ಸಂಪತ್ತು ಬೆಳೆಯುತ್ತಿದ್ದಂತೆ ಜನ ಅವನನ್ನು ಒಂದು ಸಂಸ್ಥೆಯಾಗಿ ಕಂಡರೇ ಹೊರತು ಅವನನ್ನು ವ್ಯಕ್ತಿಯಾಗಿ ಪರಿಗಣಿಸಲಿಲ್ಲ. ಹೀಗಾಗಿ ಅವನ ತೀರ್ಮಾನಗಳು ಅವನಿಗೆ ಬಹು ಮುಖ್ಯವಾದವು. ಅವನು ಮಿಕ್ಕವರಿಂದ ದೂರನಾದ, ಮಿಕ್ಕವರಲ್ಲಿ ಅಪನಂಬಿಕೆಯೂ ಬರತೊಡಗಿತು. ಉದ್ದಿಮೆಗಳಲ್ಲಿ ಮುಖ್ಯ ಪಾತ್ರ ವಹಿಸಿದ್ದವರ ಮೇಲೆ ಅವನು ಸದಾ ಕಣ್ಣು ಹಾಯಿಸಿದ್ದ. ಹೀಗಾಗಿ ಅವನ ನಿಜವಾದ ಗೆಳೆಯರ ಸಂಖ್ಯೆ ಪ್ರತಿ ವರ್ಷ ಕಡಿಮೆಯಾಗುತ್ತಾ ಬಂದಿತು. ತನ್ನ ಹಾದಿಯ ತುದಿಯಲ್ಲಿ ತನಗಾಗಿ ಕಾದಿರುವುದು ತಾನೊಬ್ಬನೇ ಎಂಬ ಹೆದರಿಕೆಯೂ ಬಲವಾಗುತ್ತಾ ಬಂದಿತು.

ಮಿಲಿಯನ್ ಗಟ್ಟಲೆ ಹಣ ಗಳಿಸಿದರೂ ಅದರಿಂದ ಯಾವುದೇ ಮಾನಸಿಕ ಅಥವಾ ಅಧ್ಯಾತ್ಮಿಕ ಪ್ರಗತಿಯೂ ಆಗುವುದಿಲ್ಲ ಎಂಬುದನ್ನು ಗ್ರಹಿಸಿದ್ದ. ಅವನು ಬಯಸಿದ್ದನ್ನು ಹಣ ಕೊಟ್ಟು ಕೊಳ್ಳಲಾಗುತ್ತಿರಲಿಲ್ಲ.

## ರಾಬರ್ಟ್ ಮತ್ತು ಲುಡ್ವಿಗ್

ತಮ್ಮ ತಂದೆ ಸೈಂಟ್ ಪೀಟರ್ಸ್ ಬರ್ಗ್‌ನಿಂದ ಸ್ವೀಡನ್ನಿಗೆ ಹಿಂತಿರುಗಿದ ಮೇಲೆ ರಾಬರ್ಟ್ ಫಿನ್ ಲ್ಯಾಂಡಿನಲ್ಲಿ ನೆಲೆಸಿದರೆ ಲುಡ್ವಿಗ್ ರಷ್ಯಾದಲ್ಲಿಯೇ ಬೀಡುಬಿಟ್ಟ. ರಾಬರ್ಟ್ ಮೊದಲು ಇಟ್ಟಿಗೆ ನಿರ್ಮಾಣದಲ್ಲಿ ಕೈಹಾಕಿ ನಂತರ ತಮ್ಮನ ಹಾದಿಯನ್ನೇ



ಲುಡ್ವಿಗ್ ನೊಬೆಲ್



ರಾಬರ್ಟ್ ನೊಬೆಲ್

ಹಿಡಿದು ಸಿಡಿಮದ್ದಿನ ತಯಾರಿಕೆಗೆ ಪ್ರಯತ್ನಪಟ್ಟ. ಆದರೆ ಫಿನ್ ಲ್ಯಾಂಡಿನ ಸರ್ಕಾರ ಅನುಮತಿ ನೀಡದ ಕಾರಣ ಅವನು ರಷ್ಯಾಕ್ಕೆ ಬಂದು ಲುಡ್ವಿಗನ ಜೊತೆಗೂಡಿದ. ಅನೇಕ ರೀತಿಯ ಕೈಗಾರಿಕೆಗಳನ್ನು ಸ್ಥಾಪಿಸಿದ ಸಹೋದರರು ರಷ್ಯಾದ ಬಾಕು (ಈಗ ಇದು ಅಜ಼ೆರ್ಬೈಜಾನ್ ರಾಷ್ಟ್ರದಲ್ಲಿದೆ) ಎಂಬಲ್ಲಿ ತೈಲ ಶುದ್ಧೀಕರಣ ಕಾರ್ಯಾಗಾರವನ್ನು ನಿರ್ಮಿಸಿದರು. ಇದು ರಷ್ಯಾಕ್ಕೆ ಪ್ರಥಮ ಎನಿಸಿತು. ಸೀಮೆ ಎಣ್ಣೆ ಅವರ ಪ್ರಮುಖ ಉತ್ಪನ್ನ. ಅವರ ಸ್ಪರ್ಧಿಗಳಿಗಿಂತ ಹತ್ತು ಪಟ್ಟು ಹೆಚ್ಚು ತೈಲವನ್ನು ಉತ್ಪಾದಿಸುವ ಸಾಮರ್ಥ್ಯ ಹೊಂದಿತ್ತು ಅವರ ತೈಲಾಗಾರ. ಹೀಗಿದ್ದರೂ ಅವರು ೧೫೦೦ ಟನ್ ತೈಲವನ್ನು ಮಾತ್ರ ಉತ್ಪಾದಿಸುತ್ತಿದ್ದರು; ರಷ್ಯಾದ ಮಿಕ್ಕ ತೈಲಾಗಾರಗಳು ಮೊತ್ತದಲಿ ೭೫,೦೦೦ ಟನ್ ಉತ್ಪಾದಿಸುತ್ತಿದ್ದವು. ಆಲ್ಫ್ರೆಡ್ ಮಧ್ಯೆ ಪ್ರವೇಶಿಸಿ ಬಾಕು ಕಾರ್ಖಾನೆಗೆ ಹಣ ಒದಗಿಸಿ ಅದರ ಉತ್ಪಾದನೆ ೧೦,೦೦೦ ಟನ್ ಆಗುವಂತೆ ಮಾಡಿದ. ಆದರೆ ತನ್ನ ಆರೋಗ್ಯ ಕ್ಷೀಣಿಸಿದ್ದರ ಕಾರಣ ರಾಬರ್ಟ್ ತೈಲಾಗಾರವನ್ನು ತೊರೆದು ಸ್ವೀಡನ್ನಿಗೆ ಹಿಂತಿರುಗಿದ. ಎಲ್ಲಾ ಉದ್ದಿಮಗಳಿಂದ ನಿವೃತ್ತನಾದ ಅವನು (ಮುಂದೆ ೧೮೯೬ರಲ್ಲಿ ಅವನು ಮರಣ ಹೊಂದಿದ). ಹೀಗಾಗಿ ಬಾಕುವಿನ ಆಡಳಿತದ ಹೊಣೆ ಲುಡ್ವಿಗ್ಗನ ಮೇಲೆ ಬಿದ್ದಿತು. ಅವನು ಆಲ್ಫ್ರೆಡ್ಡನಿಂದ ಸದಾ ಸಲಹೆಗಳನ್ನು ಪಡೆಯುತ್ತಿದ್ದ. ಮುಂದೆ ಅವನು ತೈಲ ಟ್ಯಾಂಕರ್ (oil tanker)ಗಳನ್ನೂ ಸ್ವೀಡನ್ನಿನಲ್ಲಿ ನಿರ್ಮಿಸಿದ. ಕೆಲವೇ ದಿವಸಗಳಲ್ಲಿ ೧೭೬ ಟ್ಯಾಂಕರುಗಳು ಹೊರಬಂದವು. ತೈಲ ಮತ್ತು ಟ್ಯಾಂಕರ್ ಅಲ್ಲದೇ ಲುಡ್ವಿಗ್ ರಷ್ಯಾದಲ್ಲಿ ಕೈಗಾರಿಕಾ ಸಲಕರಣೆಗಳು, ಬಂದೂಕುಗಳನ್ನೂ ತಯಾರಿಸುತ್ತಿದ್ದ. ಗಳಿಸಿದ ಅಸಾಧಾರಣ ಯಶಸ್ಸಿನಿಂದ ಲುಡ್ವಿಗ್ ರಷ್ಯಾದ ಪ್ರಮುಖ ಉದ್ಯಮಿ ಎನಿಸಿದ. ಅಲ್ಲದೆ ಅವನು ಪ್ರಾಮಾಣಿಕತೆಗೂ ಹೆಸರು ಪಡೆದ.

ನಂತರ ತಮ್ಮ ಆಲ್ಫ್ರೆಡ್ಡನ ಸಲಹೆಯಂತೆ ಅವನು ರಷ್ಯಾದಲ್ಲಿ ಸಿಡಿಮದ್ದಿನ ಕಾರ್ಖಾನೆ ತೆರೆಯುವ ಪ್ರಯತ್ನ ಮಾಡಿದ. ಆದರೆ ಹೊರಬರುವ ಡೈನಮೈಟನ್ನು ಜ಼ಾರನ (ರಾಜನ) ಕೊಲೆ ಮಾಡಲು ಜನ ಉಪಯೋಗಿಸಬಹುದು ಎಂಬ ಶಂಕೆಯಿಂದ ಸರ್ಕಾರ ಅವನಿಗೆ ಅನುಮತಿ ನೀಡಲಿಲ್ಲ. ಹೀಗಿದರೂ ಜ಼ಾರನ ಅರಮನೆಯ ಊಟದ ಕೊಠಡಿಯಲ್ಲಿ ೧೮೮೦ರಲ್ಲಿ ಡೈನಮೈಟ್ ಬಾಂಬ್ ಒಂದು ಆಸ್ಫೋಟವಾಯಿತು. ಅದು ರಷ್ಯಾದಲ್ಲಿ ತಯರಾದ ಬಾಂಬಲ್ಲ; ಹೊರಗಿನಿಂದ ಆಮದುಗೊಂಡಿದ್ದು.

ಆಲ್ಫ್ರೆಡ್ಡನಿಗೆ ಲುಡ್ವಿಗ್ಗನ ಕಾರ್ಯವಿಧಾನದ ಬಗ್ಗೆ ಏನೋ ಗುಮಾನಿ. ಸಲ್ಲದ ವಿಸ್ತರಣೆಗಳನ್ನು ಮಾಡಿದ ಅವನು ವಿಪರೀತ ಸಾಲ ಮಾಡುತ್ತಿದ್ದಾನೆ ಎನಿಸಿತು. ಇದಲ್ಲದೆ ಲುಡ್ವಿಗ್ಗನ ಕಾರ್ಖಾನೆಗಳಲ್ಲಿ ಅಪಘಾತಗಳು ಆಗುತ್ತಲೇ ಇದ್ದವು; ಅವನ ಟ್ಯಾಂಕರ್

ಒಂದು ಆಸ್ಫೋಟಗೊಂಡು, ಮತ್ತೊಂದು ಅಪಾರ ಹಾನಿಗೊಳಗಾಯಿತು. ಲುಡ್ವಿಗ್ ಹೇಗೋ ತನ್ನ ಎಲ್ಲಾ ಸಮಸ್ಯೆಗಳನ್ನೂ ಪರಿಹರಿಸಿಕೊಂಡ. ಆದರೂ ಆಲ್ಫ್ರೆಡ್ ಅಣ್ಣನನ್ನು ಟೀಕಿಸುತ್ತಲೇ ಇದ್ದ. ಮುಂದೆ ಅವನು ಅನಿವಾರ್ಯವಾಗಿ ರಷ್ಯಾದಲ್ಲಿದ್ದ ಲುಡ್ವಿಗ್ಗನ ಚಕ್ರಾಧಿಪತ್ಯದ ಆಡಳಿತವರ್ಗಕ್ಕೆ ಸೇರಿ ತಾನೇ ಖುದ್ದಾಗಿ ಸೈಂಟ್ ಪೀಟರ್ಸ್ ಬರ್ಗಿಗೆ ಬಂದು ಎಲ್ಲಾ ಉದ್ದಿಮೆಗಳ ಸಮೀಕ್ಷೆ ನಡೆಸಿದ. ತನ್ನ ತೀವ್ರ ನಿರಾಸೆಯನ್ನೂ ವ್ಯಕ್ತಪಡಿಸಿ, ಅಣ್ಣ ಲುಡ್ವಿಗನನ್ನು "ನೀನೊಂದು ಕತ್ತೆ" ಎಂದು ಕೂಡ ಹೇಳಿದ. ಅಲ್ಲದೆ ಅಣ್ಣನ ಉದ್ದಿಮಗಳಿಗೆ ೪ ಮಿಲಿಯನ್ ಫ್ರಾಂಕುಗಳ ಸಾಲವನ್ನೂ ನೀಡಿದ. ಈ ವೇಳೆಗಾಗಲೇ ಅಮೆರಿಕಾದ ರಾಕ್ ಫೆಲರ್ ಮತ್ತು ರೋಥ್ಸ್ ಚೈಲ್ಡ್ ಕಂಪೆನಿಗಳು ತೈಲನಿರ್ಮಾಣದಲ್ಲಿ ಪ್ರಸಿದ್ಧರಾಗಿದ್ದರು. ಅವರುಗಳೊಡನೆ ಸ್ಪರ್ಧಿಸುವುದು ಸುಲಭವಲ್ಲವೆಂದು ಆಲ್ಫ್ರೆಡ್ ಅಣ್ಣ ಲುಡ್ವಿಗನಿಗೆ ಎಚ್ಚರಿಕೆ ನೀಡಿದ. ಕಾಲಕ್ರಮೇಣ ಲುಡ್ವಿಗ್ ರೋಥ್ಸ್ ಚೈಲ್ಡ್ ಸಂಸ್ಥೆಯೊಂದಿಗೆ ಒಪ್ಪಂದವನ್ನೂ ಮಾಡಿಕೊಂಡ. ಕಾಲಕ್ರಮೇಣ ರಷ್ಯಾದಲ್ಲಿ ಡೈನಮೈಟ್ ವ್ಯಾಪಾರವೂ ಕ್ಷೀಣಿಸತೊಡಗಿತು.

ಅಣ್ಣನಿಗೆ ಸಾಲ ನೀಡಿದ್ದು, ಅವನಿಗೆ ಅಗಾಗ್ಗೆ ಸಹಾಯ ಮಾಡಿದ್ದು ಏನೇ ಆದರೂ ಆಲ್ಫ್ರೆಡ್ ಮತ್ತು ಲುಡ್ವಿಗ್ಗ ರ ವಾಣಿಜ್ಯ ವ್ಯವಹಾರಗಳು ಪ್ರತ್ಯೇಕವಾಗಿದವು. ಎಂದೂ ಒಂದಕ್ಕೊಂದು ಬೆರೆಯಲಿಲ್ಲ. ಆಲ್ಫ್ರೆಡ್ ಎಷ್ಟು ತೀಕ್ಷ್ಣವಾಗಿ ಇದನ್ನು ಪರಿಪಾಲಿಸಿದ ಎಂಬುದು ಈ ಉದಾಹರಣೆಯಿಂದ ಸ್ಪಷ್ಟವಾಗುತ್ತದೆ. ಒಮ್ಮೆ ಕುಟುಂಬದವರೆಲ್ಲಾ ಒಟ್ಟಿಗೆ ಒಂದು ರೆಸ್ಟೋರೆಂಟಿನಲ್ಲಿ ಭೋಜನ ಮಾಡಿದರು. ಆಗ ತಗುಲಿದ ವೆಚ್ಚ ೫೮೧ ಸ್ವೀಡಿಷ್ ಕ್ರೌನುಗಳು. ಅಣ್ಣ ತಮ್ಮಂದಿರು ಚರ್ಚೆ ಮಾಡಿ ಅದನ್ನು ಹೇಗೆ ಹಂಚಿಕೊಳ್ಳಬೇಕು ಎಂದು ನಿರ್ಧರಿಸಿದರಂತೆ!

ಲುಡ್ವಿಗ್ಗನ ನಿಧನ

ಕಾಲಕ್ರಮೇಣ ಅಸಾಧ್ಯ ಒತ್ತಡಕ್ಕೆ ಗುರಿಯಾಗಿದ್ದ ಲುಡ್ವಿಗ್ಗನ ಆರೋಗ್ಯ ಕುಸಿದು ಅವನಿಗೆ ಕ್ಷಯರೋಗ ತಗುಲಿತು. ಅವನು ತನ್ನ ಉದ್ದಿಮೆಗಳ ಹತೋಟಿಯನ್ನು ೨೯ ವರ್ಷದ ಮಗ ಎಮಾನ್ಯುಯೆಲ್ಲನಿಗೆ ವಹಿಸಿದ. ಎರಡು ತಿಂಗಳು ನರಳಿದ ಅವನು ೧೮೮೮ರ ಏಪ್ರಿಲ್ ೧೨ ರಂದು ಫ್ರಾನ್ಸಿನ ಕ್ಯಾನ್ ನಲ್ಲಿ ನಿಧನನಾದ. ಈ ಸಂದರ್ಭದಲ್ಲಿಯೇ ನೊಬೆಲ್ ಬಹುಮಾನಕ್ಕೆ ಕಾರಣವಾದ ಘಟನೆ ನಡೆಯಿತು. ಫ್ರೆಂಚ್ ಪತ್ರಿಕೆಯೊಂದು ಸತ್ತಿದ್ದು ಆಲ್ಫ್ರೆಡ್ ಎಂದು ಭಾವಿಸಿ ಅವನಿಗೆ ಶ್ರದ್ಧಾಂಜಲಿಯನ್ನು ಅರ್ಪಿಸಿತು. ಈ ಬಗ್ಗೆ ಹಿಂದೆಯೇ ಹೇಳಲಾಗಿದೆ.

ಎಮಾನ್ಯುಯೆಲ್

ಎಮ್ಯಾನ್ಯುಯೆಲ್ ಲುಡ್ವಿಗ್ಗನ ತೈಲ ಸಂಸ್ಥೆಯ ಒಡೆಯನಾಗಿದ್ದಲ್ಲದೆ, ತನ್ನ ಏಳು ಮಂದಿ ತಮ್ಮ ತಂಗಿಯರಿಗೂ ಪೋಷಕನಾದ. ತನ್ನ ಆಸ್ತಿಯ ಕಾಲು ಭಾಗಕ್ಕಿಂತ ಅಧಿಕ ಹಣವನ್ನು ಲುಡ್ವಿಗ್ಗನ ಉದ್ದಿಮೆಗಳಲ್ಲಿ ಹೂಡಿದ್ದ ಆಲ್ಫ್ರೆಡ್ ಚಿಂತಾಕ್ರಾಂತನಾದ. ಆದರೂ ಎಮ್ಯಾನ್ಯುಯೆಲ್ಲನ ದಕ್ಷತೆ ಈ ಚಿಂತೆ ಯನ್ನು ತಾತ್ಕಾಲಿಕಗೊಳಿಸಿತು. ಹೀಗಿದ್ದರೂ ಆಲ್ಫ್ರೆಡ್ ಮತ್ತೆ ನಾಲ್ಕು ಮಿಲಿಯನ್ ರೂಬೆಲುಗಳ ಸಾಲವನ್ನು ಒಂದು ಬ್ಯಾಂಕಿನ ಮೂಲಕ ಒದಗಿಸಬೇಕಾಯಿತು.

ಎಮ್ಯಾನ್ಯುಯೆಲ್ ತನ್ನ ಸ್ವೀಡಿಷ್ ಹಿನ್ನೆಲೆಯನ್ನು ಪೂರ್ತಿಯಾಗಿ ತೊರೆದು ಒಬ್ಬ ರಷ್ಯನನಂತೆಯೇ ನಡೆದುಕೊಳ್ಳುತ್ತಿದ್ದ. ಅವನ ನಡವಳಿಕೆ ಎಲ್ಲಾ ಸಿರಿವಂತ ಜಾತಿಗೆ ಸೇರಿದ್ದವು. ಒಮ್ಮೆ ಭೋಜನಕೂಟಕ್ಕೆ ಹಲವಾರು ಜನರನ್ನು ಆಹ್ವಾನಿಸಿ, ಅಲ್ಲಿ ಬಂದಿದ್ದ ಪ್ರತಿ ಹೆಂಗಸಿನ ಟೇಬಲ್ ನ್ಯಾಪ್ಕಿನ್ ಒಳಗೆ ವಜ್ರದ ಪಿನ್ ಇಟ್ಟಿದ್ದನಂತೆ! ಅವನಿಗೆ ಸರ್ಕಾರದಿಂದ ರಷ್ಯಾದ ಅತ್ಯುತ್ತಮ

ಗೌರವವೂ ಲಭಿಸಿತು. ವಿಶ್ವದ ಇತರೆ ಕಂಪೆನಿಗಳ ಜೊತೆ ಒಪ್ಪಂದಗಳನ್ನು ಮಾಡಿಕೊಂಡು ಬಾಕುವಿನಲ್ಲಿದ್ದ ನೊಬೆಲ್ ಉದ್ಯಮ ಪ್ರಪಂಚದ ಅರ್ಧಕ್ಕಿಂತ ಹೆಚ್ಚು ಭಾಗ ತೈಲವನ್ನು ಉತ್ಪಾದಿಸುತ್ತಿದ್ದು ಇದು ೧೯೨೪ರ ವರೆಗೂ ಕಾರ್ಯ ನಿರ್ವಹಿಸಿತ್ತು. ೧೯೯೧ರಲ್ಲಿ ರಷ್ಯಾ ಸರ್ಕಾರ ನೊಬೆಲ್ ಕುಟುಂಬ ವಾಸಿಸಿದ ಮನೆಯನ್ನು ವಸ್ತುಸಂಗ್ರಹಾಲಯವನ್ನಾಗಿ ಮಾಡುವ ಹೇಳಿಕೆ ನೀಡಿತ್ತು. ಈಗ ಸೈಂಟ್ ಪೀಟರ್ಸ್ ಬರ್ಗಿನಲ್ಲಿ ಆಲ್ಫ್ರೆಡ್ ನೊಬೆಲನ ಒಂದು ಸ್ಮಾರಕವಂತೂ ಇದೆ.

ತಾಯಿಯ ಸಾಮಿಪ್ಯ ಬಯಸಿದ ಆಲ್ಫ್ರೆಡ್

ಆಗಾಗ್ಗೆ ಅಲ್ಫ್ರೆಡ್ ಹೇಳುತ್ತಿದ್ದ ಮಾತೆಂದರೆ “ಪ್ರೀತಿಯಿಂದ ನನ್ನ ಕಿವಿಯ ಹತ್ತಿರ ಬಂದು ನೆಮ್ಮದಿ ನೀಡುವವರು ನನಗಿಲ್ಲ ಎನಿಸುತ್ತಿದೆ. ಇಂತಹ ವ್ಯಕ್ತಿ ನನಗೆ ಸಿಗದೇ ಹೋದರೆ ಸ್ಟಾಕ್ ಹೋಮಿನಲ್ಲಿರುವ ನನ್ನ ಅಮ್ಮನ ಬಳಿ ಹೋಗಿಬಿಡುತ್ತೇನೆ. ನನ್ನಿಂದ ಯಾವುದನ್ನೂ ಬಯಸದ ವ್ಯಕ್ತಿ ಎಂದರೆ ಅವಳೊಬ್ಬಳೇ. ಅವಳು ಮಾತ್ರ ನಾನಿರುವ ಖಾಯಿಲೆ ಕೊಠಡಿಯೊಳಗೆ ತನ್ನ ಏರುಪೇರು ಮತ್ತು ಹುಚ್ಚಾಟಗಳನ್ನು ಪ್ರದರ್ಶಿಸುವುದಿಲ್ಲ. “

ತಾಯಿ ಬದುಕಿರುವವರೆಗೂ ಆಲ್ಫ್ರೆಡ್ ಅವಳಿಗೆ ಯಥೇಚ್ಚವಾಗಿ ಹಣ, ಉಡುಗೊರೆಗಳನ್ನು ಕಳುಹಿಸಿತ್ತಿದ್ದ. ತನಗೆ ವಿಶೇಷ ಲಾಭ ಬಂದಾಗ ಮರೆಯದೆ ತಾಯಿಗೆ ಸ್ವಲ್ಪ ಹಣ ಕಳುಹಿಸುವ ವಾಡಿಕೆ ಅವನಿಗೆ. ಹೀಗಾಗಿ ಅವಳ ಬ್ಯಾಂಕ್ ಅಕೌಂಟ್ ಬೆಳೆಯುತ್ತಾ ಹೋಯಿತು. ಒಮ್ಮೆ ಆಲ್ಫ್ರೆಡ್ ೩೦೦೦ ಕ್ರೌನುಗಳನ್ನು ಕಳುಹಿಸಿದಾಗ ಅವಳು ಅದನ್ನು ಬ್ಯಾಂಕಿನಲ್ಲಿಡದೆ, ಬಡಬಗ್ಗರಿಗೆ ಹಂಚಿದಳು. ವಿಧವೆಯರಿಗೆ ಏಕಾಂಗಿತನ ಎಷ್ಟಿರುತ್ತದೆ ಎಂಬುದರ ಅರಿವು ಆಗ ಆಲ್ಫ್ರೆಡ್ಡನಿಗಾಯಿತು. “ಅವಳಿಗೆ ನನ್ನನ್ನು ನೋಡಿದರೆ ಎಷ್ಟು ಸಂತೋಷವಾಗುತ್ತದೆ! ಅವಳೊಬ್ಬಳನ್ನೇ ಹೀಗೆ ಬಿಟ್ಟಿರುವುದು ನನಗೆ ನೋವು ತರುತ್ತದೆ. ಅವಳಿಗೆ ತೃಪ್ತಿ ಮತ್ತು ಸಮಾಧಾನಗಳಿದ್ದರೆ ಏನನ್ನಾದರೂ ಸಹಿಸಿಕೊಳ್ಳುತ್ತಾಳೆ. ಇಲ್ಲದೇ ಹೋದರೆ ಚಿಕ್ಕ ಪುಟ್ಟ ವಿಷಯಗಳೂ ದೊಡ್ಡದಾಗುತ್ತವೆ. ಮೊನ್ನೆ ಎಲ್ಲರೂ ಯಾವುದೋ ರೆಸ್ಟೋರೆಂಟಿನಲ್ಲಿ ಊಟ ಮಾಡಿದಾಗ, ನನಗೆ ಆ ಅಡಿಗೆ ಸ್ವಲ್ಪವೂ ಹಿಡಿಸಲಿಲ್ಲ. ಒಮ್ಮೆಗೇ ಅಸ್ವಸ್ಥನಾದೆ ನಾನು. ಆದರೆ ಅವಳು ಅದೇ ಅಡಿಗೆಯನ್ನು ಸಂತೋಷದಿಂದ ತಿಂದಳು. “ ಆಲ್ಫ್ರೆಡ್ ಮಿಕ್ಕ ವ್ಯಕ್ತಿಗಳ ಬಗ್ಗೆ ರೋಸು ಹೋದರೂ ತಾಯಿಯ ಬಗ್ಗೆ ಮಾತ್ರ ಎಂದಿಗೂ ಬೇಸರ ಪಟ್ಟಿಕೊಳ್ಳಲಿಲ್ಲ. ೧೮೮೯ರಲ್ಲಿ ತಾಯಿ ನಿಧನಳಾದಾಗ ಅವಳ ಬಳಿ ಇರಲಾಗಲಿಲ್ಲವೆಂಬ ಕೊರಗು ಅವನಲ್ಲಿ ಉಳಿಯಿತು. ಅವಳ ದೇಹಸಂಸ್ಕಾರ ತೀರಿಸಿಕೊಂಡು ಪ್ಯಾರಿಸ್ಸಿಗೆ ಹಿಂದಿರುಗಿದಾಗ ಅವನಿಗೆ ಹೃದಯ ಬೇನೆ ಬಂದಿತ್ತು. ಕುಟುಂಬದ ಆಸ್ತಿಯಲ್ಲಿ ಒಂದು ಪಾಲು ಆಲ್ಫ್ರೆಡ್ಡನದಾಯಿತು. ಆದರೆ ಅವನು ತಾಯಿಯ ಫೋಟೋ ಮತ್ತು ಅವಳಿಗೆ ಪ್ರಿಯವಾದ ಒಂದೆರಡು ಚಿಕ್ಕ ಸಾಮಾನುಗಳನ್ನು ಬಿಟ್ಟು ಮಿಕ್ಕಿದ್ದನ್ನು ಮುಟ್ಟಲಿಲ್ಲ. ಎಲ್ಲವನ್ನೂ ಸ್ಮಾರಕವೊಂದಕ್ಕೆ ಮತ್ತು ದಾನ ಧರ್ಮಗಳಿಗೆ ನೀಡಿದ. ತಾಯಿಯ ಆಸ್ತಿ ೮೪೦,೦೦೦ ಕ್ರೌನುಗಳು, ಅದರಲ್ಲಿ ಆಲ್ಫ್ರೆಡ್ಡನ ಪಾಲು ೧೭೮,೦೦೦ ಕ್ರೌನುಗಳು. ಇದು ಕರೋಲಿನ್ಸ್ಕಾ ಇನ್ಸ್ಟಿಟ್ಯೂಟ್ (Karolinska Institute) ಎಂಬ ಸಂಸ್ಥೆಗೆ ಹೋಗಿ, ಅಲ್ಲಿ ಅದು ವೈದ್ಯಕೀಯ ಸಂಶೋಧನಗೆ ಮುಡಿಪಾದ ಕ್ಯಾರೊಲಿನ್ ಆಂಡ್ರಿಯೆಟ್ಟ ನಿಧಿಯಾಯಿತು. ಇದಲ್ಲದೇ ತಾಯಿಯ ಹೆಸರಿನಲ್ಲಿ ಮಕ್ಕಳ ಆಸ್ಪತ್ರೆ, ಪ್ಯಾರಿಸ್ಸಿನಲ್ಲಿ ಸ್ವೀಡಿಷ್ ಜನರಿಗಾಗಿ ನಿಧಿಯೊಂದಕ್ಕೆ, ತನ್ನನ್ನು ಬೇಡಿದ ಮಿಕ್ಕ ಜನರಿಗೆ ಉದಾರವಾಗಿ ದಾನ ಮಾಡಿದ.

# ೭. ಪ್ಯಾರಿಸ್ಸಿಗೆ ನಮಸ್ಕಾರ

ಪ್ಯಾರಿಸ್ಸಿನಲ್ಲಿ ಅವನ ಕೆಲಸದ ಪ್ರಮಾಣ ಅತಿಯಾಗಿ ಆಲ್ಫ್ರೆಡ್ ಸದಾ ಒಂದಲ್ಲ ಒಂದು ಖಾಯಿಲೆಯಿಂದ ನರಳುತ್ತಿದ್ದ. ಮುಖವೆಲ್ಲಾ ಬಿಳಿಚಿಗೊಂಡು, ಯಾವಾಗಲೂ ದಣಿವಾದಂತೆ ತೋರಿತು ಅವನಿಗೆ. ವೈದ್ಯರು ಅವನಿಗೆ ಹೆಚ್ಚು ಮೂಲಂಗಿ ತಿಂದು ಕಪ್ಪಾದ ದ್ರಾಕ್ಷಾರಸವನ್ನು ಕುಡಿಯುವಂತೆ ಸೂಚಿಸಿದರು. ಒಮ್ಮೆ ಅವನು “ನನ್ನ ಮೇಲೆ ನಾನೇ ವಿಧಿಸಿಕೊಂಡಿರುವ ಗುಲಾಮಗಿರಿಯಿಂದ ದೂರವಾದರೆ ಸಾಕು” ಎಂದು ಉದ್ಗರಿಸಿದ್ದೂ ಉಂಟು. ಅಲ್ಲದೆ ನನ್ನ ಎಲ್ಲಾ ಕಂಪೆನಿಗಳನ್ನೂ ಮಾರಿಹಾಕಿ, ನಂತರ ಬರುವ ಡಿವಿಡೆಂಡುಗಳಿಂದ ಜೀವಿಸುತ್ತೇನೆ ಎಂದೂ ಹೇಳುತ್ತಿದ್ದ. ಅವನಿಗೆ ಬರುತ್ತಿದ್ದ ತಲೆನೋವಿನ ತೀವ್ರತೆ ಹೇಳ ತೀರದು. ಅದು ಅವನನ್ನು ಅನೇಕ ದಿನಗಳ  ಕಾಲ  ಹಾಸಿಗೆ ಹಿಡಿಯುವಂತೆ ಮಾಡುತ್ತಿತ್ತು. ಅವನಿಗೆ ಪ್ಯಾರಿಸ್ ಕೂಡ ಸಾಕಿನ್ನು ಎನ್ನಿಸಿತು. ಸದಾ ಶಾಂತಿಸಿಗುವ ಜನವಿಲ್ಲದ ಸ್ಥಳವನ್ನು ಹುಡುಕಿಕೊಳ್ಳಬೇಕು ಎನ್ನುವ ಹಂಬಲ ಬಲವಾಯಿತು. ಸೋಫಿಗೆ ಬರೆದ ಪತ್ರವೊಂದರಲ್ಲಿ ’೨.೪ ಮಿಲಿಯನ್ ಜನರಿರುವ ಈ ಪಟ್ಟಣದಲ್ಲಿ ನನಗಿಂತ ಬವಣೆ ಪಟ್ಟವರು ಇನ್ನೊಬನಿಲ್ಲ ಎನಿಸಿತ್ತದೆ” ಎಂದು ನುಡಿದಿದ್ದಾನೆ.

ಅದರೂ ಮಿಕ್ಕವರ ಒತ್ತಾಯಕ್ಕೆ ಮಣಿದು ಜೂಲಿಯೆಟ್ ಅಡಾಮ್ ಎಂಬ ಪ್ರಭಾವಿತ ಮಹಿಳೆಯ ಸ್ನೇಹ ಮಾಡಿಕೊಳ್ಳಬೇಕಾಯಿತು. ಪ್ಯಾರಿಸ್ಸಿನ ಸಾಹಿತ್ಯ, ರಾಜಕೀಯ, ಕಲೆ, ವಿಜ್ಞಾನ ಮುಂತಾದ ಕ್ಷೇತ್ರಗಳ ಗಣನೀಯ ವ್ಯಕ್ತಿಗಳಲ್ಲಿ ಹಲವರು ಅವಳನ್ನು ಬಲ್ಲವರಾಗಿದ್ದರು. ಹೀಗಾಗಿ ಆಲ್ಫ್ರೆಡ್ ಸೂಯಜ್ ಕಾಲುವೆ ನಿರ್ಮಿಸಿದ ಫರ್ಡಿನೆಂಡ್ ಡಿ ಲೆಸ್ಸೆಪ್ಸ್, ಕಾದಂಬರಿಕಾರರು ಗುಸ್ತಾವ್ ಫ್ಲಾಬೆರ್, ವಿಕ್ಟರ್ ಹ್ಯೂಗೋ ಮುಂತಾದವರನ್ನು ಅಗಿಂದಾಗ್ಗೆ ಬೇಟಿಮಾಡುವ ಹಾಗಾಯಿತು.

ಈ ವೇಳೆಗೆ ಆಲ್ಫ್ರೆಡ್ ಬ್ಯಾಲಿಸ್ಟೈಟ್ (Ballistite) ಎಂಬ ಹೊಸ ಸಿಡಿಮದ್ದನ್ನು ಕಂಡುಹಿಡಿಯುವುದರಲ್ಲಿ ಯಶಸ್ವಿಯಾಗಿದ್ದ. ಇದು ನೈಟ್ರೋ ಗ್ಲಿಸೆರಿನ್, ನೈಟ್ರೋ ಸೆಲ್ಲುಲೋಸ್ ಮತ್ತು ಕರ್ಪೂರಗಳ ಮಿಶ್ರಣವಾಗಿತ್ತು. ನೊಬೆಲ್ ಪೌಡರ್ ಎಂದೇ ಕರೆಯಲಾದ ಇದು ಮಿಲಿಟರಿ ಬಳಕೆಗೆ ಹೇಳಿ ಮಾಡಿಸಿದ ಉಪಕರಣ ಎನ್ನಿಸಿತು. ಕೆಲವರು ಇದು ಆಲ್ಫ್ರೆಡ್ ನಿರ್ಮಿಸಿದ ಅತ್ಯಂತ ಮಾರಕ ಅಸ್ತ್ರ ಎಂದು ಭಾವಿಸಿದರೆ, ಅವನ ಎಣಿಕೆ ಬೇರೆಯಾಗಿತ್ತು. ಇದರ ಶಕ್ತಿಯನ್ನು ಅರಿತ ರಾಷ್ಟ್ರ ಅದನ್ನು ಹೊಂದಿರುವ ದೇಶದ ವಿರುದ್ಧ ಯುದ್ಧಕ್ಕೆ ಹೋಗುವುದಿಲ್ಲ. ಹೀಗಾಗಿ ಇದು ಶಾಂತಿಯನ್ನು ಬೆಂಬಲಿಸುತ್ತದೆ ಎಂದೆಲ್ಲಾ ಕನಸು ಕಂಡಿದ್ದ ಅವನು.



ಬ್ಯಾಲಿಸ್ಟೈಟ್

ಆಲ್ಫ್ರೆಡ್ ತನ್ನ ಪ್ರಗತಿ ಹಿಮಾಲಯದ ಶಿಖರಗಳನ್ನು ಒಂದೊಂದಾಗಿ ಏರುತ್ತಿದ್ದ. ಸೋಲೆಂಬುದನ್ನು ಕಂಡವನಲ್ಲ. ಆದರೆ ಅವನ ಏಳಿಗೆಯನ್ನು ಸಹಿಸದ ಅನೇಕ ಜನರಿದ್ದರು. ಇದು ಸ್ವಾಭಾವಿಕವೇ. ಅವನ ಸ್ಪರ್ಧಿಗಳು ಅವನ ಹಿಂದೆ ಬಲು ರಾಜಕೀಯ

ನಡೆಸಿದ್ದರು. ಇದರ ಪರಿಣಾಮವಾಗಿ  ಫ್ರಾನ್ಸಿನಲ್ಲಿ ಆಲ್ಫ್ರೆಡ್ಡನ ಮೇಲೆ ಒಂದು ಆರೋಪ ರೂಪುಗೊಂಡಿತು. ಅವನು ಫ್ರೆಂಚ್ ಸರ್ಕಾರ ನೀಡಿದ್ದ ಪ್ರದೇಶವನ್ನು ದುರುಪಯೋಗ ಪಡೆಸಿಕೊಂಡು ಬ್ಯಾಲಿಸ್ಟೈಟ್ ವೃದ್ಧಿಸಿಕೊಂಡಿದ್ದಾನೆ. ಆದ್ದರಿಂದ ಅವನೊಬ್ಬ ದೇಶದ್ರೋಹಿ. ಹೀಗಾಗಿ ಅವನು ಆ ಪ್ರದೇಶದಲ್ಲಿ ಪ್ರಯೋಗಗಳನ್ನು ನಡೆಸುವುದನ್ನು ನಿಷೇಧಿಸಲಾಯಿತು. ಅಲ್ಲದೆ ಅವನ ಪ್ರಯೋಗಾಲಯವನ್ನು ಜಪ್ತಿ ಮಾಡಿ ಅಲ್ಲಿದ್ದ ರಾಸಾಯನಿಕ ವಸ್ತುಗಳನ್ನು ಪೋಲೀಸರು ವಶ ಪಡಿಸಿಕೊಂಡರು. ತನ್ನ ಪ್ರಾಮಾಣಿಕತೆ ಮತ್ತು ಗೌರವಗಳನ್ನು ಪ್ರಶ್ನಿಸಿದ ಫ್ರೆಂಚ್ ಅಧಿಕಾರಿಗಳ ಈ ಕ್ರಮ ಆಲ್ಫ್ರೆಡ್ಡನ ಮನಸ್ಸನ್ನು ಕಲಕಿತು. ಸಾಲದೆಂಬಂತೆ ಆ ಅಧಿಕಾರಿಗಳು ಆಲ್ಫ್ರೆಡ್ ಫ್ರಾನ್ಸಿಗೆ ಬೇಡದ ವ್ಯಕ್ತಿ ಎಂಬ ಧೋರಣೆಯನ್ನು ತಳೆದರು. ಅವನ ಸ್ಪರ್ಧಿಗಳಿಗೆ ಇದು ಸುಗ್ಗಿಯಾಗಿ ಪರಿಣಮಿಸಿ ಇದನ್ನೇ ತಳಹದಿಯನ್ನಾಗಿ ಮಾಡಿಕೊಂಡು ಅವರು ತಂತಮ್ಮ ಕಂಪೆನಿಗಳನ್ನು ವಿಸ್ತರಿಸಲು ಮುಂದಾದರು. ಪಾಪ, ಆಲ್ಫ್ರೆಡ್ ಫ್ರಾನ್ಸ್ ತನ್ನ ಮನೆ ಎಂದೇ ದೃಢವಾಗಿ ನಂಬಿದ್ದ. ಈಗ ಬುಡಕ್ಕೇ ಏಟು ಬಿದ್ದಿತ್ತು. ಹಿಂದೆಲ್ಲಾ ಅವನ ಮನಸ್ಸಿನಲ್ಲಿ ಬೇಸರ ತೋರಿದಾಗ ಅವನಿಗೆ ತನ್ನ ಪ್ರಯೋಗಶಾಲೆಯಲ್ಲಿ ಕೆಲಸನಿರತನಾಗುವುದೇ ಪರಿಹಾರ ಎನಿಸಿತ್ತು. ಆದರೆ ಈಗ ಆ ಪ್ರಯೋಗಶಾಲೆಯನ್ನೇ ಅವನಿಂದ ಕಿತ್ತುಕೊಳ್ಳಲಾಯಿತು. ಫ್ರಾನ್ಸ್ ದೇಶದ ಉನ್ನತ ವಲಯಗಳು ಕೂಡ ಇವನ ಬಗ್ಗೆ ಅಪಪ್ರಚಾರ ಮಾಡುತ್ತಿರುವುದನ್ನು ಸಹಿಸಲಾರದೆ ಅವನು ಪ್ಯಾರಿಸ್ಸನ್ನು ಬಿಡುವ ನಿರ್ಧಾರ ಕೈಗೊಂಡ.



ಅಲ್ಫ್ರೆಡ್ಡನ ಏಕಾಂಗಿತನವನ್ನು ಪ್ರತಿಬಿಂಬಿಸುವ ಅವನ ಸ್ಯಾನ್ ರೆಮೋನಲ್ಲಿನ ಮನೆ

ಈ ವೇಳೆಗೆ ಸರಿಯಾಗಿ ಇಟಲಿ ದೇಶದಿಂದ ೩೦೦ ಟನ್ ಬ್ಯಾಲಿಸ್ಟೈಟ್ ಗೆ ಬೇಡಿಕೆ ಬಂದದ್ದು ಒಂದು ವರವೇ ಆಗಿತ್ತು. ೧೮೯೦ರಲ್ಲಿ ಅಲ್ಲಿಯ ಸ್ಯಾನ್ ರೆಮೋ ಪಟ್ಟಣಕ್ಕೆ ಹೋಗಿ ನೆಲೆಸಲು ಸಿದ್ಧನಾದ. ಫ್ರೆಂಚ್ ಅಧಿಕಾರಿಗಳು ತನ್ನ ಉಪಕರಣಗಳನ್ನು ವಶ ಪಡಿಸಿಕೊಂಡಿರಲಿಲ್ಲ. ಅವೆಲ್ಲವನ್ನೂ ಇಟಲಿಗೆ ಸಾಗಿಸಿದ ಆಲ್ಫ್ರೆಡ್. ಸ್ಯಾನ್ ರೆಮೋನಲ್ಲಿ ಒಂದು “ನೊಬೆಲ್ ವಿಲ್ಲಾ” ಸಿದ್ಧವಾಯಿತು. ಇಲ್ಲಿಗೆ ಬರುವ ವೇಳೆಗೆ ಬಳಲಿ ಬೆಂಡಾಗಿದ್ದ ಆಲ್ಫ್ರೆಡ್. ಅಣ್ಣ ಲುಡ್ವಿಗನ ಸಾವು ಈಗಾಗಲೇ ಸಂಭವಿಸಿತ್ತು.  ಇದಕ್ಕೆ ಪೂರಕವಾಗಿ ವಿಕ್ಟರ್ ಹ್ಯೂಗೋ ನಂತಹ ಗೆಳೆಯರು ಆಗಲೇ ನಿಧನರಾಗಿದ್ದರು. ಅವನ ಹೃದಯದ ಸ್ಥಿತಿ ಆಗಿಂದಾಗ್ಗೆ ಉಗ್ರವಾಗುತ್ತಿತ್ತು. ಸದಾ ಸಾವಿನ ಚಿಂತೆಯಲ್ಲಿ ಮುಳುಗಿದ ಆಲ್ಫ್ರೆಡ್. ಗೆಳತಿ ಸೋಫೀಗೆ ಬರೆದ ಪತ್ರವೊಂದರಲ್ಲಿ ಆತ ಹೆಳುತ್ತಾನೆ - “ಐವತ್ನಾಲ್ಕನೆ ವಯಸ್ಸಿನಲ್ಲಿ ಪ್ರಪಂಚದಲ್ಲಿ ನಾನೊಬ್ಬನೇ ಮತ್ತು ನನ್ನಿಂದ ಸಂಬಳ ಪಡೆಯುವ ಸೇವಕನೊಬ್ಬ ಉಳಿದಾಗ ಕಪ್ಪು ಯೋಚನೆಗಳು ಬರುತ್ತವೆ, ಯಾರೂ ಊಹಿಸಲಾರದಂತಹ ಕಪ್ಪು ಭಾವನೆಗಳು. ನನ್ನ ಸೇವಕನ ಕಣ್ಣುಗಳನ್ನು ನೋಡಿದಾಗ ಅವನು ನನ್ನ ಬಗ್ಗೆ ಮರುಗುತ್ತಾನೆ ಎಂಬುದು ಗೊತ್ತಾಗುತ್ತದೆ.” ಸ್ಯಾನ್ ರೆಮೋಗೆ ಆಲ್ಫ್ರೆಡ್ಡನ ಅಣ್ಣನ ಮಕ್ಕಳು ಬಂದು ಅವನೊಡನೆ ತುಸು ಸಮಯ ಕಳೆಯುತ್ತಿದ್ದದ್ದು ಅವನಿಗೆ ಎಷ್ಟೋ ಹದ ಎನಿಸಿತು.

ತಾನು ತನ್ನ ಶಿಖರದಿಂದ ಕೆಳಗಿಳಿಯುತ್ತಿದ್ದೇನೆ ಎಂಬ ಭಾವನೆ ಅವನಲ್ಲಿ ಬಲವಾಯಿತು. ಸಾವು, ಜೀವನದ ನಶ್ವರತೆ ಇವುಗಳು ಅವನ ಮನಸ್ಸನ್ನು ತುಂಬಿದ್ದವು. ಆಗಲೇ ಮುದುಕನಂತೆ ಕಾಣುತ್ತಿದ್ದ ಅವನು, ನಿದ್ದೆಯಿಲ್ಲದೆ ಕಣ್ಣು ಕೆಂಪಾಗಿರುತ್ತಿತ್ತು. ತನ್ನ ಅಣ್ಣ ರಾಬರ್ಟನಿಗೆ ಬರೆದ ಪತ್ರದಲ್ಲಿ, ತನ್ನ ದೇಹವನ್ನು ಹೇಗೆ ಸಂಸ್ಕಾರ ಮಾಡಬೇಕು ಎಂಬುದನ್ನು ವಿವರಿಸಿದ್ದ - "ಸುಡುವುದು, ಹೂಳುವುದು ಒಂದೂ ಬೇಡ. ಇವೆಲ್ಲಾ ನಿಧಾನವಾದ ವಿಧಾನಗಳು. ಬದಲಾಗಿ ನನ್ನ ದೇಹವನ್ನು ಕಾದ ಸಲ್ಫೂರಿಕ್ ಆಸಿಡ್ ನಲ್ಲಿ ಅದ್ದಿ. ಒಂದೇ ನಿಮಿಷದಲ್ಲಿ ದೇಹ ಒಳ್ಳೆಯ ಗೊಬ್ಬರವಾಗುತ್ತದೆ. ನನ್ನ ದೇಹಕ್ಕೆ ೩೦ ರಿಂದ ೫೦ ಕಿಲೋ ಆಸಿಡ್ ಸಾಕಾಗುತ್ತದೆ."

ವಿಶ್ವ ಶಾಂತಿ ಮತ್ತು ಆಲ್ಫ್ರೆಡ್ ನೊಬೆಲ್

ವಿಪರ್ಯಾಸವೆಂದರೆ ಡೈನಮೈಟ್ ಕಂಡುಹಿಡಿದ ಆಲ್ಫ್ರೆಡ್ಡನಿಗೆ ಯುದ್ಧದಲ್ಲಿ ಯಾವ ಆಸಕ್ತಿಯೂ ಇರಲಿಲ್ಲ. "ಅದೊಂದು ಪರಮ ಅಪಾಯ, ಅತಿ ದೊಡ್ಡ ಅಪರಾಧ" ಎಂದು ಆತ ನುಡಿದಿದ್ದಾನೆ. ಆದರೆ ಶಾಂತಿಯ  ಬಗ್ಗೆ ಅಗಾಗ್ಗೆ ಮಾತನಾಡಿ ಆಲ್ಫ್ರೆಡ್ಡನನ್ನು ಪ್ರೇರೇಪಿಸಿದ್ದು ಬೆರ್ಥಾ ಎಂಬುದು ನಿಜ.

ನೊಬೆಲ್ ಮತ್ತು ಶಾಂತಿಯ ಬಗ್ಗೆ ಅನೇಕ ಧೀಮಂತ ವ್ಯಕ್ತಿಗಳು ಮಾತನಾಡಿದ್ದಾರೆ. ಆಲ್ಫ್ರೆಡ್ ನೊಬೆಲನ ಬಗ್ಗೆ ಆಲ್ಬರ್ಟ್ ಐನ್ ಸ್ಟೈನ್ ನುಡಿದ ಮಾತು ಗಣನೀಯ. " ಆತ ಹಿಂದಿದ್ದ ಸಿಡಿಮದ್ದುಗಳಿಗಿಂತ ವಿನಾಶಕಾರಿ ಡೈನಮೈಟನ್ನು ಕಂಡುಹಿಡಿದ. ಅವನ ಆತ್ಮವನ್ನು ತಣ್ಣಗಿರಿಸಲು ಅವನು ನೊಬೆಲ್ ಬಹುಮಾನವನ್ನು ಸೃಷ್ಟಿಸಿದ."

ಆಲ್ಫ್ರೆಡ್ ತನ್ನ ಅನ್ವೇಷಣೆಗಳನ್ನು ವೃಥಾ ಸಮರ್ಥಿಸಿಕೊಳ್ಳುವ ಸಾಹಸಕ್ಕೆ ಕೈಹಾಕಲಿಲ್ಲ. ಅವನ ಪ್ರಕಾರ ಅವನ ಸಿಡಿಮದ್ದುಗಳು ಗಣಿಗಳಲ್ಲಿನ ಕಾರ್ಯಕ್ಕೆ, ರೈಲುಮಾರ್ಗ, ಸೇತುವೆಗಳ ನಿರ್ಮಾಣದಲ್ಲಿ ಬಹು ಉಪಯುಕ್ತ. ಆದರೆ ಈ ಪ್ರಪಂಚದಲ್ಲಿ ಯಾವ ವಸ್ತುವನ್ನು ಬೇಕಾದರೂ ದುರುಪಯೋಗ ಪಡಿಸಿಕೊಳ್ಳಬಹುದು ಎಂಬ ಪ್ರಜ್ಞೆಯೂ ಅವನಿಗಿತ್ತು. ಸಂಶೋಧಕರು ಮತ್ತು ಅನ್ವೇಷಕರು ತಮ್ಮ ಶೋಧನೆಗಳ ದುರುಪಯೋಗಕ್ಕೆ ಹೊಣೆಗಾರರಲ್ಲ. ೧೮೯೪ರಲ್ಲಿ ಸ್ವೀಡನ್ನಿನಲ್ಲಿ ಬೊಫೋರ್ಸ್ ಸಂಸ್ಥೆಯ ಶಸ್ತ್ರಾಸ್ತ್ರ ವಿಭಾಗವನ್ನು ಸ್ಥಾಪಿಸಿದಾಗಲೂ ಅವನು ಇದೇ ಅಭಿಪ್ರಾಯವನ್ನು ಹೊಂದಿದ್ದ ಎಂಬುದು ಗಮನೀಯ. ಅಲ್ಲದೇ ಅವನು ಮತ್ತೆಲ್ಲೋ ಹೇಳಿದ್ದಾನೆ - "ಎರಡು ಸೈನ್ಯಗಳು ಒಂದು ಸೆಕೆಂಡಿನಲ್ಲಿ ಪರಸ್ಪರ ನಿರ್ನಾಮಗೊಳಿಸಿದಾಗ, ಎಲ್ಲಾ ನಾಗರಿಕತೆಗಳೂ ಭಯ ಪಟ್ಟು ಯುದ್ಧದಿಂದ ದೂರವಾಗುತ್ತಾರೆ ಮತ್ತು ತಂತಮ್ಮ ಸೈನ್ಯಗಳನ್ನು ವಿಸರ್ಜಿಸುತ್ತಾರೆ."

ಬೆರ್ಥಾ ವಿಶ್ವಶಾಂತಿಗಾಗಿ ಸಾಕಷ್ಟು ಹೋರಾಡಿದಳು. ಅವಳು ಬರೆದ ಪುಸ್ತಕ "ಅಸ್ತ್ರಗಳನ್ನು ಕೆಳಗಿಡಿ (Lay down Arms) ಪ್ರಸಿದ್ಧವೂ ಆಯಿತು. ಅದನ್ನು ಮೆಚ್ಚಿದ ಆಲ್ಫ್ರೆಡ್ ಅವಳ ಗುಣಗಾನ ಮಾಡಿದ. ಅವಳು ಅನೇಕ ಶಾಂತಿ ಸಮ್ಮೇಳನಗಳನ್ನು ಏರ್ಪಡಿಸಿದಳು. ಅದರ ಬಗ್ಗೆ ಮಾತನಾಡುತ್ತಾ ಆಲ್ಫ್ರೆಡ್ ಹೇಳುತ್ತಾನೆ - "ನಿನ್ನ ಅಧಿವೇಶನಗಳಿಗಿಂತ ಬೇಗ ನನ್ನ ಕಾರ್ಖಾನೆಗಳು ವಿಶ್ವ ಶಾಂತಿ ನೆಲೆಸುವಂತೆ ಮಾಡುತ್ತವೆ". ಆದರೂ ಶಾಂತಿಯತ್ತ ಮನವೊಲಿದ ಆಲ್ಫ್ರೆಡ್ ಪ್ರಪಂಚದಲ್ಲಿ ಜರುಗುತ್ತಿರುವ ಶಾಂತಿ ಪ್ರಯತ್ನಗಳ ಬಗ್ಗೆ ತನಗೆ ವರದಿ ಮಾಡಲು ಓರ್ವ ಅಧಿಕಾರಿಯನ್ನು ನೇಮಿಸಿಕೊಂಡ. ಆಸ್ಟ್ರಿಯಾದ

ಶಾಂತಿ ಸಮಿತಿಯೊಂದಕ್ಕೆ ಅವನು ಹಣಾಕಾಸಿನ ನೆರವನ್ನೂ ನೀಡುತ್ತಿದ್ದ. ಭೀಕರ ಯುದ್ಧಾನಂತರ ಶಾಂತಿ ನೆಲೆಸುವುದೆಂಬುದು ಅವನ ಅಚಲ ನಂಬಿಕೆ.

ಒಮ್ಮೆ ಬೆರ್ಥಾಳಿಗೆ ಪತ್ರ ಬರೆದು ಆಲ್ಫ್ರೆಡ್ ಐದು ವರ್ಷಕ್ಕೊಂದರಂತೆ ವಿಶ್ವಶಾಂತಿಗಾಗಿ ದುಡಿದವರಿಗೆ ಬಹುಮಾನ ಕೊಡಲು ಅನುಕೂಲವಾಗುವಂತೆ ನಿಧಿಯೊಂದನ್ನು ಸ್ಥಾಪಿಸುತ್ತೇನೆ ಎಂದು ನುಡಿದಿದ್ದ. ಬೆರ್ಥಾ ಉತ್ತರಿಸಿದ್ದಳು - ಶಾಂತಿದೂತರಿಗೆ ಬೇಕಾಗಿರುವುದು ಹಣ, ಬಹುಮಾನವಲ್ಲ. ಆದರೂ ತಾನು ರಚಿಸಿದ ಒಂದು ಉಯಿಲಿನಲ್ಲಿ ಆಲ್ಫ್ರೆಡ್ ಶಾಂತಿ ಬಹುಮಾನ ನೀಡಲು ಆಸ್ಪ್ರಿಯಾದ ಶಾಂತಿ ಸಮಿತಿಗೆ ಹಣವನ್ನು ನೀಡಿದ್ದ. ಮುಂದೆ ಇದನ್ನು ಬದಲಿಸಿ ತನ್ನ ಕೊನೆಯ ಉಯಿಲನ್ನು ರಚಿಸಿದ. ಅಲ್ಲಿ ವಿಶ್ವಶಾಂತಿಗೆ ಒಂದು ಬಹುಮಾನವನ್ನು ನಿರ್ಮಿಸುವ ಸೂಚನೆಯನ್ನು ನೀಡಿದ. ಈ ವಿಷಯ ಬೆರ್ಥಾಳಿಗೂ ತಿಳಿದಿದ್ದು ಅವಳಿಗೆ ಅತ್ಯಂತ ಆನಂದವಾಯಿತು ಎನ್ನಲಾಗಿದೆ.  ಇದಲ್ಲದೆ ಅವನು ಸ್ವೀಡನ್ನಿನ ವೃತ್ತ ಪತ್ರಿಕೆಯೊಂದನ್ನು ಕೊಳ್ಳಲು ಅನುವಾದ. ಕಾರಣ, ತನ್ನ ವಾಣಿಜ್ಯದ ಬೆಳವಣಿಗೆಗಲ್ಲ. ವಿಶ್ವಕ್ಕೆ ನಿಜವಾದ ಮತ್ತು ಸತ್ಯವಾದ ಮಾತುಗಳನ್ನು ಹೇಳುವುದಕ್ಕೆ.

ಆದರೆ ಫ್ರಾನ್ಸ್ ಮತ್ತು ಇತರ ದೇಶಗಳ ಸರ್ಕಾರಗಳು ಅವನ ಮಾತುಗಳನ್ನು ನಂಬಲಿಲ್ಲ. ತನ್ನ ಸಿಡಿಮದ್ದಿನ ಕಂಪೆನಿಗಳಿಗೆ ಲಾಭ ತಂದುಕೊಡುವ ಉದ್ದೇಶದಿಂದ ಅವನು ಈ ಬಗೆಯ ಹೇಳಿಕೆಗಳನ್ನು ನೀಡುತ್ತಿದ್ದಾನೆ ಎಂದು ಅವನನ್ನು ಗೇಲಿ ಮಾಡಲಾಯಿತು.

# ೮. ರಗ್ನಾರ್ ಸೋಲ್ ಮನ್ (Ragnar Sohlman)

"ಮುದುಕನಾದ ಮೇಲೆ ನಿನಗೆ ಹೊಸ ಗೆಳೆಯರು ಸಿಗುವುದಿಲ್ಲ" ಎಂಬ ಮಾತಿಗೆ ಹೊರತಾಗಿ ೬೦ ವರ್ಷದ ಆಲ್ಫ್ರೆಡ್ಡನಿಗೆ ೧೮೯೩ರಲ್ಲಿ ಹೊಸ ಪರಿಚಯವೊಂದಾಯ್ತು. ಈತನೇ ರಗ್ನಾರ್ ಸೋಲ್ ಮನ್; ಆಗ ೨೩ ವರ್ಷದ ಕೆಮಿಕಲ್ ಎಂಜಿನಿಯರ್ ಆಗಿದ್ದ ಈತ ಆಲ್ಫ್ರೆಡ್ಡನ ವಿಶ್ವಾಸಕ್ಕೆ ಕೂಡಲೆ ಪಾತ್ರನಾದ. ತಾಯಿ, ಅಣ್ಣ ಲುಡ್ವಿಗ್, ಹೆಸರಿಗೆ ಗೆಳೆಯ ಬಾರ್ಬೆ ಸತ್ತು ಹೋಗಿದ್ದು, ಸೋಫೀ ಹೆಸ್ ದೂರವಾಗಿದ್ದಳು. ಹತ್ತಿರದೊಬ್ಬರ ಅತ್ಯಂತ ಅವಶ್ಯಕತೆ ಇದ್ದಾಗ ಸೋಲ್ ಮನ್ ದೊರಕಿದ್ದ.



ತರುಣ ರಗ್ನಾರ್ ಸೋಲ್ಮನ್

ಸೋಲ್ಮನ್ ತನ್ನ ನೆನಹುಗಳನ್ನು ಬರೆದಿದ್ದು ಅದು ೧೯೫೦ರಲ್ಲಿ ಅವನ ಮರಣಾನಂತರ ಹೊರ ಬಂದಿತು. ಇದು ಆಲ್ಫ್ರೆಡ್ಡನ ಮತ್ತು ಅವನ ಉಯಿಲಿನ ಬಗ್ಗೆ ನಮಗೆ ದೊರೆತಿರುವ ಪ್ರಮುಖ ಆಧಾರವಾಗಿದೆ. ಅವನು ಸ್ಟಾಕ್ ಹೋಮಿನಲ್ಲಿ ತನ್ನ ತಾಂತ್ರಿಕ ವಿದ್ಯಾಭ್ಯಾಸ ಮುಗಿಸಿ ಅಮೆರಿಕಾದಲ್ಲಿನ ಡೈನಮೈಟ್ ಕಾರ್ಖಾನೆಯೊಂದರಲ್ಲಿ ಕೆಲಸ ಮಾಡಿದ್ದ. ಅವನ ಸಮೀಪವರ್ತಿಗಳು ಸೋಲ್ಮನ್ನನ  ಬಗ್ಗೆ ಪ್ರಶಂಸೆ ವ್ಯಕ್ತ ಪಡಿಸಿದಾಗ ಆಲ್ಫ್ರೆಡ್ ಅವನನ್ನು ವೈಯಕ್ತಿಕ ಸಹಾಯಕನಾಗಿ ಕೂಡಲೇ ನೇಮಿಸಿಕೊಂಡ.

೧೮೯೩ರಲ್ಲಿ ಅವರ ಮೊದಲ ಬೇಟಿಯಾಯಿತು. ಪತ್ರಗಳನ್ನು ಬರೆಯುವಲ್ಲಿ ನಿರತನಾಗಿದ್ದ ಆಲ್ಫ್ರೆಡ್ಡನನ್ನು ಕಂಡು ಸೋಲ್ಮನ್ ಹೇಳುತ್ತಾನೆ - "ಎತ್ತರ ಸರಾಸರಿಗಿಂತ ಕಡಿಮೆ, ಖಚಿತವಾಗಿ ಕಾಣುವ ಮೈಕಟ್ಟು, ವಿಶಾಲವಾದ ಹಣೆ, ಕಪ್ಪಾಗಿ ಒತ್ತಾಗಿರುವ ಹುಬ್ಬು, ಆಳವಾದ ಕಣ್ಣು. ಅವನ ದೃಷ್ಟಿ ಕತ್ತರಿಸಿ ನೋಡುವಂಥದ್ದು, ಅವನ ಮನೋಧರ್ಮದಂತೆ ಜೀವಂತ ಮತ್ತು ಅಗಾಗ್ಗೆ ಬದಲಾಗುವಂತಹುದು." ಇದು ಅವನ ಸಹಾಯಕ ನೀಡಿರುವ ಆಲ್ಫ್ರೆಡ್ ನೊಬೆಲ್ಲನ ಸ್ಪಷ್ಟ ಚಿತ್ರ.

ಮೊದಲು ಅವನ ಪುಸ್ತಕ ಭಂಡಾರವನ್ನು ಅಚ್ಚುಕಟ್ಟುಗೊಳಿಸಿದ ಸೋಲ್ಮನ್. ಅವನು ಆಲ್ಫ್ರೆಡ್ಡನ ಕಾರ್ಯದರ್ಶಿಯಾಗುವುದಕ್ಕೆ ಒಂದು ಕೊರತೆ ಇತ್ತು- ಅವನಿಗೆ ಭಾಷೆಗಳಲ್ಲಿ ಸಾಕಷ್ಟು ಪರಿಣತಿ ಇರಲಿಲ್ಲ. ಹೀಗಾಗಿ ಆಲ್ಫ್ರೆಡ್ ಓರ್ವ ಸ್ವೀಡಿಷ್ ಮಹಿಳೆಯನ್ನು ಕಾರ್ಯದರ್ಶಿಣಿಯಾಗಿ ನೆಮಿಸಿಕೊಂಡ. ಆದರೆ ಸೋಲ್ಮನ್ನನಿಗೆ ರಸಾಯನ ಶಾಸ್ತ್ರದಲ್ಲಿ ಸಾಕಷ್ಟು ಪರಿಣತಿ ಇದ್ದುದರಿಂದ ಅವನಿಗೆ ಸ್ಯಾನ್ ರೆಮೋನಲ್ಲಿನ ಪ್ರಯೋಗಶಾಲೆಯಲ್ಲಿ ಪೇಟೆಂಟುಗಳ ಬಗ್ಗೆಯ ಸಂಪರ್ಕವನ್ನು ನೋಡಿಕೊಳ್ಳುವ ಕೆಲಸವನ್ನು ವಹಿಸಲಾಯಿತು ಲಾಯಿತು.

ಸೋಲಮನ್ನನ್ನು ನೋಡಿದರೆ ಆಲ್ಫ್ರೆಡ್ಡಿಗೆ ತನ್ನನ್ನೆ ನೋಡಿದಂತೆ ಆಗುತ್ತಿತ್ತು, ಕಾರಣ ಯೌವನದಲ್ಲಿ ಅವನು ಹಾಗೆಯೇ ಇದ್ದ. ಅವನ ದಕ್ಷತೆ ಮತ್ತು ಪ್ರತಿಭೆ ಅಸಾಮಾನ್ಯವಾಗಿದ್ದವು. ಸೋಲಮನ್ ಆಲ್ಫ್ರೆಡ್ಡಿಗೆ ವಿಧೇಯತೆ ಮತ್ತು ಗೌರವಗಳನ್ನು ತೋರಿಸಿದ್ದು ಅವನ ಸ್ನೇಹಪರತೆಗೆ ಆಲ್ಫ್ರೆಡ್ ಮಾರುಹೋದ. ಇಲ್ಲಿ ಮತ್ತೊಂದು ಅಂಶವನ್ನು ಮರೆಯಬಾರದು. ಸೋಲ್ಮನ್

ಸ್ವೀಡನ್ನಿನ ಪೌರ. ಅವನು ತನ್ನ ಮುಂದಿದ್ದಾಗ ಆಲ್ಫ್ರೆಡ್ಡನಿಗೆ ತಾಯ್ನಾಡು ಜ್ಞಾಪಕಕ್ಕೆ ಬರುತ್ತಿತ್ತು, ಹಳೆಯ ನೆನಪುಗಳು ಮರುಕಳಿಸುತ್ತಿದ್ದವು. ಅದಲ್ಲದೆ ಅಲ್ಲಿದ್ದು ದಿವಾಳಿಯಾಗುವುದರಲ್ಲಿದ್ದ ಬೊಫೋರ್ಸ್ ಕಂಪೆನಿಯನ್ನು ಕೊಂಡು, ವಿಸ್ತರಿಸಿ ಅಲ್ಲಿ ಸಿಡಿಮದ್ದನ್ನು ತಯಾರಿಸುವ ಹಂಬಲ ಆಲ್ಫ್ರೆಡ್ಡನಿಗೆ. ಹೀಗಾದಾಗ ಸ್ವೀಡನ್ ಜರ್ಮನಿ ಮತ್ತು ಇಂಗ್ಲೆಂಡುಗಳಿಗಿಂತ ಮುಂದಾಗುವುದು, ತಾನು ತನ್ನ ತಾಯ್ನಾಡಿಗೆ ಮರಳ ಬಹುದು ಎಂದೆಲ್ಲಾ ಎಣಿಸಿದ. ಜನವರಿ ೧೮೯೪ರಲ್ಲಿ ಒಂದು ಮಿಲಿಯನ್ ಸ್ವೀಡಿಷ್ ಕ್ರೌನುಗಳನ್ನು ತೆತ್ತು ಆ ಕಂಪೆನಿಯನ್ನು ಕೊಳ್ಳುವುದರಲ್ಲಿ ಯಶಸ್ವಿಯಾದ. ಅಲ್ಲಿಯ ಚೇರ್ಮನ್ ಹುದ್ದೆಯನ್ನೂ ಅಲಂಕರಿಸಿದ. ಅವನು ಸಿದ್ಧ ಪಡಿಸಿದ ಸುಧಾರಿತ ಗನ್ ಪೌಡರ್ ನಿರ್ಮಾಣಕ್ಕೆ ಒಂದು ಪ್ರಯೋಗಾಲಯ, ಸಿಡಿಮದ್ದುಗಳನ್ನು ಪರೀಕ್ಷಿಸುವ ಕೇಂದ್ರ ಮತ್ತು ಬಂದೂಕು ತಯಾರಿಕೆ ಮುಂತಾದುವು ಕಾರ್ಯವಹಿಸಿದವು. ಅಲ್ಲಿಯ ವಿಶೇಷ ಅಧಿಕಾರಿಯಾದ ಸೋಲ್ಮನ್. ಆಲ್ಫ್ರೆಡ್ ಈ ಕಂಪೆನಿಯ ಆಗುಹೋಗುಗಳ ಬಗ್ಗೆ ಪೂರ್ಣ ಗಮನ ಹರಿಸಿದ್ದ. ಒಂದು ಪಕ್ಷ ಅವನು ಸ್ವೀಡನ್ನಿನಿಂದ ಹೊರಗಿದ್ದರೆ ಟೆಲಿಗ್ರಾಂಗಳ ಮೂಲಕ ಮಾಹಿತಿಯನ್ನು ಪಡೆದು, ಆ ಮೂಲಕವೇ ತನ್ನ ಹುಕುಂಗಳನ್ನು ನೀಡುತ್ತಿದ್ದ. ೧.೫ ಮಿಲಿಯನ್ ಕ್ರೌನುಗಳನ್ನು ವಿನಿಯೋಗಿಸಿ ಕಾರ್ಖಾನೆಯ ಪುನರ್ನಿಮಾಣ ಮಾಡಿದ. ಉದ್ದಿಮೆ ಮತ್ತೆ ತಲೆ ಎತ್ತಿ ನಿಲ್ಲುವಂತಾಯ್ತು. ಅವನಿಗೆ ಬಲು ಪ್ರಿಯವಾಗಿದ್ದ ಉಕ್ಕಿನ ತಯಾರಿಕೆಯನ್ನು ಕೈಗೊಳ್ಳುವುದು ಸಾಧ್ಯವಾಯಿತು. ಅವನು ಉತ್ತಮ ಕಚ್ಚಾ ಪದಾರ್ಥಗಳನ್ನು ಮಾತ್ರವಲ್ಲ, ಉತ್ತಮ ಸಿಬ್ಬಂದಿಯನ್ನೂ ಬಯಸಿದ. ತಾನು ಎಣಿಸಿದ ಮಟ್ಟವನ್ನು ಮುಟ್ಟದ ಅಧಿಕಾರಿಗಳನ್ನು, ಹಿಂದೆ ಮುಂದೆ ನೋಡದೆ ತೆಗೆದು ಹಾಕಿದ. ಹಾಗೆಯೇ ತನ್ನ ಕಾರ್ಮಿಕರ ಅಭ್ಯುದಯಕ್ಕೂ ಗಮನ ನೀಡಿದ. ಅವರಿಗೆ ವೈದ್ಯಕೀಯ ಸೌಲಭ್ಯವನ್ನು ಸೃಷ್ಟಿಸಿ, ನಿವೃತ್ತರಾದವರಿಗೆ ಪೆನ್ಷನ್ ನೀಡಿದ. ಹೀಗಾಗಿ ಅವನಲ್ಲಿ ಕೆಲಸ ಮಾಡಲು ಜನ ಕಛೇರಿಯ ಮುಂದೆ ಸಾಲ್ಗಟ್ಟಿ ನಿಲ್ಲುತ್ತಿದ್ದರು.

ಮತ್ತೆ ಎಲ್ಲಿಲ್ಲದ ಹುರುಪು ಮತ್ತು ಚಟುವಟಿಕೆ ಬಂತು ಆಲ್ಫ್ರೆಡ್ಡನಿಗೆ. ಅವನೇ ವೈಯಕ್ತಿಕವಾಗಿ ಕ್ಷಿಪಣಿಗಳ ಪರೀಕ್ಷೆಯಲ್ಲಿ ಭಾಗವಹಿಸಿದ. ಕಷ್ಟಪಟ್ಟು ದುಡಿಯುತ್ತಿದ್ದ, ಸದಾ ಯಾವುದಾದರೂ ಆಲೋಚನೆ ಮನಸ್ಸಿನಲ್ಲಿ. ಸಹೋದ್ಯೋಗಿಗಳಿಗೆ ಯಾವಾಗಲೂ ಉತ್ತೇಜನ ಇದ್ದೇ ಇರುತ್ತಿತ್ತು. ತೋರಿಕೆ ಸ್ವಲ್ಪವೂ ಇಲ್ಲ. ಸರಳ ಜೀವನದ ಮಾತನಾಡುತ್ತಿದ್ದ. ಆದರೆ ಹಲಕೆಲವು ಸೌಲಭ್ಯಗಳು ಅವನಿಗೆ ಅವಶ್ಯಕವಾದವು. ಅವನಿಗೆ ಚಳಿಯ ಹೆದರಿಕೆ ವಿಪರೀತ. ತಣ್ಣಗಿನ ಗಾಳಿಯನ್ನು ಹೊರದೂಡಲು ತನ್ನ ಮಂಚದ ಸುತ್ತಾ ಮರದ ಗೋಡೆಗಳನ್ನು ನಿರ್ಮಿಸಿಕೊಂಡಿದ್ದ. ಹಾಸಿಗೆ ಸರಿಯಾದುದಾಗಿರಬೇಕು, ಇಲ್ಲವಾದರೆ ನಿದ್ದೆ ಮಾಡಿವುದು ಕಷ್ಟ; ಅಲ್ಲದೆ ಉತ್ತಮ ಅಡಿಗೆಮನೆಯೂ ಬೇಕೆನಿಸಿತು ಅವನಿಗೆ. ಕಾರಣ ಅವನ ಆಹಾರದ ಮೇಲೆ ಸುಮಾರು ನಿಷೇಧಗಳಿದ್ದವು. ಸ್ವೀಡಿಷ್ ಆಹಾರ ಅವನಿಗೆ ಒಗ್ಗುತ್ತಿರಲಿಲ್ಲ. ಹಾಗಾಗಿ ಅವನು ಫ್ರೆಂಚ್ ಬಾಣಸಿಗನನ್ನು ಕರೆಸಿಕೊಂಡ. ಇವನ್ನು ಬಿಟ್ಟರೆ ಅವನಿಗಿದ್ದ ಅವಶ್ಯಕತೆ ಎಂದರೆ ಪುಸ್ತಕಗಳನ್ನು ಇರಿಸುವ ಅಲೆಮಾರು!

ಕುದುರೆ ಅವನಿಗೆ ಪಂಚ ಪ್ರಾಣ. ಮನೆಯಲ್ಲಿ ತನ್ನ ಉಪಯೋಗಕ್ಕೆಂದು ಮೂರು ಕುದುರೆಗಳನ್ನು ಕಟ್ಟಿದ್ದ. ಇದಲ್ಲದೆ ಗಾಡಿಯಲ್ಲಿಯೂ ಓಡಾಡುತ್ತಿದ್ದ ಆಲ್ಫ್ರೆಡ್. ಅದಕ್ಕೆ ದೀಪಗಳು ಬೇರೆ. ದೀಪ ಪ್ರಜ್ವಲಿಸುತ್ತಿದ್ದ ಗಾಡಿಯಲ್ಲಿ ಅವನು ಪ್ರಯಾಣ ಮಾಡುವುದನ್ನು ನೋಡಿ ಮೆಚ್ಚದವರಿಲ್ಲ. ರಥವನೇರಿ ಬಂದ ಆಲ್ಫ್ರೆಡ್! ಗಾಲಿಗೆ ರಬ್ಬರ್ ಕವಚ ತೊಡಿಸಿದ್ದ ಕಾರಣ, ಅವನ ರಥ ಚಲಿಸುತ್ತಿದ್ದರೆ ಹೊರಬರುತ್ತಿದ್ದದ್ದು ಕುದುರೆಗಳು ಮಾಡುವ ಶಬ್ಧ ಮಾತ್ರ.

ಆಲ್ಫ್ರೆಡ್ ಅಲ್ಲಿ ಬಂದು ನೆಲೆಸಿದಾಗ ಬೋಫೋರ್ಸ್ ನಗರಕ್ಕೆ ರೈಲುಕಂಬಿಯಿದ್ದರೂ ಟ್ರೈನ್ ಸಂಪರ್ಕವಿರಲಿಲ್ಲ. ಟ್ರೈನ್ ಹಾದುಹೋಗುತ್ತಿದ್ದ ಹತ್ತಿರದ ಪಟ್ಟಣದಲ್ಲಿನ ಸ್ಟೇಷನ್ ಮಾಸ್ಟರನ್ನು ಬೇಟಿ ಮಾಡಿ ಆಲ್ಫ್ರೆಡ್ ಬೊಫೋರ್ಸಿಗೆ ಟ್ರೈನೊಂದನ್ನು

ನಿಯಮಿಸುವಂತೆ  ಮನವಿ ಮಾಡಿದ. ಅವನಿತ್ತ ಉತ್ತರ - ಅದಕ್ಕೆ ಬಹು ಬೆಲೆಯನ್ನು ತೆತ್ತ ಬೇಕಾಗುತ್ತದೆ, ನಿಮ್ಮಿಂದ ಸಾಧ್ಯವೆ?". ಹಣ ಎಷ್ಟಾಗ ಬಹುದು ಎಂದು ಆಲ್ಫ್ರೆಡ್ ವಿಚಾರಿಸಿದಾಗ ಸ್ಟೇಷನ್ ಮಾಸ್ಟರ್ ಹೆಳಿದ - "೫೦ ಕ್ರೌನುಗಳು". ತಕ್ಷಣವೇ ಆಲ್ಫ್ರೆಡ್ ತನ್ನ ಜೇಬಿಗೆ ಕೈಹಾಕಿ ಎರಡು ಸಾವಿರ ಕ್ರೌನುಗಳನ್ನು ತೆಗೆದು ಅವನಿಗಿತ್ತ. ಬೊಫೋರ್ಸಿಗೆ ಟ್ರೈನ್ ಬರಲಾರಂಭಿಸಿತು.



ಬೊಫೋರ್ಸ್ ಕಾರ್ಖಾನೆ



ಆಲ್ಫ್ರೆಡ್ಡನ ಪ್ರಯೋಗಶಾಲೆ

ಬೊಫೋರ್ಸಿನ ಕಾರ್ಖಾನೆಗೆ ಸ್ವೀಡನ್ನಿನ ರಾಜ ಆಸ್ಕರ್ II ಬೇಟಿ ನೀಡಿದ್ದು ಗಮನಾರ್ಹ. ಅವನಿಗೆ ಅಲ್ಲಿಯೇ ತಯಾರಾದ ಸಿಡಿಮದ್ದನ್ನು ಉಪಯೋಗಿಸಿ ಮಿಲಿಟರಿ ವಂದನೆಯನ್ನು ಸಲ್ಲಿಸಲಾಯಿತು.


ಇವಲ್ಲದೆ ಇನ್ನೂ ಅನೇಕ ಯೋಜನೆಗಳನ್ನು ಹಾಕಿಕೊಂಡಿದ್ದ ಆಲ್ಫ್ರೆಡ್. ರಬ್ಬರ್, ಪೊಟಾಸಿಯಮ್, ಕೃತಕ ರೇಷ್ಮೆ, ಕೃತಕ ಆಭರಣ, ಹೊಸ ಬಗೆಯ ಉಕ್ಕು   ಅವುಗಳಲ್ಲಿ ಕೆಲವು. ಚಲನ ಚಿತ್ರದ ನಿರ್ಮಾಣಕ್ಕೂ ಕೈಹಾಕಿದ್ದ ಆಲ್ಫ್ರೆಡ್. ಆದರೆ ಕಾರಣಾಂತರಗಳಿಂದ ಮುಂದುವರೆಯಲಿಲ್ಲ. ಆದರೂ ಅವನು ಹಾಕಿಕೊಂಡಿದ್ದ ಮಾರ್ಗ ಸಮರ್ಪಕವಾಗಿಯೇ ಇತ್ತು. ಈ ಮಧ್ಯೆ ಮತ್ತಾರೋ ೧೮೯೪ರಲ್ಲಿ ಬೈಸಿಕಲ್ ಒಂದರ ವಿನ್ಯಾಸಗೊಳಿಸಿದ. ಕೂಡಲೇ ಆಲ್ಫ್ರೆಡ್ ಅವನೊಡನೆ ೪೦,೦೦೦ ಪೌಂಡುಗಳ ಒಪ್ಪಂದವನ್ನು ಮಾಡಿಕೊಂಡು ಮೂರುಚಕ್ರದ ಗಾಡಿ ತಯರಾಗುವಂತೆ ಮಾಡಿದ. ಹೀಗಿದ್ದರೂ ೧೮೯೮ರಲ್ಲಿ ಈ ಕಂಪೆನಿ ಮುಳುಗಿಹೋಯಿತು. ಹಾರುವ ಟೋರ್ಪೆಡೋ (flying toropedo)ನ ಕಲ್ಪನೆಯೊಂದು ಹೊರಬಂದಾಗ ಅದರ ಅನ್ವೇಷಕನಿಗೆ ಕೊರತೆಯಿದ್ದಷ್ಟು ಹಣ ನೀಡಿ ಅದು ಸಫಲವಾಗುವಂತೆ ಮಾಡಿದ ಆಲ್ಫ್ರೆಡ್. ಇವು ಮುಂದೆ ಬಂದ ಮಹಾಯುದ್ಧಗಳಲ್ಲಿ ಮಹತ್ವದ ಪಾತ್ರ ವಹಿಸಿದವು. ಗಗನ ಫೋಟೋಗ್ರಫಿ (air photography)  ಆಲ್ಫ್ರೆಡ್ ಉತ್ತೇಜನ ನೀಡಿದ ಮತ್ತೊಂದು ಅನ್ವೇಷಣೆ. ಹಾರುವ ಯಂತ್ರಗಳ ಕಲ್ಪನೆಯನ್ನು ಹೊತ್ತು ಸಹಾಯ ಬೇಡಿದ ಮತ್ತೊಬ್ಬ ಅನ್ವೇಷಕನಿಗೆ ಬೆನ್ನು ತಟ್ಟಿದ ಆಲ್ಫ್ರೆಡ್. ಹೀಗೆ ಅನ್ಯರ  ಅನೇಕ ಯೋಜನೆಗಳಿಗೆ ಆಲ್ಫ್ರೆಡ್ ಹಣ ಒದಗಿಸಿದ.

ಕೇವಲ ಮೂರು ವರ್ಷಗಳಲ್ಲಿ ಆಲ್ಫ್ರೆಡ್ ಬೋಫೋರ್ಸನ್ನು ಒಂದು ವಿಶ್ವಮಟ್ಟದ ಸಂಸ್ಥೆಯನ್ನಾಗಿ ಪರಿವರ್ತಿಸಿದ. ಅದರಲ್ಲಿ ಅಸ್ತ್ರಾಸ್ತ್ರ, ಸಿಡಿಮದ್ದುಗಳಲ್ಲದೆ, x ರೇ, ವೈದ್ಯಕೀಯ ಸಾಮಗ್ರಿ, ಬಣ್ಣಕ್ಕೆ ಬೇಕಾದ ಸಾಮಗ್ರಿ ಎಲ್ಲವನ್ನೂ ತಯಾರಿಸಲಾಗುತ್ತಿತ್ತು. ಮುಂದೆ ಅದು ಗಂಧಕಾಮ್ಲ ಮತ್ತಿ ನೈಟ್ರಿಕ್ ಆಮ್ಲಗಳನ್ನೂ ತಯಾರಿಸ ತೊಡಗಿತು.

# ೯. ಮರಣ ಮತ್ತು ಉಯಿಲು

೧೮೯೬ರಲ್ಲಿ ಭೀಕರ ಸುದ್ದಿ ಹೊರಬಂತು- ಆಲ್ಫ್ರೆಡ್ಡನ ಕೊನೆ ಹತ್ತಿರ ಬರುತ್ತಿದೆ. ಆಗ ಪ್ಯಾರಿಸ್ಸಿನಲ್ಲಿದ್ದ ಅವನು ಸ್ಯಾನ್ ರೆಮೋವಿನಲ್ಲಿ ಹೊಸ ಮನೆಗಳನ್ನು ಕೊಳ್ಳುವ ತಯಾರಿಯಲ್ಲಿದ್ದ. ಕೂಡಲೇ ಸ್ಯಾನ್ ರೆಮೋಗೆ ಹಿಂದಿರುಗಿದ. ಡಿಸೆಂಬರ್ ೭, ೧೮೯೬ರಂದು ಅವನು ಸೋಲಮನ್ನನ ಸಾಧನೆಯೊಂದನ್ನು ಪ್ರಶಂಸಿಸಿ ಪತ್ರ ಬರೆದ. ಇದೇ ಅವನು ಬರೆದ ಕೊನೆಯ ಪತ್ರ ಎನಿಸಿತು. ಕೆಲವೇ ಗಂಟೆಗಳಲ್ಲಿ ಅವನಿಗೆ ಪಾರ್ಶ್ವವಾಯು ಹೊಡೆಯಿತು. ಅವನಿಗೆ ಮಾತನಾಡುವುದು ಕಷ್ಟವೆನಿಸಿ, ಜ್ಞಾಪಕ ಶಕ್ತಿಯೂ ಕಡಿಮೆ ಆಯಿತು. ಈಗ ಅವನ ಮಾತೃಭಾಷೆ ಸ್ವೀಡಿಷ್ ಒಂದೇ ಅವನಿಂದ ಹೊರಡುತ್ತಿತ್ತು. ಬಳಿ ಇದ್ದದ್ದು ಅವನ ಸೇವಕರು ಮಾತ್ರ.  ಕೊನೆಯದಾಗಿ ಅವನಿಂದ ಹೊರಟ ಒಂದೇ ಒಂದು ಪದವೆಂದರೆ "ಟೆಲಿಗ್ರಾಂ".  ಕೋಡಲೇ ಸೇವಕರು ಅವನ ಅಣ್ಣನ ಮಕ್ಕಳು ಮತ್ತು ಸೋಲ್ಮನ್ನನಿಗೆ ತಂತಿ ಕಳುಹಿಸಿದರು. ಆದರೆ ಅವರೆಲ್ಲಾ ಬರುವಷ್ಟರಲ್ಲಿ, ಡಿಸೆಂಬರ್ ೧೦, ೧೮೯೬ರಂದು  ಆಲ್ಫ್ರೆಡ್ ನೊಬೆಲ್ ತನ್ನ ಕೊನೆಯುಸಿರೆಳೆದ!  ಹೀಗಾಗಿ ಡಿಸೆಂಬರ್ ೧೦ರಂದು ನೊಬೆಲ್ ಬಹುಮಾನವನ್ನು ವಿತರಣೆ ಮಾಡಲಾಗುತ್ತದೆ.

ಅವನ ಶವಸಂಸ್ಕಾರ ಸ್ಟಾಕ್ ಹೋಮಿನಲ್ಲಿ ನಡೆಯಬೇಕೆಂಬ ತೀರ್ಮಾನವಾಯಿತು. ಮೊದಲು ಅವನು ಸತ್ತ ಸ್ಯಾನ್ ರೆಮೋವಿನಲ್ಲಿನ ಮನೆಯಲ್ಲಿ ಸಣ್ಣ ಆಚರಣೆಯೊಂದನ್ನು ನರವೇರಿಸಲಾಯಿತು. ಇದರ ಪೌರೋಹಿತ್ಯವನ್ನು ವಹಿಸಿದವನು ಜೊನಾಥನ್ ಸೋಡರ್ಬ್ಲೋಂ ಹೆಸರಿನ ಸ್ವೀಡನ್ನಿನ ಅರ್ಚ್ ಬಿಷಪ್. ಇವನು ಅಲ್ಫ್ರೆಡ್ಡನ ಕೆಲವೇ ಆಪ್ತರಲ್ಲಿ ಒಬ್ಬನಾಗಿದ್ದು ವಿವಿಧ ಚರ್ಚುಗಳನ್ನು ಒಂದುಗೂಡಿಸಲು ಸೆಣಾಸಾಡಿದ. ಈ ಕಾರಣಕ್ಕಾಗಿಯೇ ಆವನಿಗೆ ೧೯೩೦ರ ಶಾಂತಿ ನೋಬೆಲ್ ಬಹುಮಾನವನ್ನು ನೀಡಲಾಯಿತು. ಪಾದ್ರಿಯಾಗಿ ಆ ಬಹುಮಾನವನ್ನು ಸ್ವೀಕರಿಸಿರುವವರಲ್ಲಿ ಅವನು ಮೊದಲಿಗ. ಅಲ್ಫ್ರೆಡ್ಡನಿಗೆ ಶ್ರದ್ಧಾಂಜಲಿಯನ್ನು ಅರ್ಪಿಸುತ್ತಾ ಅವನು ಹೀಗೆ ನುಡಿದಿದ್ದಾನೆ. "ಬಹುತೇಕ ಮಂದಿ ಅವನೊಬ್ಬ ಧನಿಕ ಮತ್ತು ಅಸಾಧಾರಣ ವ್ಯಕ್ತಿ ಎಂದು ಭಾವಿಸಿದ್ದಾರೆ. ಆದರೆ ಅವನೊಬ್ಬ ಮಾನವ ಎಂದು ಪರಿಗಣಿಸಿದವರು ಕಡಿಮೆ. ನಾವು ಈ ತಪ್ಪನ್ನು ಮುಂದುವರೆಸುವುದು ಬೇಡ. "




ಜೊನಾಥನ್ ಸೋಡಬೋರ್ಮ್

ನಂತರ ಶವವನ್ನು ಸ್ಟಾಕ್ ಹೋಮಿಗೆ ಟ್ರೈನಿನಲ್ಲಿ ಒಯ್ಯಲಾಗಿ ಡಿಸೆಂಬರ್ ೩೦ ರಂದು ಅವನ ಅಂತ್ಯಕ್ರಿಯೆ ನರವೇರಿತು. ಎಲ್ಲೆಲ್ಲಿಯೂ ಟಾರ್ಚುಗಳು, ಶವದ ಗಾಡಿಯ ಹಿಂದೆ ನಲವತ್ತು ಇತರೆ ಗಾಡಿಗಳು, ಅವುಗಳಲ್ಲಿ ನಾಲ್ಕರ ಭರ್ತಿ ಹಾರ, ತುರಾಯಿಗಳು. ಸ್ಟಾಕ್ ಹೋಮಿನಲ್ಲಿ ಜರುಗಿದ ಅತ್ಯಂತ ವೈಭವೋಪೇತ ಅಂತ್ಯಕ್ರಿಯೆಗಳಲ್ಲಿ ಒಂದು ಅದು. ಅನೇಕ ಮಹನೀಯರು ಆಗಮಿಸಿ ಆಲ್ಫ್ರೆಡ್ಡನಿಗೆ ನಮನ ಸಲ್ಲಿಸಿದರು. ಯಾವುದೋ ಕಾರಣಕ್ಕಾಗಿ ರಾಜನ ಕಡೆಯಿಂದ ಯಾರೂ ಹಾಜರಿರಲಿಲ್ಲ. ರಸ್ತೆಯುದ್ದಕ್ಕೂ ಸಾವಿರಾರು ಜನ ನೆರೆದಿದ್ದರು. ಸುರಿದಿದ್ದ ಬಿಳಿ ಮಂಜಿನಲ್ಲಿ ಟಾರ್ಚುಗಳ ಮತ್ತು ದೀಪಗಳ ಬೆಳಕು ಪ್ರತಿಫಲಿತವಾಗಿ ಹೊಳಪು ಪ್ರಜ್ವಲಿಸಿತು.

ಸ್ಯಾನ್ ರೆಮೋಗೆ ಆಗಮಿಸಿದ ಆಲ್ಫ್ರೆಡ್ಡನ ಅಣ್ಣನ ಮಗ ಎಮ್ಯಾನ್ಯುಯೆಲ್ ಮತ್ತು ಸೋಲ್ಮನ್ ಮನೆಯನ್ನೆಲ್ಲಾ ಶೋಧಿಸಿ ಕಾಗದ ಪತ್ರ ಮತ್ತು ಇದ್ದ ಹಣ ಇತ್ಯಾದಿಗಳನ್ನು ವಶ ಪಡೆಸಿಕೊಂಡರು. ಅಲ್ಲಿ ಆಲ್ಫ್ರೆಡ್ ರಚಿಸಿದ ಎರಡನೆಯ ಉಯಿಲು ದೊರೆಯಿತು. ಅದರ ಮೇಲೆ ಒಂದು ಹೇಳಿಕೆ ಬೇರೆ - ಈ ಉಯಿಲನ್ನು ವಜಾ ಮಾಡಿ ೧೮೯೫ರ ಡಿಸೆಂಬರ್ ೧೫ ರಂದು ಮತ್ತೊಂದು ಉಯಿಲನ್ನು ರಚಿಸಲಾಗಿದೆ. ಅದು ಎನ್ಸ್ಕಿಲ್ಡಾ ಬ್ಯಾಂಕಿನ ವಶದಲ್ಲಿದೆ. ಸೋಲಮನ್ ಕೂಡಲೇ ಆ ಉಯಿಲನ್ನು ನೋಡಬಯಸಿ ಬ್ಯಾಂಕ್ ಅಧಿಕಾರಿಗಳನ್ನು ಕೇಳಿಕೊಂಡ. ಯಜಮಾನನ ಸಾವಿನ ದುಃಖದಲ್ಲಿ ಮುಳುಗಿಹೋಗಿದ್ದ ಅವನಿಗೆ ಸ್ಟಾಕ್ ಹೋಮಿನಿಂದ ಒಂದು ತಾರು ಬಂತು. ಓದಿ ನಡುಕ ಹುಟ್ಟಿತು. - "ಆಲ್ಫ್ರೆಡ್ ನೊಬೆಲನ ಉಯಿಲನ್ನು ತೆರೆದು ನೋಡಲಾಗಿದೆ. ಅವನ ಆಸೆಯ ಪ್ರಕಾರ ನೀನು ಮತ್ತು ರುಡಾಲ್ಫ್ ಲಿಲ್ಯೆಕ್ವಿಸ್ಟ್ (Rudolf Lilljequist )ಇಬ್ಬರನ್ನೂ ಉಯಿಲಿನ ನಿರ್ವಾಹಕರನ್ನಾಗಿ ನೇಮಕ ಮಾಡಲಾಗಿದೆ." ಆಗ ಸೋಲ್ಮನ್ನನ ವಯಸ್ಸು ಕೇವಲ ೨೫ ವರ್ಷ. ಈ ಕಾರ್ಯಕ್ಕೆ ನಾನು ನಿಜವಾಗಿಯೂ ಅರ್ಹನೇ ಎಂಬ ಚಿಂತೆ ಅವನನ್ನು ಆವರಿಸಿತು. ಈಗ ಅವನು ಉಯಿಲನ್ನು ಓದ ಬಯಸಿ ಅದರ ಪ್ರತಿಯನ್ನು ತರಿಸಿಕೊಂಡ. ಓದಿ ಅವನ ಚಿಂತೆ ಮತ್ತೂ ಗಾಢವಾಯಿತು.

ಅನೇಕ ಮುಖ್ಯ ವಿಷಯಗಳ ಮಧ್ಯೆ ಉಯಿಲಿನಲ್ಲಿ ಇದ್ದ ಒಂದು ಗೌಣವಾದ ಅಂಶವೆಂದರೆ ಮರಣಾನಂತರ ತನ್ನ ಅಯೋರ್ಟಾವನ್ನು ಕತ್ತರಿಸಿ ನಂತರ ಶವಸಂಸ್ಕಾರ ಮಾಡುವುದು ಎಂಬ ಸೂಚನೆ. ಆಲ್ಫ್ರೆಡ್ಡನಿಗೆ ಸದಾ ಎಲ್ಲಿ ಅವನನ್ನು ಜೀವಸಹಿತ ಸುಟ್ಟುಬಿಡುತ್ತಾರೋ ಎಂಬ ಒಂದೇ ಹೆದರಿಕೆ. ಅದಕ್ಕಾಗಿಯೇ ಈ ಮನವಿಮಾಡಿಕೊಂಡಿದ್ದ. ಇದರ ಬಗ್ಗೆ ಅವನು ಅಗಾಗ್ಗೆ ನುಡಿಯುತ್ತಲೂ ಇದ್ದು, ಅನೇಕರು ಆಶ್ಚರ್ಯವನ್ನು ವ್ಯಕ್ತ ಪಡಿಸಿದ್ದರು. ಈ ಬಗ್ಗೆ ವೈದ್ಯರಲ್ಲಿ ವಿನಂತಿ ಮಾಡಿಕೊಂಡಾಗ ಅವನ ದೇಹ ಕೊಳೆಯದಂತೆ ರಾಸಾಯನಿಕ ವಸ್ತುಗಳಿಂದ ತೊಳೆಯುವಾಗ ಜರುಗುವ ಕ್ರಿಯೆಗಳು ಅಯೋರ್ಟಾವನ್ನು ಕತ್ತರಿಸಿದ್ದಕ್ಕೆ ಸಮವಾಗುತ್ತವೆ ಎಂದು ಅವರು ಉತ್ತರ ನೀಡಿದರು.



ನೊಬೆಲನ ಉಯಿಲು

ಉಯಿಲಲ್ಲಿ ಇದ್ದದ್ದೇನು?

ಮುಖ್ಯವಾಗಿ ತನ್ನ ಆಸ್ತಿಯ ಶೇಕಡಾ ೬ ಭಾಗವನ್ನು ಬಂಧುಗಳಿಗೆ ತನ್ನದೇ ಆದ ರೀತಿ ಹಂಚಿದ್ದ ಆಲ್ಫ್ರೆಡ್ ಉಳಿದ ೯೪ ಭಾಗವನ್ನು ಬಹುಮಾನಗಳಿಗೆ ವಿನಿಯೋಗಿಸಿದ್ದ. ಮರಣ ಹೊಂದಿದಾಗ ಅವನ ಆಸ್ತಿ ೩೧ ಮಿಲಿಯನ್ ಸ್ವೀಡಿಷ್ ಕ್ರೊನೋರುಗಳು, ಅಂದರೆ ೧.೭

ಮಿಲಿಯನ್ ಪೌಂಡುಗಳು. ಇಂದಿಗೆ ಅದರ ಮೌಲ್ಯ ೫೦೦ ಮಿಲಿಯನ್ ಅಮೆರಿಕನ್ ಡಾಲರುಗಳನ್ನು ಮೀರುತ್ತದೆ.

ಅವನ ಉಯಿಲಿನ ಒಕ್ಕಣೆಯ ಮುಖ್ಯ ಭಾಗದಲ್ಲಿ ಹೀಗೆ ನಮೂದಿಸಿದ್ದ.

"ಉಳಿದ ಬಂಡವಾಳವನ್ನು ಕರಗಿಸಿ ಟ್ರಸ್ಟ್ ಒಂದನ್ನು ಸ್ಥಾಪಿಸುವುದು. ಬರುವ ಬಡ್ಡಿಹಣದಿಂದ ಹಿಂದಿನ ವರ್ಷ ಮಾನವ ಕಲ್ಯಾಣಕ್ಕೆ ಅತ್ಯಂತವಾಗಿ ಕಾಣಿಕೆ ಕೊಟ್ಟವರಿಗೆ ಬಹುಮಾನಗಳಾಗಿ ನೀಡುವುದು. ಬಡ್ಡಿಯನ್ನು ಐದು ಭಾಗಗಳಾಗಿ ಮಾಡುವುದು. ಒಂದು ಭೌತಶಾಸ್ತ್ರದಲ್ಲಿ ಪ್ರಮುಖ ಅವಿಷ್ಕರಣ ಅಥವಾ ಶೋಧನೆಗೆ, ಎರಡು ರಸಾಯನ ಶಾಸ್ತ್ರದಲ್ಲಿ ಪ್ರಮುಖ ಅವಿಷ್ಕರಣ ಅಥವಾ ಶೋಧನೆಗೆ, ಮೂರು ವೈದ್ಯಕೀಯ ಕ್ಷೇತ್ರದಲ್ಲಿ ಅಸಾಮಾನ್ಯ ಕೊಡುಗೆ ಕೊಟ್ಟವರಿಗೆ, ನಾಲ್ಕು, ಸಾಹಿತ್ಯದಲ್ಲಿ, ಆದರ್ಶದ ದೃಷ್ಟಿಯುಳ್ಳ ಮತ್ತು ಅಸಾಮಾನ್ಯವಾಗಿರುವ ಕೃತಿ ರಚಿಸಿದವರಿಗೆ, ಐದು, ಶಾಂತಿ, ಎರಡು ದೇಶಗಳ ಮೈತ್ರಿಗೆ ಕಾರಣರಾದವರಿಗೆ, ಸೈನ್ಯಪ್ರಮಾಣವನ್ನು ಕಡಿಮೆ ಮಾಡಿದ ಅಥವಾ ಸೈನ್ಯವನ್ನು ಇಡಿಯಾಗಿ ಬದಿಗಿಟ್ಟವರಿಗೆ ಅಥವಾ ಶಾಂತಿ ಒಕ್ಕೂಟಗಳನ್ನು ಏರ್ಪಡಿಸಿದವರಿಗೆ. ಭೌತಶಾಸ್ತ್ರ ಮತ್ತು ರಸಾಯನ ಶಾಸ್ತ್ರದ ಬಹುಮಾನಗಳನ್ನು ಸ್ವೀಡನ್ನಿನ ವಿಜ್ಞಾನ ಅಕಾಡೆಮಿ ನಿರ್ಧರಿಸುವುದು, ವೈದ್ಯಕೀಯ ಬಹುಮಾನವನ್ನು ಕ್ಯಾಥೆರಿನ್ ಇನ್ಸ್ಟಿಟ್ಯೂಟ್ (ಇದು ಸ್ವೀಡನ್ನಿನ ಸಂಸ್ಥೆ) ನಿರ್ಧರಿಸಿದರೆ, ಸಾಹಿತ್ಯ ಬಹುಮಾನವನ್ನು ಸ್ಟಾಕ್ ಹೋಮಿನಲ್ಲಿರುವ ಅಕಾಡೆಮಿ ನಿರ್ಧರಿಸುವುದು. ಶಾಂತಿ ಬಹುಮಾನವನ್ನು ನಾರ್ವೆ ರಾಷ್ಟ್ರ ನಿರ್ಧರಿಸಲಿ. ಬಹುಮಾನಕ್ಕೆ ಆಯ್ಕೆ ಮಾಡುವಾಗ ಅಭ್ಯರ್ಥಿಯ ದೇಶವನ್ನು ಗಣನೆಗೆ ತೆಗೆದುಕೊಳ್ಳಬಾರದು. ಅವನು ಸ್ಕಾಂಡಿನೇವಿಯನ್ ಆಗಿರಲಿ, ಬಿಡಲಿ ಅತ್ಯಂತ ಯೋಗ್ಯನಿಗೆ ಮಾತ್ರ ಈ ಬಹುಮಾನ ದೊರಕಬೇಕೆಂಬುದು ನನ್ನ ಹೆಬ್ಬಯಕೆ."

ಉಯಿಲಿಗೆ ಪ್ರತಿಕ್ರಿಯೆ

ಉಯಿಲನ್ನು ನೋಡಿದ ಆಲ್ಫ್ರೆಡ್ಡನ ಸಂಬಂಧಿಗಳಿಗೆ ಎಲ್ಲಿಲ್ಲದ ಕೋಪ. ಅವನು ಹಿಂದಿನ ಉಯಿಲಿನಲ್ಲಿ ನಮೂದಿಸಿದ್ದಂತೆ ಅವನ ಆಸ್ತಿಯ ಶೇಕಡಾ ೨೦ ಅವರಿಗೆ ಸಂದಿರಲಿಲ್ಲ! ರಾಬರ್ಟನ ಮಕ್ಕಳು ಅಷ್ಟಾಗಿ ಹಣ ಕಂಡವರಲ್ಲ."ನಮಗೆತೀರಾ ಅನ್ಯಾಯವಾಯಿತು"ಎಂದು ಆಲ್ಫ್ರೆಡ್ಡನನ್ನು ದೂರಿದರು. ಆದರೆ ತನ್ನ ಚಿಕ್ಕಪ್ಪನ ಇಂಗಿತವನ್ನು ಪೂರೈಸಿಯೇ ತೀರುತ್ತೇನೆ ಎಂದು ಪಣ ತೊಟ್ಟವನು ಎಮ್ಯಾನ್ಯುಯೆಲ್. ಅವನು ಸೋಲಮನ್ನನ ಬೆಂಬಲಕ್ಕೆ ನಿಂತ. ಅಲ್ಲದೆ ಈಗ ಅವನು ಒಂದು ರೀತಿಯಲ್ಲಿ ನೊಬೆಲ್ ಉದ್ದಿಮೆಗಳ ಮುಖ್ಯಸ್ಥನಾಗಿದ್ದ. ಹೀಗಾಗಿ ಆಸ್ತಿಯನ್ನು ಸಮವಾಗಿ ನಮ್ಮಲ್ಲಿ ಹಂಚಬೇಕು ಎಂದು ನ್ಯಾಯಾಲಯದಲ್ಲಿ ಸಂಬಂಧಿಗಳು ಮುಂದೆ ದಾವಾ ಹೂಡಿದ ಹಿನ್ನೆಲೆಯಲ್ಲಿ ಇದು ಬಹು ಮಹತ್ವವಾದದ್ದು ಎನಿಸಿತು.




ಎಮ್ಯಾನ್ಯುಯೆಲ್

ಆದರೆ ಎಮ್ಯಾನ್ಯುಯೆಲ್ಲನಿಗೆ ತನ್ನದೇ ಆದ ಸಂಶಯ. ಸಂಬಂಧಿಸಿದ ಉದ್ದಿಮೆಗಳನ್ನು ಕರಗಿಸಿ ಬಂದ ಹಣವನ್ನು ಆಲ್ಫ್ರೆಡ್ ಬಹುಮಾನಗಳಿಗೆ ಇಡಿಗಂಟಾಗಿ ಇಡ ಬಯಸಿರುವುದು ನೊಬೆಲ್ ಉದ್ದಿಮೆಗಳ ಏಳಿಗೆಗೆ ಮಾರಕವಾಗಬಹುದು. ಅದರಿಂದಾಗಿ

ಅವರ ಅಸ್ತಿಯ ಮೌಲ್ಯ ವರ್ಷೇ ವರ್ಷೇ ಕಡಿಮೆಯಾಗುತ್ತಾ ಬರಬಹುದು. ಇದು ಅವನ ಹೆದರಿಕೆ. ನುರಿತ ಉದ್ದಮಿ ಆಲ್ಫ್ರೆಡ್ ಇದನ್ನು ಊಹಿಸಿರಲಿಲ್ಲವೇ? ಇಂತಹ ಕೆಲಸವನ್ನು ಏಕೆ ಮಾಡಿದ? ಪ್ರಾಯಶಃ ಆಲ್ಫ್ರೆಡ್ಡನ ಎಣಿಕೆಯೇ ಬೇರೆ. ಆಸ್ತಿಯ ಬೆಲೆ ಕಡಿಮೆ ಆಗುತ್ತಾ ಹೋಗುವುದು ಆಲ್ಫ್ರೆಡ್ಡನಿಗೆ ಸಮಸ್ಯೆ ಎನಿಸಲಿಲ್ಲ. ಆದರೆ ತಾನು ಬಯಸಿದ, ನಂಬಿದ ಉದ್ದೇಶಕ್ಕೆ ತನ್ನ ಹಣ ವ್ಯಯವಾದರೆ ಅವನಿಗೆ ಸಂತೋಷ. ಮಾನವ ಕುಲದ ಕಲ್ಯಾಣಾಕ್ಕಾಗಿ ಶ್ರಮಿಸಿದ ವ್ಯಕ್ತಿಗಳಿಗೆ ಮನ್ನಣೆ ಇತ್ತು, ಅವರಿಗೆ ಬಹುಮಾನ ನೀಡುವುದು ಅವನಿಗೆ ಎಲ್ಲಕ್ಕಿಂತ ಮುಖ್ಯ ಎನಿಸಿತು.

ಉಯಿಲಿನ ಒಕ್ಕಣೆ ಬಾಹಿರವಾದಂತೆ ಅಲ್ಲಿಲ್ಲಿ ಪ್ರತಿಭಟನೆ ವ್ಯಕ್ತವಾದವು. ಕೆಲವರು ಉಯಿಲನ್ನು ಕಾರ್ಯರೂಪಕ್ಕೆ ತರದಂತೆ ತಡೆಹಿಡಿಯುವ ಮಾತುಗಳನ್ನೂ ಆಡಿದರು. ಒಂದು ಪತ್ರಿಕೆ ಅದನ್ನು 'ಮಹದೋದ್ದೇಶ ಮತ್ತು ಮಹಾ ಪ್ರಮಾದ" ಎಂದು ವರ್ಣಿಸಿತು. ಕೆಲವರು ಬಹುಮಾನಗಳ ಇಂಗಿತವನ್ನು ಮರೆತು ಅದನ್ನು ಕಾರ್ಯರೂಪಕ್ಕೆ ತರುವ ವಿಧಾನ, ಅಲ್ಲಿ ತಲೆದೋರಬಹುದಾದ ಸಮಸ್ಯೆಗಳತ್ತ ಗಮನ ಹರಿಸಿದರು. ಉದಾಹರಣೆಗೆ ಸಾಹಿತ್ಯ ಬಹುಮಾನವನ್ನು ಆದರ್ಶದ ದೃಷ್ಟಿಯುಳ್ಳ ಮತ್ತು ಅಸಾಮಾನ್ಯವಾಗಿರುವ ಕೃತಿ ರಚಿಸಿದವರಿಗೆ ನೀಡುವುದು ಎಂದು ಆಲ್ಫ್ರೆಡ್ ಬರೆದಿದ್ದ. ಆದರೆ ಈ "ಆದರ್ಶ" ಎಂದರೇನು ಎಂಬುದು ಚರ್ಚಾಸ್ಪದವಾಯಿತು. ಸಾಕಷ್ಟು ಚರ್ಚೆಯೂ ಆಯಿತು. ಸ್ವೀಡನ್ ದೇಶದ ಬುದ್ಧಿವಂತರು ಅನೇಕ ತಕರಾರುಗಳನ್ನು ಎತ್ತಿದರು, ಕೆಲವರು ಉಯಿಲನ್ನು ಖಂಡಿಸಿ, ಅವನಿಗೆ ದೇಶಪ್ರೇಮವಿಲ್ಲ ಎಂದು ಸಾರಿದರು. ಸ್ವೀಡನ್ನಿನ ವಾಮಪಂಥೀಯರು ನೊಬೆಲನನ್ನು ವಾಚಾಮಗೋಚರವಾಗಿ ಬೈದಾಡಿ "ಈ ಸಾಹುಕಾರನ ಹಣ ನಮಗೆ ಬೇಡ" ಎಂದರು.

ಇಂತಹ ತಕರಾರುಗಳೆಷ್ಟೇ ಇದ್ದರೂ ಹೆಚ್ಚು ಪತ್ರಿಕೆಗಳಲ್ಲಿ ಬಹುಮಾನಗಳಿಗೆ ಪ್ರೋತ್ಸಾಹ ದೊರೆಯಿತು. "ಇದು ನಮ್ಮ ಚರಿತ್ರೆಯ ಅತ್ಯಂತ ಮಹತ್ವದ ಘಟನೆಗಳಲ್ಲಿ ಒಂದು." "ಯಾವುದೇ ಏಕೈಕ ವ್ಯಕ್ತಿ ಒಂದು ಆದರ್ಶ ಧ್ಯೇಯಕ್ಕೆ ನೀಡಿರುವ ಅತ್ಯಂತ ದೊಡ್ಡ ಕಾಣಿಕೆ ಇದು." 'ಇದರಿಂದಾಗಿ ಆಲ್ಫ್ರೆಡ್ ನೊಬೆಲನ ಹೆಸರು ಅಮರವಾಗುತ್ತದೆ." ಹೀಗೆ ಅವನ ಗುಣಗಾನ ಮಾಡಲಾಯಿತು.



ರಗ್ನಾರ್ ಸೋಲ್ಮನ್

ಸಾಲದೆಂಬಂತೆ ರಾಜ ಆಸ್ಕರ್ ಎಮ್ಯಾನ್ಯೆಲ್ಲನನ್ನು ಬರಮಾಡಕೊಂಡು ಕಿಡಿಕಾರಿದ. "ನಿನ್ನ ಚಿಕ್ಕಪ್ಪನ ಉಯಿಲು ದೇಶಪ್ರೇಮದ ಕೃತಿಯಲ್ಲ. ನೆರೆ ರಾಷ್ಟ್ರ ನಾರ್ವೆ ಶಾಂತಿ ಬಹುಮಾನ ನೀಡುವುದೇ? ತನ್ನ ಬಂಧುಗಳ ಹಿತವನ್ನು ಬದಿಗಿಟ್ಟು ಹೆಂಗಸರ ಮಾತುಗಳನ್ನು ಕೇಳಿ ಇಂತಹ ಉಯಿಲನು ಬರೆದಿದ್ದಾನೆ." ಆದರೆ ಹಿಂಜರಿಯಲಿಲ್ಲ ಎಮ್ಯಾನ್ಯುಯೆಲ್ ಮತ್ತು ಸೋಲ್ಮನ್. ಎದುರು ಮಾತನಾಡಿದ ರಷ್ಯಾ ಪ್ರಜೆ ಎಮಾನ್ಯುಯೆಲ್ ಬಂಧನಕ್ಕೆ ಒಳಗಾಗದೇ ಹೋಗಿದ್ದು ಅವನ ಅದೃಷ್ಟ.

ಉಯಿಲಿನ ನಿರ್ವಹಣೆಯಲ್ಲಿ ಪ್ರಮುಖ ಪಾತ್ರ ವಹಿಸಿದ ಸೋಲ್ಮನ್ನನಿಗೆ ಒಂದೆಡೆ ಹೆಮ್ಮೆ, ಮತ್ತೊಂದೆಡೆ ಅಂಜಿಕೆ. ತನ್ನ ಚಿಕ್ಕಪ್ಪನ ಆಸೆಯನ್ನು ಪೂರೈಸಲು ಎಮಾನ್ಯುಯೆಲ್ ಪಣತೊಟ್ಟ. ಅವನಿಗೆ ಸೋಲ್ಮನ್ನ ಜವಾಬ್ದಾರಿಯ ಅರಿವಾಯಿತು. ಕೂಡಲೆ ಅವನಿಗೆ ಡೈರೆಕ್ಟರ್ ಓರ್ವನಿಗೆ ನೀಡಬಹುದಾದ ಸ್ಥಾನ ಮಾನಗಳನ್ನು ಕೊಟ್ಟ. ಪ್ರತಿ ದಿನ - ಪ್ಯಾರಿಸ್, ಸೈಂಟ್ ಪೀಟರ್ಸ್ ಬರ್ಗ್, ಸ್ಯಾನ್ ರಿಮೋ, ಸ್ಟಾಕ್ ಹೋಂ, ಲಂಡನ್ ಹೀಗೆ ಪ್ರಯಾಣಮಾಡುತ್ತಿದ್ದ ಅವನು ಅತ್ಯಂತ  ದುಬಾರಿಯ ಹೊಟೆಲುಗಳಲ್ಲಿ ತಂಗುವಂತೆ ಮಾಡಿದ. ಸೋಲ್ಮನ್ ಕಾಗದ ಪತ್ರಗಳನ್ನು ಸ್ಥಳದಿಂದ ಸ್ಥಳಕ್ಕೆ ಕುದುರೆಗಾಡಿಯಲ್ಲಿ, ಟ್ರೈನುಗಳಲ್ಲಿ ಒಯ್ಯುತ್ತಿದ್ದ. ಅವನ ಪ್ರಾಣಕ್ಕೆ ಮತ್ತು ಕಾಗದ ಪತ್ರಗಳಿಗೆ  ಸದಾ ಅಪಾಯ ಕಂಡ ಅವನು ತನ್ನೊಂದಿಗೆ ಪಿಸ್ತೂಲನ್ನು ಹಿಡಿದಿರುತ್ತಿದ್ದ.

ಸೋಲ್ ಮನ್ ಹೀಗೆ ಊರಿನಿಂದ ಊರಿಗೆ ಪಯಣಿಸಿ ನೊಬೆಲನ ಆಸ್ತಿ ಎಷ್ಟಿತ್ತು ಎಂಬುದನ್ನು ನಿಗದಿಮಾಡಿದ. ಒಂದೊಂದೂ ಉದ್ದಿಮಯ ಶೇರ್ ಬೆಲೆ ಎಷ್ಟು? ಮಾರಿದರೆ ಹೇಗೆ ಅಂದಾಜು ಮಾಡಿದ. ನೊಬೆಲ್ ತನ್ನ ಆಸ್ತಿಯನ್ನು ಕರಗಿಸಿ ಹಣವನ್ನು ಟ್ರಸ್ಟೊಂದರಲ್ಲಿ ಇಡ ಬೇಕು ಎಂದಿದ್ದನಷ್ಟೆ. ಆದರೆ ಆ ಟ್ರಸ್ಟ್ ಇನ್ನೂ ಊರ್ಜಿತವಾಗಿರಲಿಲ್ಲ. ಬಂಧುಗಳು ತೋರಿದ ಇಂತಹ ವಿರೋಧದಲ್ಲಿ ಅದೊಂದು ಪ್ರಮುಖ ಸಮಸ್ಯೆಯಾಯಿತು. ಕುಟುಂಬದ ಕೆಲವರು ಈ ಉದ್ದಿಮೆಗಳ ಮುಖ್ಯಸ್ಥರಾಗಿದ್ದು ಅವರಿಗೆ ಮುಂದೇನು ಗತಿ ಎನ್ನಿಸಿತು.

ಯಾವ ನ್ಯಾಯಾಲಯ ಉಯಿಲಿನ ಮೇಲೇರುವ ತಕರಾರುಗಳನ್ನು ಪರಿಹರಿಸಬೇಕು ಎಂಬುದೇ ಒಂದು ಪ್ರಶ್ನೆಯಾಯಿತು. ತನಗೆ ಒಂಭತ್ತು ವರ್ಷವಾಗಿದ್ದಾಗ ಆಲ್ಫ್ರೆಡ್ ಸ್ವೀಡನ್ ದೇಶವನ್ನು ಬಿಟ್ಟು ರಷ್ಯಾಕ್ಕೆ ಹೋಗಿ ನೆಲೆಸಿದ್ದ. ಆಗ ಅವನನ್ನು ಸ್ವೀಡನ್ನಿನ ಪ್ರಜೆ ಎಂದು ನೊಂದಾಯಿಸಿಕೊಳ್ಳಲಾಗಿತ್ತು. ಆದರೆ ನಂತರ ೫೪ ವರ್ಷಗಳ ಕಾಲ ಅವನು ಫ್ರಾನ್ಸ್, ಇಟಲಿ, ಜರ್ಮನಿ, ಮುಂತಾದ ದೇಶಗಳಲ್ಲಿ ನೆಲೆಸಿದ್ದು ಎಲ್ಲಿಯೂ ಪೌರ ಎಂದೆನಿಸಿಕೊಂಡಿರಲಿಲ್ಲ. ಫ್ರಾನ್ಸ್ ದೇಶದಲ್ಲಿ ಅವನು ಅನೇಕ ವರ್ಷಗಳನ್ನು ಕಳೆದಿದ್ದ, ನಿಜ. ಅಲ್ಲಿಯ ನ್ಯಾಯಾಲಯದಲ್ಲಿ ಉಯಿಲಿನ ಚರ್ಚೆ ಆಗಿದ್ದಲ್ಲಿ ಅಲ್ಲಿಯ ತೆರಿಗೆಗಳು ವಿಪರೀತ. ಹೀಗಾಗಿ ಸ್ವೀಡನ್ನಿನ ನ್ಯಾಯಾಲಯವೇ ಅಹವಾಲುಗಳನ್ನು ಕೇಳುವಂತಾಯಿತು.

ಬಹುಮಾನಗಳನ್ನು ಸ್ಥಾಪಿಸುವಲ್ಲಿಯೂ ಅನೇಕ ಸಮಸ್ಯೆಗಳು ತಲೆದೋರಿದವು. ಸ್ವೀಡನ್ನಿನ ಅಕಾಡೆಮಿ ಸಾಹಿತ್ಯ ಬಹುಮಾನವನ್ನು ನಿರ್ಧರಿಸಲು ಮುಂದೆ ಬರಲಿಲ್ಲ. ವಿಜ್ಞಾನ ಅಕಾಡೆಮಿ ಇದೊಂದು ತಲೆನೋವಿನ ಕೆಲಸವೆಂದು ಭಾವಿಸಿತು. ನಾರ್ವೆಯೊಂದೇ ಹುರುಪಿನಿಂದ ಶಾಂತಿ ಬಹುಮಾನವನ್ನು ನೀಡಲು ಮುಂದೆ ಬಂದಿತು.

ಸೋಲ್ಮನ್ ಹೀಗೆ ನ್ಯಾಯಾಲಗಳ ಮೊರೆಹೊಕ್ಕು,  ಸರ್ಕಾರಿ ಮುಖ್ಯಸ್ಥರನ್ನು , ದೇಶಗಳ ಪ್ರಮುಖರುಗಳನ್ನು ಬೇಟಿಮಾಡಿ ಚರ್ಚಿಸುತ್ತಾ  ಒಂದಲ್ಲ ಎರಡಲ್ಲ, ಐದು ವರ್ಷಗಳ ಕಾಲ ಸೆಣಸಾಡಿದ. ಕೊನೆಗೆ ಎಲ್ಲಾ ಅಡಚಣೆಗಳೂ ದೂರವಾಗಿ ೧೯೦೦ ರ ಜೂನ್ ೨೯ರಂದು ರಲ್ಲಿ ನೊಬೆಲ್ ಬಹುಮಾನ ಊರ್ಜಿತವಾಯಿತು. ಮೊಟ್ಟಮೊದಲ (೧೯೦೧ರಲ್ಲಿ ಭೌತಶಾಸ್ತ್ರಕ್ಕೆ) ನೊಬೆಲ್ ಬಹುಮಾನದ ವಿಜೇತನೆಂದರೆ  X-ರೇ ಕಂಡುಹಿಡಿದ ವಿಲ್ಹೆಮ್ ರಾಂಟ್ಜೆನ್ (Wilhelm Rőntgen). “ಸ್ವೀಡನ್ನಿನಲ್ಲಿ ಅತಿ ಚಳಿ, ನನ್ನ ಉಪನ್ಯಾಸಗಳನ್ನು ರದ್ದುಗೊಳಿಸಲಾರೆ”, ಎಂದೆಲ್ಲಾ ನೆವ ನೀಡಿ ಅವನು  ನಿರಾಕರಿಸುವ ಯತ್ನ ಮಾಡಿದ. ಬಹುಮಾನದ ಮಹಿಮೆ ಅವನಿಗೆ ಗೊತ್ತಿರಲಿಲ್ಲ. ಕೊನೆಗೂ ಬಂದು ಸ್ವೀಕರಿಸಿದ.

ಒಂದು ಪಕ್ಷ ಸೋಲ್ಮನ್ ಹಿಂಜರಿದಿದ್ದರೆ ಅಥವಾ ತನ್ನ ಕಾರ್ಯದಲ್ಲಿ ಸೋತಿದ್ದರೆ, ಇಂದು ನಿಜವಾಗಿಯೂ ನೊಬೆಲ್ ಬಹುಮಾನ ಎಂಬುದು ಇರುತ್ತಿತ್ತೇ ಹೇಳುವುದು ಕಷ್ಟ.

೧೯೬೯ರಲ್ಲಿ ಅರ್ಥಶಾಸ್ತ್ರಕ್ಕೆ ಬಹುಮಾನವನ್ನು ಕೊಡುವ ಸಂಪ್ರದಾಯ ಪ್ರಾರಂಭವಾಯಿತು. ಇದನ್ನು ನೊಬೆಲ್ ಜ್ಞಾಪಕಾರ್ಥ ನೀಡಿದರೂ ಇದನ್ನು ನಿರ್ಧರಿಸುವ ಸಂಸ್ಥೆಯೇ ಬೇರೆ. ಇದಕ್ಕೆ ಹಣ ಸ್ವೀಡನ್ನಿನ ಸ್ವೆರಿಜೆಸ್ ರಿಕ್ಸ್ ಬ್ಯಾಂಕ್ (Sveriges Riksbank) ಒದಗಿಸುತ್ತದೆ.

ಅಂದಿನಿಂದ ಇಂದಿನವರೆಗೆ ಬಹುಮಾನದ ವಿತರಣೆ ಅವ್ಯಾಹತವಾಗಿ ನಡೆದಿದೆ. ಮೊದಲು ಇದನ್ನು ಖಂಡಿಸಿದ ರಾಜವಂಶವೇ ಇಂದು ಅತಿ ಹೆಮ್ಮೆಯಿಂದ ವಿತರಣಾ ಸಮಾರಂಭದಲ್ಲಿ ಭಾಗವಹಿಸುತ್ತಿದೆ. ಬಹುಮಾನವನ್ನು ರಾಜನೇ ಸ್ವಹಸ್ತದಿಂದ ನೀಡುತ್ತಿದ್ದಾನೆ. ಬಹುಮಾನ ಪ್ರದಾನ ಸ್ವೀಡನ್ನಿನ ಪ್ರಮುಖ ಕರ್ತವ್ಯಗಳಲ್ಲಿ ಒಂದಾಗಿದೆ. ಡಿಸೆಂಬರ್ ಹತ್ತು ಸ್ಟಾಕ್ ಹೋಮಿನಲ್ಲಿ ಹಬ್ಬದ ವಾತಾವರಣ. ಬೆಳಿಗ್ಗೆ ಬಹುಮಾನ ವಿತರಣೆ, ಸಂಜೆ ಬಹುಮಾನಿತರಿಗೆ ಮತ್ತು ಆಹ್ವಾನಿಗಳಿಗೆ ದೊಡ್ಡ ಭೋಜನಕೂಟ. ಬಹುಮಾನಿತರಿಗೆ ವಸತಿ ನೀಡಲು  ಭವ್ಯ ಗ್ರಾಂಡ್ ಹೊಟೆಲ್  ಸದಾ ಸಿದ್ಧ.


ಸ್ಟಾಕ್ ಹೋಮಿನ ಮಧ್ಯದಲ್ಲಿ ನೊಬೆಲ್ ವಸ್ತುಸಂಗ್ರಹಾಲಯ ತಲೆ ಎತ್ತಿದೆ. ಈ ವರೆಗೂ ಬಹುಮಾನ ಪಡೆದವರ ಬಗ್ಗೆ ಮಾಹಿತಿ, ಅವರ ಫೋಟೋ ಇವೆಲ್ಲಾ ಇಲ್ಲಿ ದೊರಕುತ್ತವೆ. ಭಾರತದ ಅಮರ್ತ್ಯ ಸೆನ್ ಬಳಸಿದ ಬೈಸಿಕಲ್, ಮೇರಿ ಕ್ಯೂರಿ ಉಪಯೋಗಿಸಿದ ತಕ್ಕಡಿ, ಐನ್ ಸ್ಟೈನ್ ಬರೆದ ಪತ್ರ ಮುಂತಾದ ಅನೇಕ ಕುತೂಹಲಕಾರಿ ವಸ್ತುಗಳು ಇಲ್ಲಿವೆ. ಇಲ್ಲಿರುವ ಕೆಫೆ ಬಹು ಪ್ರಸಿದ್ಧ. ಅಲ್ಲಿನ ಖುರ್ಚಿಗಳ ಪೀಠದ ಹಿಂದೆ ನೊಬೆಲ್ ಬಹುಮಾನಿತರು ಸಹಿ ಮಾಡಿರುತ್ತಾರೆ. ಅಲ್ಲಿ ಕಾಫಿಗಾಗಿ ಕುಳಿತರೆ ನೀವು ಯಾರ ಸಹಿಯ ಮೇಲೆ ಕುಳಿತ್ತಿದ್ದೀರೋ!



ಬಹುಮಾನ ವಿತರಣಾ ಸಮಾರಂಭ




ನೊಬೆಲ್ ಪಾರಿತೋಷಕ



ಮೇರಿ ಕ್ಯೂರಿ ಉಪಯೋಗಿಸಿದ ತಕ್ಕಡಿ



ಅಮರ್ತ್ಯ ಸೆನ್ ಅವರ ಬೈಸಿಕಲ್




ಖುರ್ಚಿಯ ಕೆಳಗೆ ಬಹುಮಾನಿತರ ಸಹಿ

# ೧೦. ನೊಬೆಲ್ ಬಹುಮಾನದ ಕೌತುಕಗಳು

೧. ಒಂದು ಕುಟುಂಬದಲ್ಲಿ ಎಷ್ಟು ಜನ ನೊಬೆಲ್ ಬಹುಮಾನಿತರಿದ್ದರೆ ಚೆನ್ನ? ಐದು ಎಂದರೆ ಆಶ್ಚರ್ಯವೇ? ಆ ಕುಟುಂಬ ಮೇರಿ ಕ್ಯೂರಿಯದು. ಆ ಕುಟುಂಬದ ಐದು ಜನ ನಾಲ್ಕು ಬಹುಮಾನಗಳನ್ನು ಹಂಚಿಕೊಂಡಿದ್ದಾರೆ. ಅವೆಂದರೆ ಮೇರಿ ಕ್ಯೂರಿ ಮತ್ತು ಪಿಯರಿ ಕ್ಯೂರಿ (೧೯೦೩, ಭೌತಶಾಸ್ತ್ರ), ಮೇರಿ ಕ್ಯೂರಿ (೧೯೧೧, ರಸಾಯನ ಶಾಸ್ತ್ರ), ಮೊದಲನೆಯ ಮಗಳು ಐರೀನ್ ಮತ್ತು ಅಳಿಯ ಜ್ಯೂಲಿಯಟ್ (೧೯೩೫, ರಸಾಯನ ಶಾಸ್ತ್ರ), ಎರಡನೆ ಅಳಿಯ ಹೆನ್ರಿ ಲಬೌಸಿ (೧೯೬೫, ಶಾಂತಿ).

೨. ನಾಲ್ಕು ಮಂದಿ ಎರಡು ಬಾರಿ ಬಹುಮಾನಗಳನ್ನು ಪಡೆದಿದ್ದಾರೆ - ಮೇರಿ ಕ್ಯೂರಿ (ಭೌತಶಾಸ್ತ್ರ ಮತ್ತು ರಸಾಯನ ಶಾಸ್ತ್ರ), ಜಾನ್ ಬರ್ಡೀನ್ (ಎರಡು ಬಾರಿಯೂ ಭೌತಶಾಸ್ತ್ರ), ಲೀನಸ್ ಪೌಲಿಂಗ್ (ರಸಾಯನ ಶಾಸ್ತ್ರ ಮತ್ತು ಶಾಂತಿ), ಫ್ರೆಡ್ರಿಕ್ ಸ್ಯಾಂಗರ್ (ಎರಡು ಬಾರಿಯೂ ರಸಾಯನ ಶಾಸ್ತ್ರ).

೩. ೧೯೭೯ರಲ್ಲಿ ಮದರ್ ತೆರೇಸಾ ನೊಬೆಲ್ ಬಹುಮಾನ ಪಡೆದ ನಂತರ ಜರಗುವ ಭೋಜನಕೂಟದಲ್ಲಿ ಭಾಗವಹಿಸಲು ನಿರಾಕರಿಸಿ ಅದೊಂದು ದುಂದು ವೆಚ್ಚ ಎಂದರು. ಹೀಗಾಗಿ ಆ ವರ್ಷ ಭೋಜನಕೂಟವನ್ನು ರದ್ದು ಮಾಡಿ ಅದರ ವೆಚ್ಚ ೭೦೦೦ ಡಾಲರುಗಳನ್ನು ದಾನವಾಗಿ ಕೊಡಲಾಯಿತು.

೪. ಬಹುಮಾನ ಪಡೆದವರ ಸರಾಸರಿ ವಯಸ್ಸು ೬೨ ವರ್ಷ. ಅತ್ಯಂತ ವಯಸ್ಸಾದ ವ್ಯಕ್ತಿ ಎಂದರೆ ಜೋಸೆಫ್ ರೋಟ್ ಬ್ಲ್ಯಾಟ್ (೮೭).


೫. ಪ್ರತಿ ಬಹುಮಾನಿತರಿಗೂ ೧೮ ಕ್ಯಾರಟ್ ಚಿನ್ನದ ಪದಕ ನೀಡಲಾಗುತ್ತದೆ. ಬಹುಮಾನದ ಮೊತ್ತ ಆ ವರ್ಷ ಟ್ರಸ್ಟ್ ಗಳಿಸಿದ ಬಡ್ಡಿಯನ್ನು ಅವಲಂಬಿಸಿರುತ್ತದೆ. ಇದನ್ನು ಐದು ಬಹುಮಾನಕ್ಕೂ ಸಮವಾಗಿ ವಿಂಗಡಿಸಲಾಗುತ್ತದೆ. ಯಾವುದೇ ವಿಭಾಗದ ಬಹುಮಾನವನ್ನು ಗರಿಷ್ಠ ಮೂರು ಜನರಿಗೆ ಹಂಚಬಹುದಾಗಿದೆ.

# ೧೧. ಬಹುಮಾನ ಪಡೆದ ಭಾರತೀಯರು

ರವೀಂದ್ರನಾಥ ಠಾಕೂರ್ (ಸಾಹಿತ್ಯ, ೧೯೧೩), ಸಿ ವಿ ರಾಮನ್ (ಭೌತಶಾಸ್ತ್ರ, ೧೯೩೦), ಮದರ್ ತೆರೇಸಾ (ಶಾಂತಿ, ೧೯೭೯), ಅಮರ್ತ್ಯ ಸೇನ್ (ಅರ್ಥಶಾಸ್ತ್ರ, ೧೯೯೮), ಕೈಲಾಶ್ ಸತ್ಯಾರ್ಥಿ (ಶಾಂತಿ, ೨೦೧೪), ಹರ್ ಗೋವಿಂದ ಸಿಂಗ್ ಖೊರಾನಾ (ವೈದ್ಯಶಾಸ್ತ್ರ, ೧೯೬೮), ಸುಬ್ರಹ್ಮಣ್ಯನ್ ಚಂದ್ರ ಶೇಖರ್ (ಭೌತಶಾಸ್ತ್ರ, ೧೯೮೩), ವೆಂಕಟರಾಮನ್ ರಾಧಾಕೃಷ್ಣನ್ (ರಸಾಯನ ಶಾಸ್ತ್ರ, ೨೦೦೯). ಕೊನೆಯ ಮೂವರು ಭಾರತೀಯರಾದರೂ ಅವರು ತಂತಮ್ಮ ಸಂಶೋಧನೆಗಳನ್ನು ವಿದೇಶಗಳಲ್ಲಿ ಕೈಗೊಂಡರು.

ಮಹಾತ್ಮ ಗಾಂಧಿ ಅವರ ಹೆಸರನ್ನು ೧೯೩೭, ೧೯೩೮, ೧೯೩೯, ೧೯೪೭ ಮತ್ತು ೧೯೪೮ರಲ್ಲಿ ಶಾಂತಿ ಬಹುಮಾನಕ್ಕಾಗಿ ಸೂಚಿಸಲಾಗಿತ್ತು. ೧೯೪೮ ಅವರ ಹೆಸರನ್ನು ಸೂಚಿಸುವ ವೇಳೆಗಾಗಲೇ ಅವರ ಹತ್ಯೆಯಾಯಿತು. ಮರಣಾಂತರ ಯಾವುದೇ ವ್ಯಕ್ತಿಗೂ ನೊಬೆಲ್ ಬಹುಮಾನವನ್ನು ನೀಡುವ ಸಂಪ್ರದಾಯವಿಲ್ಲ. ಹೀಗಾಗಿ ಅವರಿಗೆ ಈ ಬಹುಮಾನವನ್ನು ಕೊನೆಗೂ

ನೀಡಲಿಲ್ಲ. ೨೦೦೬ರಲ್ಲಿ ನೊಬೆಲ್ ಪ್ರತಿಷ್ಠಾನ ಒಂದು ಹೇಳಿಕೆ ನೀಡಿರುವುದು ಗಮನಾರ್ಹ. "ನಮ್ಮ ೧೦೬ ವರ್ಷಗಳ ಚರಿತ್ರೆಯಲ್ಲಿ ಮಹಾತ್ಮ ಗಾಂಧಿ ಅವರಿಗೆ ನೊಬೆಲ್ ಶಾಂತಿ ಬಹುಮಾನ ನೀಡದೆ ಇರುವುದು ಖಂಡಿತವಾಗಿಯೂ ನಮ್ಮ ದೊಡ್ಡ ಲೋಪ. ನೋಬೆಲ್ ಶಾಂತಿ ಬಹುಮಾನವಿಲ್ಲದೇ ಗಾಂಧಿಯವರ ಘನತೆ ಕಡಿಮೆಯಾಗುವುದಿಲ್ಲ. ಆದರೆ ಅವರಿಗೆ ಬಹುಮಾನ ನೀಡದೆ ನೊಬೆಲ್ ಪ್ರತಿಷ್ಠಾನದ ತನ್ನ ಘನತೆಯನ್ನು ಕಾಪಾಡಿಕೊಳ್ಳುವುದೇ ಎಂಬುದು ಪ್ರಶ್ನಾರ್ಥಕ. "



ಸ್ವೀಡನ್ನಿನ ಮಲಾರೆನ್ ಸರೋವರ. ಇಲ್ಲಿ ಕಾಣುವ ದೋಣಿಯಲ್ಲಿ ಅಲ್ಫ್ರೆಡ್ ಅನೇಕ ಪ್ರಯೋಗಗಳನ್ನು ನಡೆಸಿದ.

## ೧೭. ನಡೆದು ಬಂದ ದಾರಿ

| | |
|---|---|
| ೧೮೩೩ | ಸ್ವೀಡನ್ನಿನ ಸ್ಟಾಕ್ ಹೋಮಿನಲ್ಲಿ ಜನನ, ಅದೇ ವರ್ಷ ತಂದೆಯ ಉದ್ದಿಮೆ ದಿವಾಳಿ. ಹಿಂದೆ ೧೮೨೯ರಲ್ಲಿ ರಾಬರ್ಟ್ ಜನನ ಮತ್ತು ೧೮೩೧ರಲ್ಲಿ ಲುಡ್ವಿಗ್ ಜನನ. |
| ೧೮೩೭ | ಕುಟುಂಬವನ್ನು ಹಿಂದೆ ಬಿಟ್ಟು ತಂದೆ ಇಮ್ಯಾನ್ಯುಯೆಲ್ ಫಿನ್ ಲೆಂಡ್ ಮತ್ತು ಅಲ್ಲಿಂದ ರಷ್ಯಾಕ್ಕೆ ಹೊರೆಟದ್ದು. |
| ೧೮೪೨ | ಕುಟುಂಬ ರಷ್ಯಾದ ಸೈಂಟ್ ಪೀಟರ್ಸ್ ಬರ್ಗಿಗೆ ಬಂದು ತಂದೆಯೊಡಗೂಡಿದ್ದು. |
| ೧೮೫೦ - ೫೨ | ಪ್ಯಾರಿಸ್, ಇಟಲಿ, ಜರ್ಮನಿ ಮತ್ತು ಅಮೆರಿಕಾಗಳಿಗೆ ಆಲ್ಫ್ರೆಡ್ಡನ ಜ್ಞಾನಯಾತ್ರೆ |
| ೧೮೫೩ - ೫೬ | ನೊಬೆಲ್ ಕುಟುಂಬದ ಉದ್ದಿಮೆ  ಮೊದಲು ಉಚ್ಛ್ರಾಯ ಸ್ಥಿತಿಯಲ್ಲಿದ್ದು ನಂತರ ದಿವಾಳಿಯಾಗಿದ್ದು.<br>ಹೊಸ ಉತ್ಪನ್ನಗಳನ್ನು ಹುಡುಕುತ್ತಿದ್ದ ಆಲ್ಫ್ರೆಡ್ ನೊಬೆಲ್ ತನ್ನ ರಸಾಯನ ಶಾಸ್ತ್ರದ ಉಪಾಧ್ಯಾಯರಿಂದ ನೈಟ್ರೋಗ್ಲಿಸೆರಿನ್ ಬಗ್ಗೆ ಕಲಿತದ್ದು. |
| ೧೮೬೨ | ನೈಟ್ರೋಗ್ಲಿಸೆರಿನ್ ಕುರಿತು ಆಲ್ಫ್ರೆಡ್ಡನ ಸಂಶೋಧನೆಗಳ ಆರಂಭ. |
| ೧೮೬೩ | ನೈಟ್ರೋಗ್ಲಿಸೆರಿನ್ನಿಗೆ ಪೇಟೆಂಟ್ ಪ್ರಾಪ್ತಿ, ಮುಂದೆ ಡೆಟೊನೇಟಿಂಗ್ ಕ್ಯಾಪ್ ವೃದ್ಧಿ, ಸ್ಟಾಕ್ ಹೋಮಿಗೆ ತೆರಳಿ ಅಲ್ಲಿ ಸಂಶೋಧನೆಗಳ ಮುಂದುವರಿಕೆ. |
| ೧೮೬೪ | ಕಾರ್ಖಾನೆಯಲ್ಲಿ ಉದ್ಭವಿಸಿದ ಸ್ಫೋಟದಲ್ಲಿ ತಮ್ಮ ಎಮಿಲನ ನಿಧನ. |
| ೧೮೬೫ | ಜರ್ಮನಿಯ ಹ್ಯಾಂಬರ್ಗಿನ ಬಳಿ ಕ್ರುಮೆಲ್ ಎಂಬಲ್ಲಿ ಕಾರ್ಖಾನೆಯ ಸ್ಥಾಪನೆ. |
| ೧೮೬೬ | ಅಮೆರಿಕಾದಲ್ಲಿ ಕಾರ್ಖಾನೆಯ ಸ್ಥಾಪನೆ. ಕ್ರುಮೆಲ್ ಕಾರ್ಖಾನೆಯಲ್ಲಿ ಸ್ಫೋಟ, ಡೈನಮೈಟ್ ಜನನ. |
| ೧೮೬೭ | ಡೈನಮೈಟಿಗೆ ಪೇಟೆಂಟ್ ಪ್ರಾಪ್ತಿ. |
| ೧೮೭೧ | ಸ್ಕಾಟ್ಲೆಂಡಿನಲ್ಲಿ ಕಾರ್ಖಾನೆಯ ಸ್ಥಾಪನೆ. |
| ೧೮೭೨ | ತಂದೆ ಇಮ್ಯಾನ್ಯುಯೆಲ್ಲನ ನಿಧನ. |
| ೧೮೭೩ | ೪೦ ವರ್ಷದ ಸಿರಿವಂತ ಆಲ್ಫ್ರೆಡ್ ಪ್ಯಾರಿಸ್ಸಿಗೆ ಬಂದು ನೆಲೆಸಿದ. |
| ೧೮೭೫ | ಫ್ರಾನ್ಸಿನಲ್ಲಿ ಜಿಲಾಟಿನ್ ಶೊಧನೆ. |
| ೧೮೭೬ | ಜರ್ಮನಿಯಲ್ಲಿ ದೊಡ್ಡ ಉದ್ದಿಮೆಯ ಸ್ಥಾಪನೆ. ಬೆರ್ಥಾ ವಾನ್ ಸಟ್ನೆರ್ ಭೇಟಿ |
| ೧೮೮೭ | ಬ್ಯಾಲಿಸ್ಟೈಟಿಗೆ ಪೇಟೆಂಟ್ ಪ್ರಾಪ್ತಿ. |
| ೧೮೮೮ | ಲುಡ್ವಿಗ್ ನಿಧನ |

| | |
|---|---|
| ೧೮೮೯ | ತಾಯಿ ಆಂಡ್ರಿಯೆಟ್ಟಳ ನಿಧನ |
| ೧೮೯೧ | ಪ್ಯಾರಿಸ್ ತೊರೆದು ಇಟಲಿಯ ಸ್ಯಾನ್ ರೆಮೋಗೆ ಪ್ರಯಾಣ. |
| ೧೮೯೩ | ರಗ್ನಾರ್ ಸೋಲ್ ಮನ್ ನೇಮಕ |
| ೧೮೯೪ | ಸ್ಟಾಕ್ ಹೋಮ್ ಬಳಿಯ ಬೊಫೋರ್ಸ್ ಖರೀದಿ. |
| ೧೮೯೫ | ಪ್ಯಾರಿಸ್ಸಿನಲ್ಲಿ ತನ್ನ ಮೂರನೆಯ ಹಾಗೂ ಕೊನೆಯ ಉಯಿಲನ್ನು ಬರೆದದ್ದು |
| ೧೮೯೬ | ಸ್ಯಾನ್ ರೆಮೋ ನಲ್ಲಿ ಡಿಸೆಂಬರ್ ೧೦ರಂದು ನಿಧನ. ಮುಂದೆ ೧೮೯೬ರಲ್ಲಿಯೇ ರಾಬರ್ಟನ ನಿಧನ. |

## ೧೩. ಗ್ರಂಥ ಋಣ


೧. ಕೆನೆ ಫ್ಯಾಂಟ್, ಅಲ್ಫ್ರೆಡ್ ನೋಬೆಲ್, ಎ ಬೈಯಾಗ್ರಫಿ, ಟ್ರಾನ್ಸ್ಲೇಟೆಡ್ ಬೈ ಮ್ಯಾರಿಯಾನ್ ರೂತ್, ಆರ್ಕೇಡ್ ಪಬ್ಲಿಷಿಂಗ್, ನ್ಯೂಯಾರ್ಕ್, ೧೯೯೧.

೨. ರಗ್ನಾರ್ ಸೋಲ್ಮನ್, ದಿ ಲೆಗಸಿ ಆಫ್ ಅಲ್ಫ್ರೆಡ್ ನೋಬೆಲ್,(ಟ್ರಾನ್ಸ್ಲೇಟೆಡ್ ಬೈ ಎಲ್ಫೆತ್ ಹಾರ್ಲಿ ಷೂಬರ್ಟ್), ದಿ ಬಾಡ್ಲಿ ಹೆಡ್, ೧೯೮೩.

೩. ಸವಾಂಟ್ ಲಿಂಡ್ಕ್ವಿಸ್ಟ್, ಎ ಟ್ರಿಬ್ಯೂಟ್ ಟು ದಿ ಮೆಮೊರಿ ಆಫ್ ಅಲ್ಫ್ರೆಡ್ ನೊಬೆಲ್, ದಿ ರಾಯಲ್ ಸ್ವೀಡಿಷ್ ಅಕಾಡೆಮಿ ಆಫ್ ಎಂಜಿನಿಯರಿಂಗ್ ಸೈನ್ಸೆಸ್ ಅಂಡ್ ಸವಾಂಟ್ ಲಿಂಡ್ಕ್ವಿಸ್ಟ್, ೨೦೦೧.